ಕರ್ನಾಟಕ ವಿಧಾನಸಭೆ

ಸೋಮವಾರ 9ನೇ ಫೆಬ್ರವರಿ 2004ರಂದು
ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 11.20 ಗಂಟೆಗೆ ಸಮಾವೇಶಗೊಂಡಿತು
ಅಧ್ಯಕ್ಷರು (ಶ್ರೀ ಎಂ. ವಿ. ವೆಂಕಟಪ್ಪ)
ಅವರು ಪೀಠವನ್ನು ಅಲಂಕರಿಸಿದ್ದರು

ಅಧ್ಯಕ್ಷರು:- ಇಂದಿನ ಕಾರ್ಯಕಲಾಪಗಳ ಪಟ್ಟಿ ಪ್ರಕಾರ ಸಂತಾಪ ಸೂಚನೆ.

1. ಸಂತಾಪ ಸೂಚನೆ

ವಿಧಾನ ಸಭೆಯ ಮಾಜಿ ಸದಸ್ಯರುಗಳಾಗಿದ್ದ ಶ್ರೀಯುತರುಗಳಾದ ಕೆ.ಎನ್. ನಾಗೇಗೌಡ, ಎಂ.ಡಿ. ನಂಜುಂಡಸ್ವಾಮಿ, ಎಸ್. ಮುನಿರಾಜು ಹಾಗೂ ವಾದಿರಾಜ್ ಅವರುಗಳು ನಿಧನರಾಗಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸುತ್ತಿದ್ದೇನೆ.

1. ಶ್ರೀ ಕೆ.ಎನ್. ನಾಗೇಗೌಡ

ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಕೆ.ಎನ್. ನಾಗೇಗೌಡ ಅವರು ದಿನಂಕ 1ನೇ ಫೆಬ್ರವರಿ, 1944ರಂದು ಜನಿಸಿದ್ದರು. ಬಿ.ಇ. ಪದವೀಧರರಾದ ಶ್ರೀಯುತರು ವೃತ್ತಿಯಲ್ಲಿ ಕೃಷಿಕರಾಗಿದ್ದರು. ಸಮಾಜ ಸೇವಕರಾಗಿದ್ದ ಶ್ರೀಯುತರು ಸಕ್ರಿಯ ರಾಜಕಾರಣಿಯಾಗಿದ್ದರು. ಮಳವಳ್ಳಿಯ ಶಾಂತಿ ಕಲಾ ಮತ್ತು ವಿಜ್ಞಾನ ಕಾಲೇಜಿನ ಸ್ಥಾಪಕ ಕಾರ್ಯದರ್ಶಿಯಾಗಿ, ಮಂಡ್ಯ ಜಿಲ್ಲ ತಯಾರಕ ಸಂಘದ ಅಧ್ಯಕ್ಷರಾಗಿ, ಮಂಡ್ಯ ಜಿಲ್ಲಾ ಕಾಂಗ್ರೆಸ್ (ಐ) ಪಕ್ಷದ ಅಧ್ಯಕ್ಷರಾಗಿ, ಮಂಡ್ಯದ ಮೈಶುಗರ್ ಕಂಪನಿಯ ಅಧ್ಯಕ್ಷರಾಗಿ, ಮೈಸೂರು ಅಸಿಟೇಟ್ ಅಂಡ್ ಕೆಮಿಕಲ್ಸ್ ನಿಗಮ ನಿಯಮಿತದ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು. 1982 ರಿಂದ ಸತತ 12 ವರ್ಷ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಯುತರು ವಿಧಾನ ಪರಿಷತ್ತಿನ ಕಾಂಗ್ರೆಸ್ (ಐ) ಪಕ್ಷದ ಮುಖ್ಯ ಸಚೇತಕರಾಗಿ ಸೇವೆ ಸಲ್ಲಿಸಿದ್ದರು. 1992 ರಿಂದ 1994ರ ಅವಧಿಯಲ್ಲಿ ಶ್ರೀ ಎಂ. ವೀರಪ್ಪ ಮೊಯಿಲಿ ಯವರ ಸಚಿವ ಸಂಪುಟದಲ್ಲಿ ಪಶುಸಂಗೋಪನಾ ರಾಜ್ಯ ಸಚಿವರಾಗಿದ್ದರು. 1994ನೇ ಹತ್ತನೇ ವಿಧಾನ ಸಭೆಗೆ ಜನತಾದಳದಿಂದ ಆಯ್ಕೆಯಾಗಿ, 1996ರಲ್ಲಿ ಶ್ರೀ ಜೆ.ಹೆಚ್. ಪಟೇಲ್ ಅವರ ಮಂತ್ರಿಮಂಡಲದಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 5ನೇ ಫೆಬ್ರವರಿ, 2004 ರಂದು ನಿಧನ ಹೊಂದಿದರು.

2. ಪ್ರೊ: ಎಂ.ಡಿ. ನಂಜುಂಡ ಸ್ವಾಮಿ

ವಿಧಾನ ಸಭೆಯ ಮಾಜಿ ಸದಸ್ಯರಾದ ಪ್ರೊ: ಎಂ.ಡಿ. ನಂಜುಂಡ ಸ್ವಾಮಿ ಅವರು ದಿನಾಂಕ 2ನೇ ಮೇ, 1935ರಲ್ಲಿ ಮೈಸೂರಿನಲ್ಲಿ ಜನಿಸಿದ್ದರು. ಕಾನೂನಿನಲ್ಲಿ ಸ್ನಾತಕೋತ್ತರ ಪದವೀಧರರಾದ ಶ್ರೀಯುತರು ರಾಕ್‌ಫೆಲರ್ ವಿದ್ವಾಂಸರಾಗಿದ್ದರು. ಪಶ್ಚಿಮ ಜರ್ಮನಿಯ ಶಿಕ್ಷಣ ಸಚಿವಾಲಯದ ಡಾಕ್ಟರ್ ಅಂಡ್ ಸ್ಕಾಲರಾದ ಶ್ರೀಯುತರು ವೃತ್ತಿಯಲ್ಲಿ ಕೃಷಿಕರು ಹಾಗೂ ಕಾನೂನಿನಲ್ಲಿ ಪ್ರಾಧ್ಯಾಪಕರಾಗಿದ್ದರು. ಆತ್ಮಾಭಿಮಾನ ಜಾತಿ ವಿರುದ್ಧ ಅಂದೋಲನ, ಸಾಮಾಜಿಕ ಆಂದೋಲನ ಹಾಗೂ ಕೃಷಿ ಆಂದೋಲನಗಳಲ್ಲಿ ತುಂಬಾ ಆಸಕ್ತಿಯುಳ್ಳವರಾಗಿದ್ದರು. 1990ನೇ ಮಾರ್ಚ್ ಉಪಚುನಾವಣೆಯಲ್ಲಿ ಧಾರವಾಡ (ಗ್ರಾಮಾಂತರ) ಕ್ಷೇತ್ರದಿಂದ ಒಂಭತ್ತನೇ ವಿಧಾನ ಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 3ನೇ ಫೆಬ್ರವರಿ, 2004 ರಂದು ನಿಧನ ಹೊಂದಿದರು.

3. ಶ್ರೀ ಎಸ್. ಮುನಿರಾಜು

ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಎಸ್. ಮುನಿರಾಜುರವರು 1925ರಲ್ಲಿ ಜನಿಸಿದ್ದರು. ಶ್ರೀಯುತರು ಕಾನೂನು ಪದವೀಧರರಾಗಿದ್ದು, ಮೈಸೂರು ಪ್ರದೇಶ ಕಾಂಗ್ರೆಸ್‌ನ ಸದಸ್ಯರಾಗಿ ಚಿಕ್ಕಬಳ್ಳಾಪುರ ತಾಲ್ಲೂಕು ನಗರಸಭೆಯ ಉಪಾಧ್ಯಕ್ಷರಾಗಿಯೂ ಹಾಗೂ ಕೇಂದ್ರ ರೇಷ್ಮೆ ಮಂಡಳಿ, ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರು 2ನೇ ಮತ್ತು 6ನೇ ವಿಧಾನಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ 7ನೇ ಫೆಬ್ರವರಿ 2004 ರಂದು ನಿಧನ ಹೊಂದಿದ್ದಾರೆ.

4. ಶ್ರೀ ವಾದಿರಾಜ್

ಕನ್ನಡ ಚಿತ್ರರಂಗದ ಹಿರಿಯ ನಿರ್ದೇಶಕ ಹಾಗೂ ಹಾಸ್ಯನಟ ವಾದಿರಾಜ್ ಅವರು 3ನೇ ಜನವರಿ 1927ರಲ್ಲಿ ಉಡುಪಿ ಸಮೀಪದ ಪಣಿಯಾರುನಲ್ಲಿ ಜನಿಸಿದ್ದರು. ಶ್ರೀಯುತರು ಬಾಲ್ಯದಲ್ಲಿ ಗಾಂಧಿ ವಿಚಾರಧಾರೆಗಳಿಂದ ಪ್ರಭಾವಿತರಾಗಿ ಸ್ವಾತಂತ್ರ ಹೋರಾಟದಲ್ಲಿ ಭಾಗವಹಿಸಿ ಮಹಾತ್ಮಾಗಾಂಧಿ ಅವರ ಜೊತೆ ಸಂಪರ್ಕ ಬೆಳೆಸಿದ್ದರು. ಮಾದ್ರಾಸಿನ ಪ್ರಚಾರ ಸಭಾದಲ್ಲಿ ಗುಮಾಸ್ತರಾಗಿ ಕೆಲಸಕ್ಕೆ ಸೇರಿಕೊಂಡರು. "ತಮ್ಮ ವಿಚಿತ್ರ ದೈಹಿಕ ನಿಲುವಿಗಾಗಿ ನಟರಾದರು." ಅವರು ನಿರ್ಮಿಸಿದ ನಾಂದಿ, ನಂದಾದೀಪ ಹಾಗೂ ನಮ್ಮ ಮಕ್ಕಳು ಚಿತ್ರಗಳು ರಾಷ್ಟ್ರ ಮಟ್ಟದಲ್ಲಿ ಮನ್ನಣೆಗಳಿಸಿವೆ. ಅವರು ನಿರ್ದೇಶಿಸಿದ ಚಿತ್ರಗಳಿಗೆ ಸ್ವರ್ಣಕಮಲ ಪ್ರಶಸ್ತಿ ದೊರೆಕಿದ್ದು ಹಾಗೂ ಅವುಗಳು ಅಂತರಾಷ್ಟ್ರೀಯ ಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡಿವೆ. 2003ನೇ ಸಾಲಿನ ರಾಜ್ಯ ಚಲನಚಿತ್ರ ಆಯ್ಕೆ ಸಮಿತಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಅವರಿಗೆ 1998–99ನೇ ಸಾಲಿನ ರಾಜ್‌ಕುಮಾರ್ ಪ್ರಶಸ್ತಿಯೂ ದೊರಕಿರುತ್ತದೆ.

ಶ್ರೀಯುತರು ದಿನಾಂಕ 6ನೇ ಫೆಬ್ರವರಿ 2004 ರಂದು ನಿಧನ ಹೊಂದಿದರು.

+ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):- ಮಾನ್ಯ ಅಧ್ಯಕ್ಷರೆ, ಇಂದಿನ ದಿವಸ ತಾವೇನು ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ, ಅದಕ್ಕೆ ನಾನೂ ಕೂಡ ಬೆಂಬಲವನ್ನು ಸೂಚಿಸುತ್ತಾ ಶ್ರೀಮಾನ್ ಕೆ.ಎನ್.ನಾಗೇಗೌಡರು, ಪ್ರೊ: ಎಂ.ಡಿ.ನಂಜುಂಡಸ್ವಾಮಿಯವರು, ಎಸ್.ಮುನಿರಾಜು ಅವರು, ಹಾಗೂ ಚಿತ್ರನಟರಾದ ಶ್ರೀಮಾನ್ ವಾದಿರಾಜ್‌ರವರು ಈ ನಾಲ್ಕು ಜನರನ್ನು 3,5,6 ಮತ್ತು 7ನೇ ತಾರೀಖು ಹೆಚ್ಚು ಕಡಿಮೆ ಒಂದು ವಾರದಲ್ಲಿಯೇ ನಾವು ಕಳೆದುಕೊಂಡಿದ್ದೇವೆ. ಅದರಲ್ಲೂ ವಿಶೇಷವಾಗಿ ರಾಜಕಾರಣದಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸಿದಂಥ ನಾಗೇಗೌಡರು, ನಂಜುಂಡಸ್ವಾಮಿಯವರು, ಮತ್ತು ಮುನಿರಾಜು ಅವರು, ಚಿತ್ರರಂಗದಲ್ಲಿ ಹಿರಿಯ ನಿರ್ದೇಶಕರಾಗಿ ವಾದಿರಾಜ್ ಅವರು, ಇವರೆಲ್ಲರ ಪಾತ್ರ ಕೂಡ ಆ ಕ್ಷೇತ್ರದಲ್ಲಿ ಬಹಳ ಮಹತ್ವದ್ದು. ವಿಶೇಷವಾಗಿ ನಾಗೇಗೌಡರು ನಮ್ಮ ಜೊತೆಯಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಕೆಲಸ ಮಾಡತಕ್ಕಂಥ ಒಂದು ಅವಕಾಶ ನಮಗೆ ಸಿಕ್ಕಿತ್ತು. ವಿಶೇಷವಾಗಿ ಅವರು ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾಗಿ, ಮಂಡ್ಯ ಜಿಲ್ಲೆಯ ಅಧ್ಯಕ್ಷರಾಗಿ ಕೆಲಸವನ್ನು ಮಾಡಿದ್ದರು. ಆದಾದನಂತರ ಸುಮಾರು 12 ವರ್ಷಗಳ ಕಾಲ ಅವರು ವಿಧಾನಪರಿಷತ್ತಿನಲ್ಲಿ ಕೆಲಸವನ್ನು ಮಾಡಿದ್ದರು. ಮತ್ತು ಮುಂದೆ ಅವರು ಕಿರುಗಾವಲು ಕ್ಷೇತ್ರದಿಂದ ಚುನಾಯಿತರಾಗಿ ಜೆ.ಹೆಚ್. ಪಟೇಲ್‌ರವರ ಕ್ಯಾಬಿನೆಟ್‌ನಲ್ಲಿ ನೀರಾವರಿ ಸಚಿವರಾಗಿ ಕೆಲಸವನ್ನು ಮಾಡಿದ್ದಾರೆ. ಹೀಗೆ ಅನೇಕ ಹುದ್ದೆಗಳನ್ನು ಅವರು ಅಲಂಕರಿಸಿದ್ದರು. ಅದರಲ್ಲೂ ಅವರು ವಿಶೇಷವಾಗಿ ಕಾಂಗ್ರೆಸ್ ಪಕ್ಷದ ಮುಖಂಡರಾಗಿ 10–15 ವರ್ಷ ಸಾಕಷ್ಟು ಅವರು ಚಿರಪರಿಚಿತರಾಗಿ ಉಳಿದಿದ್ದರು. ಆದರೆ ತದನಂತರ ಅವರು

(+ ಈ ಚಿಹ್ನೆಯುಳ್ಳ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಜನತಾ ದಳ ಪಕ್ಷಕ್ಕೆ ಹೋಗಿ ಆಮೇಲೆ ಅಲ್ಲೂ ಕೂಡ ಆರಿಸಿ ಬಂದು ಅವರು ನೀರಾವರಿ ಸಚಿವರಾಗಿದ್ದರು, ನಾಗೇಗೌಡರು ನಿಜವಾಗಿಯೂ ಒಬ್ಬ ಹಠವಾದಿ ಮನುಷ್ಯ ಯಾವಾಗಲೂ ಕೂಡ ಅವರ ಮನಸ್ಸಿನಲ್ಲಿ ಏನು ಬರುತ್ತದೋ, ಅದನ್ನು ಸಾಧಿಸಬೇಕೆಂದು ಹೇಳಿ ಪ್ರಯತ್ನ ಮಾಡತಕ್ಕಂಥ ಒಬ್ಬ ಪ್ರಯತ್ನಶೀಲ ವ್ಯಕ್ತಿ. ಅವರು ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಯವರ ಜಿಲ್ಲೆಯವರಾದ ಕಾರಣ ಅವರ ಜೊತೆಯಲ್ಲಿ ಸಾಕಷ್ಟು ಸಂಬಂಧವನ್ನು ಬೆಳೆಸಿಕೊಂಡಿದ್ದರು. ಮತ್ತು ವಿಶೇಷವಾಗಿ 1970–71ರಲ್ಲಿ ಯಾವಾಗ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಕೆಲಸವನ್ನು ಮಾಡುತ್ತಿದ್ದರು, ನಮ್ಮೆಲ್ಲರ ಭಾವನೆ ಏನೆಂದರೆ ಏನು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೋ ಬಹುಶಃ ಹೆಚ್ಚು ಕಡಿಮೆ ಆ ವಿಚಾರಗಳನ್ನೇ ನಾಗೇಗೌಡರು ಪ್ರತಿಪಾದನೆ ಮಾಡುತ್ತಾರೆನ್ನತಕ್ಕಂಥ ಭಾವನೆ ನಮ್ಮ ಕಾಂಗ್ರೆಸ್ ವಲಯದಲ್ಲಿ ಮೂಡಿತ್ತು. ಕೊನೆಗೆ ಅವರು ನಮ್ಮ ಜೊತೆಯಲ್ಲಿ 1978ರ ತನಕ ಇದ್ದು ಕೊನೆಗೆ ರೆಡ್ಡಿ ಕಾಂಗ್ರೆಸ್‌ಗೆ ಸೇರಿ ಕಾಂಗ್ರೆಸ್ ಪಕ್ಷದಲ್ಲಿ ಒಡಕಾದ ಮೇಲೆ ಪುನಃ ಅವರು ಆ ಕಡೆ ರೆಡ್ಡಿ ಕಾಂಗ್ರೆಸ್‌ಗೆ ಹೋದಾಗಲೂ ಕೂಡ ಅವರ ಮನಸ್ಸು ಇಂದಿರಾಗಾಂಧಿ ಕಾಂಗ್ರೆಸ್ ಜೊತೆಯಲ್ಲೇ ಇತ್ತು. ಆದರೂ ಕೂಡ ಕಾರಣಾಂತರಗಳಿಂದ ರಾಜ್ಯಮಟ್ಟದಲ್ಲಿ ಪಕ್ಷದಲ್ಲಿ ಒಡಕಾದಾಗ ಅವರು ತಮ್ಮ ಜಿಲ್ಲೆಯ ದೃಷ್ಟಿಯಿಂದ ಆ ನಿಲುವನ್ನು ತೆಗೆದುಕೊಂಡರು. ಆದರೆ ಪುನಃ 1980 ರಲ್ಲಿ ಅವರು ಕಾಂಗ್ರೆಸ್ ಪಕ್ಷಕ್ಕೆ ಮರಳಿ ಬರತಕ್ಕಂಥದ್ದು ಆಯಿತು. 1980 ರಿಂದ ಸತತವಾಗಿ ಅವರು ಪುನಃ ಕಾಂಗ್ರೆಸ್ ಪಕ್ಷದಲ್ಲಿ ತನ್ನ ವರ್ಚಸ್ಸನ್ನು ಇಟ್ಟುಕೊಂಡು ಕೆಲಸವನ್ನು ಮಾಡುತ್ತಿದ್ದ ಒಬ್ಬ ವ್ಯಕ್ತಿ. ತದನಂತರ ಪುನಃ ಕೆಲವು ಭಿನ್ನಾಭಿಪ್ರಾಯಗಳು ಬಂದಮೇಲೆ ಅವರು ಜನತಾ ದಳ ಪಕ್ಷಕ್ಕೆ ಸೇರಿ ಜೆ.ಹೆಚ್. ಪಟೇಲರವರ ನೇತೃತ್ವದಲ್ಲಿ ನೀರಾವರಿ ಸಚಿವರಾಗಿ ಕೆಲಸ ಮಾಡತಕ್ಕಂಥ ಅವಕಾಶ ಕೂಡ ಅವರಿಗೆ ಸಿಕ್ಕಿತು. ಮತ್ತು ಬಹಳ ಸಮರ್ಥವಾಗಿ ಅವರು ಆ ಕೆಲಸವನ್ನು ಮಾಡಿದರು. ಇತ್ತೀಚೆಗೆ ಅವರು AIPJD ಯ ಅಧ್ಯಕ್ಷರಾಗಿ ಆಯ್ಕೆಯಾಗಿ ಅವರು ಕೆಲಸವನ್ನು ಮಾಡಿದ್ದಾರೆ. ಬಹುಶಃ ಅವರ ವಿಚಾರವೇನೆಂದರೆ ಜನತಾ ದಳ(ಎಸ್) ಮತ್ತು AIPJD ಯಲ್ಲಿ ಇರುವ ವ್ಯತ್ಯಾಸವನ್ನು ಅವರು ಸ್ಪಷ್ಟವಾಗಿ ಅವರ ಕಾರ್ಯಕರ್ತರ ಮುಂದಿಟ್ಟು ಶ್ರೀಮಾನ್ ದಿವಂಗತ ರಾಮಕೃಷ್ಣ ಹೆಗಡೆಯವರ ನೇತೃತ್ವದಲ್ಲಿ ನಾವು ಮುಂದುವರಿಯುಬೇಕೆನ್ನುವ ಭಾವನೆಯನ್ನು ಇಟ್ಟಕೊಂಡಂಥ ಮತ್ತು ಅವರ ಒಂದು ನೇತೃತ್ವದಲ್ಲಿ ನಿಷ್ಟೆಯನ್ನು ಇಡತಕ್ಕಂಥ ಒಬ್ಬ ವ್ಯಕ್ತಿಯಾಗಿದ್ದರು. ಅಂಥ ಒಬ್ಬ ವ್ಯಕ್ತಿಯನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ಅವರ ವಿಶೇಷವಾದ ಹವ್ಯಾಸ ಏನೆಂದರೆ ಹಳ್ಳಿಗಾಡಿನಲ್ಲಿ ವಿದ್ಯಾಭ್ಯಾಸ ಮಾಡುವುದಕ್ಕೆ ಅನುಕೂಲವನ್ನು ಮಾಡಿಕೊಡಬೇಕೆಂದು ಹೇಳಿ ಒಂದು ಸಂಸ್ಥೆಯನ್ನು ಕೂಡ ಅವರು ಪ್ರಾರಂಭ ಮಾಡಿದ್ದರು. ಅದರಲ್ಲಿ ವಿಶೇಷವಾಗಿ ಡಿಗ್ರಿ ಕಾಲೇಜು, ಹೈಸ್ಕೂಲ್, ಜೂನಿಯರ್ ಕಾಲೇಜು ಇವೆಲ್ಲವನ್ನೂ ಕೂಡ ಪ್ರಾರಂಭ ಮಾಡಿ ಆ ಭಾಗದ ವಿಶೇಷವಾಗಿ ಮಳವಳ್ಳಿ ತಾಲ್ಲೂಕಿನ ಭಾಗದ ಜನರಿಗೆ ಮತ್ತು ಮದ್ದೂರು ಭಾಗದ ವಿದ್ಯಾರ್ಥಿಗಳಿಗೆ ಅನುಕೂಲವನ್ನು ಮಾಡಿಕೊಡಬೇಕೆಂದು ಹೇಳಿ ಆ ಒಂದು ವಿದ್ಯಾಸಂಸ್ಥೆಯನ್ನು ಕೂಡ ಅವರು ಪ್ರಾರಂಭ ಮಾಡಿದ್ದರು. ಹೀಗೆ ವಿವಿಧ ಕ್ಷೇತ್ರದಲ್ಲಿ ಕೆಲಸವನ್ನು ಮಾಡಿದಂಥ ಒಬ್ಬ ವ್ಯಕ್ತಿ ಇವತ್ತು ನಮ್ಮನ್ನು ಅಗಲಿ ಹೋಗಿದ್ದಾರೆ. ಮತ್ತು ಇದು ಅಕಾಲಿಕ ಆಕಸ್ಮಿಕ ಮರಣ. ಏಕೆಂದರೆ ಅವರೇನು 80–90 ವರ್ಷ ಆಗಿ ಅಗಲಿ ಹೋಗಿಲ್ಲ. ಆದರೆ ಬಹಳ ಚಿಕ್ಕ ವಯಸ್ಸಿನಲ್ಲೇ ಸುಮಾರು 59 ವರ್ಷವೆಂದರೆ ಇದೇನೂ ಈ ಕಾಲದಲ್ಲಿ ಹೆಚ್ಚಿನ ವಯಸ್ಸಲ್ಲ. ಬಹುಶಃ ಏನು ಕೆಲಸದ ಒತ್ತಡವೋ ಅಥವಾ ಪಕ್ಷದಲ್ಲಿ ನಡೆದಂಥ ಈ ಗೊಂದಲದ

ವಾತಾವರಣವೋ ಯಾವ ರೀತಿಯಾಗಿ ಅವರ ಮನಸ್ಸಿನ ಮೇಲೆ ಪರಿಣಾಮವಾಯಿತೋ ಅನ್ನತಕ್ಕಂಥದ್ದು ನಮಗಂತೂ ಗೊತ್ತಾಗಲಿಲ್ಲ. ಆದರೆ ಇಂಥ ಒಂದು ಅಕಾಲಿಕ ಮರಣ ಇವತ್ತು ಅವರಿಗೆ ಬಂತು ಮತ್ತು ಅಕಾಲಿಕ ಮರಣ ನಿಜವಾಗಲೂ ನಾಗೇಗೌಡರು ಒಬ್ಬ ಪ್ರಭಾವಿ ವ್ಯಕ್ತಿಯಾಗಿ ಮತ್ತು ಒಂದು ವಾಕ್‌ಚಾತುರ್ಯ ಇರತಕ್ಕಂಥ ಒಬ್ಬ ವ್ಯಕ್ತಿಯೂ ಒಬ್ಬ ಮುಖಂಡರೂ ಕೂಡ ಹೌದು. ಇಂಥ ಒಬ್ಬ ಮುಖಂಡನನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಅವರ ಕುಟುಂಬಕ್ಕೆ ಇವತ್ತು ತುಂಬಲಾರದಷ್ಟು ನಷ್ಟವಾಗಿದೆ. ದೇವರು ಅವರ ಕುಟುಂಬಕ್ಕೆ ಆ ದುಃಖವನ್ನು ಸಹಿಸತಕ್ಕಂಥ ಶಕ್ತಿಯನ್ನು ಕೊಡಲಿ ಎಂದು ಹೇಳಿ ನಾನು ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ.

ಎರಡನೆಯದಾಗಿ ಪ್ರೊ : ಎಂ.ಡಿ. ಸಂಜುಂಡಸ್ವಾಮಿಯವರು. ಇವರ ಜೊತೆಯಲ್ಲಿ ಕೂಡ ನನಗೆ ಕೆಲಸ ಮಾಡತಕ್ಕ ಅವಕಾಶ ಸಿಕ್ಕಿತ್ತು. ಅವರು ಧಾರವಾಡ ಗ್ರಾಮಾಂತರ ಭಾಗದಿಂದ ಉಪಚುನಾವಣೆಯಲ್ಲಿ ಗೆದ್ದು ಬಂದ ಮೇಲೆ ಬಹುಶಃ ನನಗನ್ನಿಸಿದ ಮಟ್ಟಿಗೆ ಬಾಪುಗೌಡ ಅವರು ಎರಡು ಕ್ಷೇತ್ರದಿಂದ ಆರಿಸಿ ಬಂದಿದ್ದರು. ಅದರಲ್ಲಿ ಒಂದು ಕ್ಷೇತ್ರಕ್ಕೆ ರಾಜೀನಾಮೆಯನ್ನು ಕೊಟ್ಟು ಪ್ರೋ: ನಂಜುಂಡಸ್ವಾಮಿಯವರನ್ನು ಆ ಸ್ಥಳದಲ್ಲಿ ಆಯ್ಕೆ ಮಾಡಿದಾಗ ಇಲ್ಲಿ ಈ ಸದನದಲ್ಲಿ ಸದಸ್ಯರಾಗಿ ಬಂದಿದ್ದರು. ಒಬ್ಬ ಪ್ರಭಾವಿ ವ್ಯಕ್ತಿಯಾಗಿ ಮತ್ತು ಅದರಲ್ಲೂ ವಿಶೇಷವಾಗಿ ಅವರ ಕಾನೂನು ಪಂಡಿತರು. ಅವರು ಕಾನೂನು ಪಂಡಿತರಾದರೂ ಕೂಡ ಅವರ ವಿಶೇಷ ಆಸಕ್ತಿ ಇರತಕ್ಕಂಥದ್ದು ಈ ನಮ್ಮ ಕೃಷಿಯಲ್ಲಿ. ಹೆಚ್ಚಿನ ಅಂದರೆ ಸೈಂಟಿಫಿಕ್ ಅಗ್ರಿಕಲ್ಚರನ್ನು ಹೇಗೆ ಮಾಡಬೇಕು? ಮತ್ತು ನಮ್ಮ ರೈತರಿಗೆ ಆಧುನಿಕ ಯುಗದಲ್ಲಿ ಆಧುನಿಕ ಉಪಕರಣಗಳಾಗಲೀ ಅಥವಾ ಆಧುನಿಕ ವ್ಯವಸ್ಥೆಯನ್ನು ಪಡೆದುಕೊಂಡು ನಮ್ಮ ರೈತರು ಹೇಗೆ ಮುಂದೆ ಬರಬೇಕು? ಮತ್ತು ಅವರು ಉತ್ಪನ್ನಕ್ಕೆ ಯಾವ ರೀತಿಯಾಗಿ ದೇಶದಲ್ಲಿ ಮತ್ತು ವಿದೇಶದಲ್ಲಿ ಬೆಲೆ ಸಿಗಬೇಕು? ಎನ್ನುವ ವಿಚಾರಗಳ ಬಗ್ಗೆ ಸ್ಪಷ್ಟವಾಗಿ ಹೇಳುತ್ತಿದ್ದರು. ಇನ್ನೂ ಕೃಷಿಕರ ವಿಚಾರ. ಇವತ್ತು ರೈತ ಏನು ಬೆಳೆಯುತ್ತಾನೆ? ಹಾಗೆ ಬೆಳೆದಂತಹ ಬೆಳೆಗೆ ಬೆಲೆಯನ್ನು ನಿಗದಿ ಮಾಡುವಂತಹ ಹಕ್ಕು ಅವನಿಗೆ ಇರಬೇಕು. ಯಾವ ರೀತಿಯಾಗಿ ಯಾವುದೇ ಒಂದು ಪ್ರಾಡೆಕ್ಟ್ ಇವತ್ತು ಫ್ಯಾಕ್ಟರಿಗಳಲ್ಲಿ ಅಥವಾ ಯಾವುದೇ ಒಂದು ಕಾರ್ಖಾನೆಗಳಲ್ಲಿ ಹೊರ ಬರತಕ್ಕಂಥ ವಸ್ತುವಿನ ಬೆಲೆ ನಿಗದಿ ಮಾಡತಕ್ಕಂಥ ಅಧಿಕಾರ ಆ ಫ್ಯಾಕ್ಟರಿಯ ಮಾಲೀಕನಿಗೆ ಇರುತ್ತದೆ. ಅದೇ ರೀತಿಯಾಗಿ ಇವತ್ತು ರೈತರು ಬೆಳೆದಂತಹ ಬೆಳೆಗೆ ಆ ಕಿಮ್ಮತ್ತನ್ನು ಅಥವಾ ಆ ಬೆಲೆಯನ್ನು ನಿಗದಿ ಮಾಡತಕ್ಕಂಥ ಅಧಿಕಾರ ಇವನಿಗೆ ಇರಬೇಕು. ಮತ್ತು ಇವತ್ತು 100ರಲ್ಲಿ 70 ಪರ್ಸೆಂಟ್ ಜನ ಅಥವಾ 75 ಪರ್ಸೆಂಟ್ ಜನ ರೈತರು ಇರುವಾಗ ಈ ದೇಶದ ಒಂದು ಆರ್ಥಿಕ, ಅಭಿವೃದ್ಧಿ ಮಾಡತಕ್ಕಂಥಹದ್ದು ರೈತರ ಕೈಯಲ್ಲಿದೆ. ಅದಕ್ಕಾಗಿ ಇಂತಹ ರೈತರಿಗೆ ನಾವು ಹೆಚ್ಚಿನ ಪ್ರೋತ್ಸಾಹವನ್ನು ನೀಡಬೇಕು ಎನ್ನತಕ್ಕಂಥ ಒಂದು ಅನಿಸಿಕೆ ಅವರದ್ದು ಇತ್ತು. ವಿಶೇಷವಾಗಿ ಡಾ|| ರಾಮ ಮನೋಹರ ಲೋಹಿಯಾ ಅವರ ವಿಚಾರಧಾರೆಯ ಮೇಲೆ, ಜಯಪ್ರಕಾಶ್ ನಾರಾಯಣ್ ಅವರ ವಿಚಾರಧಾರೆಯ ಮೇಲೆ ಮತ್ತು ಸೋಷಿಯಲಿಸ್ಟ್ ತತ್ವದ ಮೇಲೆ ನಂಬಿಕೆಯನ್ನು ಇಟ್ಟು ರಾಜಕೀಯಕ್ಕೆ ಬಂದಂತಹ ಒಬ್ಬ ವ್ಯಕ್ತಿ. ಅಂತಹ ಒಬ್ಬ ವ್ಯಕ್ತಿಯನ್ನು ಕೂಡ ನಾವು ಇವತ್ತು ಕಳೆದುಕೊಂಡಿದ್ದೇವೆ. ಅವರು ಸುಮಾರು ಸಲ ನಮ್ಮ ಜೊತೆ ಟೆಲಿಫೋನ್‌ನಲ್ಲಿ ಮಾತನಾಡುತ್ತಿದ್ದರು. ಯಾವಾಗಲೂ ಕೂಡ ಒಂದು ರೈತರ ಚಳುವಳಿ ಕೊಪ್ಪಳದಲ್ಲಿ ಆಗಲಿ, ಗಂಗಾವತಿಯಲ್ಲಿ ಆಗಲಿ ಅಥವಾ ಈ ಕಡೆ ಮದ್ದೂರಿನಲ್ಲಿ ಆಗಲಿ, ಎಲ್ಲೆಲ್ಲಿ ರೈತರ ಚಳುವಳಿ ಆಗಲಿ, ಕೋಲಾರದಲ್ಲಿಯೇ

ಆಗಲಿ ಅದರಲ್ಲಿ ವಿಶೇಷವಾಗಿ ಕೆಪಿಟಿಸಿಎಲ್‌ನವರು ಮೀಟರನ್ನು ಫಿಕ್ಸ್ ಮಾಡುವಾಗ, ಮೀಟರ್ ಫಿಕ್ಸ್ ಮಾಡಬಾರದು ಏಕೆಂದರೆ ನೀವು ಅವರಿಗೆ ಇನ್ನೂ ಅವರು ಕೇಳಿದ ಹಾಗೆ ಎಲೆಕ್ಟ್ರಿಸಿಟಿ ಸಪ್ಲೈ ಮಾಡುತ್ತಿಲ್ಲ. ವಿದ್ಯುಚ್ಛಕ್ತಿ ಸಪ್ಲೈ ಮಾಡದ ಕಾರಣ ನಿಮಗೆ ಈ ಮೀಟರ್‌ಗಳನ್ನು ಫಿಕ್ಸ್ ಮಾಡುವುದಕ್ಕೆ ಹಕ್ಕು ಇಲ್ಲ ಎನ್ನತಕ್ಕಂಥ ಮಾತನ್ನು, ವಾದವನ್ನು ಸರ್ಕಾರದ ಮುಂದೆ ಇಟ್ಟು ಕಾನೂನನ್ನು ತಮ್ಮ ಕೈಯಲ್ಲಿಯೇ ತೆಗೆದುಕೊಂಡು ಚಳುವಳಿಯನ್ನು ಮಾಡತಕ್ಕದ್ದನ್ನು ತಾವು ಕೂಡ ನೋಡಿದ್ದಿರಿ ಮತ್ತು ಅನೇಕ ಸಾರಿ ಪತ್ರಿಕೆಯಲ್ಲೂ ಕೂಡ ಬಂದಿದೆ. ಅದರ ಬಗ್ಗೆ ಸಾಕಷ್ಟು ಪ್ರಚಾರ ಕೂಡ ಸಿಕ್ಕಿದೆ. ನನಗೂ ಕೂಡ ಅನೇಕ ಸಾರಿ ಮಾತನಾಡಿ ನಿಮ್ಮ ಪೊಲೀಸರು ನಮ್ಮ ರೈತರನ್ನು ಹಿಡಿದುಕೊಂಡುಹೋಗಿ ಬಳ್ಳಾರಿ ಜೈಲಿನಲ್ಲಿ ಇಟ್ಟಿದ್ದಾರೆ. ಬೆಳಗಾಂ ಜೈಲಿನಲ್ಲಿ ಇಟ್ಟಿದ್ದಾರೆ. ಅವರನ್ನು ಬಿಡಿಸಬೇಕು. ಅವರ ಮೇಲಿರುವ ಕೇಸಸ್ ಅನ್ನು ವಿತ್‌ಡ್ರಾ ಮಾಡಬೇಕು ಎಂದು ಹೇಳಿ ಸಾಕಷ್ಟು ಪ್ರತಿಪಾದನೆ ಮಾಡುತ್ತಿದ್ದಂತಹ ವ್ಯಕ್ತಿ. ಅದಕ್ಕೆ ನಾವು ಅನೇಕ ಸಾರಿ ಅವರ ಮಾತನ್ನು ಕೇಳಿಕೊಂಡು ರೈತರ ಮೇಲೆ ಎಲ್ಲೆಲ್ಲಿ ಕೇಸಸ್ ಇದ್ದವೋ ಅವೆಲ್ಲವನ್ನೂ ಕೂಡ ವಿತ್‌ಡ್ರಾ ಮಾಡಿಕೊಳ್ಳತಕ್ಕಂಥ ಪ್ರಯತ್ನವನ್ನು ಮಾಡಿದ್ದೇವೆ. ಇತ್ತೀಚೆಗೆ ಸಾಕಷ್ಟು ಕೇಸಸ್ ಅನ್ನು ವಿತ್‌ಡ್ರಾ ಮಾಡಿಕೊಳ್ಳಿ ಎಂದು ನಾವು ಪಬ್ಲಿಕ್ ಪ್ರಾಸಿಕ್ಯೂಟರ್ಸ್‌ಗೆ ಈಗಾಗಲೇ ಪತ್ರ ಬರೆದಿದ್ದೇವೆ. ಹೀಗೆ ರೈತರ ಬಗ್ಗೆ ಕಾಳಜಿ ಇರತಕ್ಕಂಥ ವ್ಯಕ್ತಿ ಇವತ್ತು ನಮ್ಮನ್ನು ಅಗಲಿದ್ದಾರೆ. ಅದಕ್ಕೆ ನಿಜವಾಗಿಯೂ ವಿಶೇಷವಾಗಿ ನಾವು ಇವತ್ತು ರೈತರ ಪ್ರತಿನಿಧಿತ್ವವನ್ನು ಕಳೆದುಕೊಂಡಿದ್ದೇವೆ ಎಂದರೆ ತಪ್ಪಾಗಲಾರದು. ಏಕೆಂದರೆ ರೈತರ ಪರ ಈ ಅಸೆಂಬ್ಲಿಯಲ್ಲಿ ಕೂಡ ಇದ್ದಾಗ ವೈಜ್ಞಾನಿಕವಾಗಿ ಮತ್ತು ಸಾಕಷ್ಟು ರೀತಿಯಲ್ಲಿ ಅವರು ಸರ್ಕಾರಕ್ಕೆ ಮನವರಿಕೆ ಮಾಡಿಕೊಡತಕ್ಕ ಪ್ರಯತ್ನವನ್ನು ಮಾಡುತ್ತಿದ್ದರು. ಮತ್ತು ಅವರು ಅನೇಕ ಶಿಷ್ಯಂದಿರನ್ನು ಯುವಕರನ್ನೂ ಕೂಡ ತಯಾರು ಮಾಡಿದಂತಹ ಒಬ್ಬ ವ್ಯಕ್ತಿ. ಆ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಅದಕ್ಕೆ ನಿಜವಾಗಲೂ ನನಗೂ ಏನು ಅನ್ನಿಸುತ್ತಿದೆ ಎಂದರೆ ಇಂತಹ ಒಂದು ವಾಕ್ಯೂಮ್ ಅನ್ನು ಭರಿಸತಕ್ಕಂಥದ್ದು ಸಾಧ್ಯ ಇಲ್ಲವೇನೋ ಎನ್ನತಕ್ಕ ವಿಚಾರ ಅನಿಸುತ್ತಿದೆ. ಅವರನ್ನು ಕಳೆದುಕೊಂಡಿದ್ದಕ್ಕೆ ನಮಗೆ ಇವತ್ತು ಯಾವ ರೀತಿಯಾಗಿ ದುಃಖವಾಗಿದೆ ಅದೇ ರೀತಿಯಾಗಿ ಅವರ ಕುಟುಂಬ ಮತ್ತು ವಿಶೇಷವಾಗಿ ಅವರಿಗೆ ಬೆಂಬಲವಾಗಿ ನಿಂತಂಥ ಶಿಷ್ಯವರ್ಗಕ್ಕೆ ಕೂಡ ನೋವು ಉಂಟಾಗಿದೆ. ಅದಕ್ಕೆ ಅವರಿಗೆ ಕೂಡ ಈ ದುಃಖವನ್ನು ಭರಿಸಿಕೊಳ್ಳತಕ್ಕ ಶಕ್ತಿ ಬರಲಿ ಎಂದು ಹೇಳಿ ನಾನು ಪ್ರಾರ್ಥಿಸುತ್ತೇನೆ. ಶ್ರೀ ಎಸ್. ಮುನಿರಾಜು ಅವರ ವಿಚಾರ. ಇವರು ಬಹಳ ಹಿರಿಯರು. ಸುಮಾರು 79 ವರ್ಷ ವಯಸ್ಸಾಗಿದ್ದರೂ ಬಹಳ ಆಕ್ಟೀವ್ ಆಗಿದ್ದರು. ಬ್ಯಾಕ್‌ವರ್ಡ್ ಕ್ಲಾಸ್ ಕಮೀಷನ್ ಅಧ್ಯಕ್ಷರಾಗಿ ಎರಡು ಸಾರಿ ಶಾಸಕರಾಗಿ, ನಮ್ಮ ಕೆಪಿಸಿಸಿ ಸದಸ್ಯರಾಗಿ, ಕೆಪಿಸಿಸಿಯ ಉಪಾಧ್ಯಕ್ಷರಾಗಿ ಅಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ. ಮತ್ತು ಮೊನ್ನೆ ತಾನೇ ನಾನು ಅವರನ್ನು ನೋಡಿದ್ದೇನೆ. ನಮ್ಮ ಮನೆಯ ಕಡೆ ಬಂದಿದ್ದರು. ನಾನು ಮೊನ್ನೆ ದೆಹಲಿಗೆ ಐದು ದಿವಸ ಹೋಗಿ ಬಂದಿದ್ದೇನೆ. ಅಲ್ಲಿ ಒಂದು ವಾತಾವರಣ ಚುನಾವಣೆ ಬಗ್ಗೆ ತಯಾರಾಗುತ್ತಿದೆ ಎಂದು ಮಾತನಾಡುವಾಗ ಹೇಳುತ್ತಿದ್ದರು. ಅಂತಹ ಒಬ್ಬ ವ್ಯಕ್ತಿ ಸಡನ್ ಆಗಿ ಆರು ಗಂಟೆಗೆ ಬೇರೆ ಯಾರೋ ಒಬ್ಬರು ವ್ಯಕ್ತಿ ಖಾಯಿಲೆ ಇದ್ದಾರೆಂದು ತಿಳಿದುಕೊಂಡು ಮಲ್ಲಿಗೆ ನರ್ಸಿಂಗ್ ಹೋಮ್‌ಗೆ ಹೋದಾಗ ಅಲ್ಲೇ ಅವರಿಗೆ ಹಾರ್ಟ್ ಅಟ್ಯಾಕ್ ಆಗಿದೆ. ಅಲ್ಲೇ ತೀರಿಕೊಂಡರು. ಹೀಗೆ ಕ್ಷಣದಲ್ಲೇ ತೀರಿಕೊಂಡಿದ್ದಾರೆ. ಯಾವುದೇ ಖಾಯಿಲೆಗೆ ಬಿದ್ದಿಲ್ಲ. ಅಥವಾ ತೊಂದರೆ ಆಗಿಲ್ಲ. ಅಥವಾ ಏನಾದರೂ ಒಂದೆರಡು

ದಿವಸ ಹೆಚ್ಚು ಕಡಿಮೆ ಆಗಿ ಅನಾರೋಗ್ಯದಿಂದ ಬಳಲುತ್ತಿದ್ದರು ಎನ್ನತಕ್ಕ ಪ್ರಶ್ನೆನೇ ಇರಲಿಲ್ಲ. ಪ್ರೊ: ನಂಜುಂಡಸ್ವಾಮಿಯವರು ಒಂದೆರಡು ಮೂರ್‍ನಾಲ್ಕು ತಿಂಗಳುಗಳಿಂದ ಆಸ್ಪತ್ರೆಯಲ್ಲೇ ಇದ್ದರು. ಅವರು ಒಂದು ಕ್ಯಾನ್ಸರ್ ರೋಗದಿಂದ ಬಳಲುತ್ತಿದ್ದರು ಎನ್ನುವ ವಿಚಾರ ಕೂಡ ಬಂದಿದೆ. ಅದು ಏನೇ ಇರಲಿ; ಆದರೆ ಮುನಿರಾಜು ಅವರಂತೂ ಆಸ್ಪತ್ರೆಯಲ್ಲಿ ಖಾಯಿಲೆಗೆ ಬಿದ್ದ ಇನ್ನೊಬ್ಬ ವ್ಯಕ್ತಿಯ ಯೋಗಕ್ಷೇಮವನ್ನು ವಿಚಾರಿಸಲಿಕ್ಕೆ ಹೋದಾಗ ಅವರು ಅಲ್ಲೇ ತೀರಿಕೊಂಡಿರುವುದು ಬಹಳ ದುಃಖದ ಸಂಗತಿ. ಒಬ್ಬ ಸಜ್ಜನ, ಸರಳ ವ್ಯಕ್ತಿ ಮತ್ತು ಕೋಲಾರ ಜಿಲ್ಲೆಯವರು ತಮಗೆ ಗೊತ್ತಿದೆ. ಆ ಜಿಲ್ಲೆಯನ್ನು ಪ್ರತಿನಿಧಿ ಮಾಡತಕ್ಕ ಒಬ್ಬ ಹಳೆಯ ಕಾಂಗ್ರೆಸ್ಸಿಗರು ಗಾಂಧೀವಾದ ಮತ್ತು ಎಲ್ಲಕ್ಕಿಂತಲೂ ಮಿಗಿಲಾಗಿ ಬಹಳ ಕಾಮ್ ಮತ್ತು ಕ್ವೈಟ್ ಆಗಿ ಕೆಲಸ ಮಾಡತಕ್ಕಂಥ ಒಬ್ಬ ಮುಖಂಡನನ್ನು ಇವತ್ತು ಕಾಂಗ್ರೆಸ್ ಪಕ್ಷ ಕಳೆದುಕೊಂಡಿದೆ. ಅವರ ಕುಟುಂಬಕ್ಕೂ ಕೂಡ ತುಂಬಲಾರದ ನಷ್ಟ ಇವತ್ತು ಆಗಿದೆ. ದೇವರು ಆ ದುಃಖವನ್ನು ಸಹಿಸತಕ್ಕ ಶಕ್ತಿಯನ್ನು ಕೊಡಲಿ ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ವಾದಿರಾಜ್ ಅವರ ವಿಚಾರ. ತಮಗೆಲ್ಲಾ ಗೊತ್ತಿದೆ. ಚಲನಚಿತ್ರರಂಗದಲ್ಲಿ ಬಹಳ, ಅತ್ಯಂತ, ತನ್ನದೇ ಆದಂತಹ ಪಾತ್ರಗಳನ್ನು ವಹಿಸಿಕೊಂಡು ಜನರಿಗೆ ಮನರಂಜನೆ ಕೊಡತಕ್ಕಂಥ ಪಾತ್ರಗಳನ್ನು ಮಾಡಿ ಅನೇಕ ಸಿನೆಮಾಗಳಲ್ಲಿ ಅವರು ನಟಿಸಿದ್ದಾರೆ. ಅದರಲ್ಲೂ ವಿಶೇಷವಾಗಿ ಅವರು ಗಾಂಧೀವಾದಿಗಳು ಮತ್ತು ಗಾಂಧೀವಾದಿಗಳಲ್ಲದೇ ಈ ಒಂದು ಸ್ವಾತಂತ್ರ್ಯ ಚಳುವಳಿಯಲ್ಲಿ ಈ ಪ್ರಚಾರ ಸಮಿತಿ ಏನು ಇತ್ತು ಆ ಪ್ರಚಾರ ಸಮಿತಿಯಲ್ಲಿ ಕೂಡ ಒಬ್ಬ ಗುಮಾಸ್ತರಾಗಿ ಕೆಲಸ ಮಾಡಿ ದೇಶದ ಸ್ವಾತಂತ್ರ್ಯಕ್ಕೆ ಒಂದು ಹೆಚ್ಚಿನ ಒತ್ತು ಮತ್ತು ಒಲವನ್ನು ತೋರಿಸಿದಂತಹ ಒಬ್ಬ ವ್ಯಕ್ತಿ ಅಂತಹ ಒಬ್ಬ ವ್ಯಕ್ತಿ. ಅಂತಹ ಒಬ್ಬ ವ್ಯಕ್ತಿ ನಮ್ಮಿಂದ ಇವತ್ತು ಅಗಲಿ ಹೋಗಿದ್ದಾರೆ. ಅವರೂ ಕೂಡ ಅನೇಕ ಪ್ರಶಸ್ತಿಗಳನ್ನು ಅವರ ಜೀವನದಲ್ಲಿ ಗಳಿಸಿದ್ದರು. ಒಬ್ಬರು ಒಳ್ಳೆಯ ನಟ ಎನ್ನತಕ್ಕ ಬಿರುದನ್ನೂ ಕೂಡ ಅವರು ತೆಗೆದುಕೊಂಡಿದ್ದಾರೆ. ಅವರೂ ಕೂಡ 6ನೇ ತಾರೀಖು ನಮ್ಮಿಂದ ಅಗಲಿದ್ದಾರೆ. ಅವರ ಕುಟುಂಬಕ್ಕೂ ಕೂಡ ಈ ದುಃಖವನ್ನು ಸಹಿಸತಕ್ಕ ಶಕ್ತಿ ದೇವರು ಕೊಡಲಿ ಎಂದು ಈ ಸಂದರ್ಭದಲ್ಲಿ ಹೇಳಿ ನಾನು ನನ್ನ ನಾಲ್ಕು ಮಾತನ್ನು ಮುಗಿಸುತ್ತೇನೆ.

† **ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು)** :– ಸನ್ಮಾನ್ಯ ಅಧ್ಯಕ್ಷರೆ, ತಾವು ತಂದಂತಹ ಈ ಸಂತಾಪ ಸೂಚನೆಗೆ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ಇತ್ತೀಚೆಗೆ ನಮ್ಮನ್ನು ಅಗಲಿದ ಕೆಲವೊಂದು ಪ್ರಮುಖ ನಾಯಕರುಗಳು, ಮತ್ತು ಇತ್ತೀಚಿನ ಕೆಲವು ತಿಂಗಳುಗಳಲ್ಲಿ ಪ್ರಮುಖ ನಾಯಕರುಗಳನ್ನು ನಾವು ಕಳೆದುಕೊಳ್ಳುತ್ತಿದ್ದೇವೆ. ಮಾನ್ಯ ವೈ.ಕೆ. ರಾಮಯ್ಯನವರು ಇರಬಹುದು, ನಮ್ಮ ರಾಷ್ಟ್ರ ನಾಯಕರಾದಂತಹ ರಾಮಕೃಷ್ಣ ಹೆಗಡೆಯವರು ಇರಬಹುದು ಹಿರಿಯ ನಾಯಕರಾದಂತಹ ಭೈರೇಗೌಡರು ಸಹ ನಿಧನರಾಗಿದ್ದಾರೆ. ಇವತ್ತು ನಾಗೇಗೌಡರು ಈ ರೀತಿ ಇತ್ತೀಚಿನ ಕೆಲವು ತಿಂಗಳುಗಳಲ್ಲಿ ಪ್ರಮುಖ ವ್ಯಕ್ತಿಗಳನ್ನು ನಾವು ಕಳೆದುಕೊಂಡಿದ್ದೇವೆ. ಇದು ಒಂದು ಬಹಳ ದುಃಖದ ಸಂಗತಿ ಎಂದು ನಾನು ಹೇಳಬಯಸುತ್ತಿದ್ದೇನೆ. ಮಾನ್ಯ ನಾಗೇಗೌಡರ ಬಗ್ಗೆ ಹೇಳಬೇಕಾದರೆ ಅವರು ಬಹಳ ಕ್ರಿಯಾಶೀಲರಾದಂತಹ ವ್ಯಕ್ತಿ. ಅವರನ್ನು ನಾನು ಬಹಳ ಹತ್ತಿರದಿಂದಲೂ ಬಲ್ಲೆ. 1994 ರಿಂದ 1999ರ ವರೆಗಿನ ಸದನದಲ್ಲಿ ಅವರು ಮೊದಲು ಮಂತ್ರಿ ಆಗಿರಲಿಲ್ಲ. ಕೆಲವು ವರ್ಷವಾದ ಮೇಲೆ ಮಂತ್ರಿ ಆದರು. ಅದಕ್ಕಿಂತ ಮುಂಚೆ ಒಬ್ಬ ಶಾಸಕರಾಗಿ ಈ ಶಾಸನಸಭೆಯಲ್ಲಿ ಅವರು ಕೆಲಸ ಮಾಡುವಂತಹದನ್ನು ಮತ್ತು ಯಾವುದೇ ಒಂದು ವಿಷಯದ ಬಗ್ಗೆ ಗಂಭೀರವಾಗಿ

(† ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಆಲೋಚನೆ ಮಾಡುವಂತಹದು, ನನಗೆ ಇವತ್ತಿಗೂ ಸಹ ನೆನಪಿದೆ. ಯಾವುದೇ ಕ್ಲಿಷ್ಟ ಸಮಸ್ಯೆ ಬಂದಂತಹ ಸಂದರ್ಭದಲ್ಲಿ ಯಾವುದೇ ಒಂದು ಚರ್ಚೆಯ ಸಂದರ್ಭದಲ್ಲಿ ಪಾಯಿಂಟ್ ಆಫ್ ಆರ್ಡರ್ ಎಂದು ಹೇಳಿ ಕೆಲವೊಂದು ಪ್ರಶ್ನೆಗಳನ್ನು ಎತ್ತಿ ಮತ್ತು ಅದು ತಮ್ಮ ಪರವಾಗಿ ತೀರ್ಪು ಅಧ್ಯಕ್ಷರಿಂದ ಬರುವಂತೆ ಪಡೆದುಕೊಳ್ಳುವಂತಹ, ಆ ರೀತಿ ವಾದ ಮಂಡನೆ ಮಾಡುವಂತಹದು ಇವತ್ತಿಗೂ ನನಗೆ ನೆನಪು ಇದೆ. ಆ ರೀತಿ ನಾಗೇಗೌಡರು ಮತ್ತು ಸದನದ ನಿಯಮಗಳ ಬಗ್ಗೆ, ಮತ್ತು ಇನ್ನಿತರ ವಿಷಯಗಳ ಬಗ್ಗೆ ಬಹಳಷ್ಟು ಆಳವಾಗಿ ಅಭ್ಯಾಸ ಮಾಡಿದಂತಹ ವ್ಯಕ್ತಿ. ಪಾದರಸದಂತೆ ಕೆಲಸ ಮಾಡುವಂತಹ ಒಬ್ಬ ರಾಜಕಿಯ ನಾಯಕ. ಅಖಿಲ ಭಾರತ ಪ್ರಗತಿ ಪರ ಜನತಾ ದಳದ ಅಧ್ಯಕ್ಷರಾಗಿ ಅವರ ಓಡಾಟವನ್ನೂ ನಾನು ರಾಜ್ಯದಲ್ಲಿ ನೋಡಿದ್ದೇನೆ. ಬಹಳ ಕ್ರಿಯಾಶೀಲರಾಗಿ ಕೆಲಸ ಮಾಡುತ್ತಿದ್ದುದು ಮನಸ್ಸಿಗೆ ಬಂದಂತಹ ವಿಷಯವನ್ನು ಸ್ಪಷ್ಟವಾಗಿ, ನೇರವಾಗಿ ಹೇಳುವಂತಹ ಸ್ವಭಾವದವರಾಗಿದ್ದರು ಮಾನ್ಯ ನಾಗೇಗೌಡರು. ಬಹುಶಃ ಇತ್ತೀಚಿನ ರಾಜಕೀಯ ಒತ್ತಡ ಇರಬಹುದು. ಕೆಲಸದ ಒತ್ತಡ ಇರಬಹುದು. ಮತ್ತು ದೆಹಲಿಯ ಕರ್ನಾಟಕ ಭವನದಲ್ಲಿ ಉಳಿದುಕೊಂಡಂತಹ ಸಂದರ್ಭದಲ್ಲಿ ಮೊನ್ನೆ ನಾನು ಕರ್ನಾಟಕ ಭವನಕ್ಕೆ ಹೋಗಿದ್ದೆ. ಅಲ್ಲಿನ ಸಿಬ್ಬಂದಿ ವರ್ಗದವರು ಆ ಸಂದರ್ಭದಲ್ಲಿ ಅವರ ಜೊತೆ ಇದ್ದಂತಹವರ ಜೊತೆ ನಾನು ಮಾತನಾಡಿದೆ. ಅವರು ಎರಡು ದಿವಸದಿಂದ ಅಲ್ಲಿ ಜ್ವರದಿಂದ ನರಳುತ್ತಿದ್ದರಂತೆ. ಅಲ್ಲಿನ ಯಾವುದೇ ಸ್ಥಳೀಯ ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆಯುವಂಥ ಪ್ರಯತ್ನವನ್ನೂ ಅವರು ಮಾಡಲಿಲ್ಲ. 'ಜ್ವರ ಬರುತ್ತದೆ, ಹೋಗುತ್ತದೆ, ಇವೆಲ್ಲವೂ ಸಾಮಾನ್ಯ' ಎಂದು ತಿಳಿದಿದ್ದರು. ಇದರ ಬಗ್ಗೆಯೇ ಅವರು ಸ್ವಲ್ಪ ನಿರ್ಲಕ್ಷ್ಯ ತಾಳಿದರೆಂದು ನನಗನ್ನಿಸುತ್ತದೆ. ಎರಡು ದಿವಸಗಳ ಕಾಲ ಅವರು ಸತತವಾಗಿ ಜ್ವರದಿಂದ ಬಳಲುತ್ತಿದ್ದರು ಮತ್ತು ಅವರನ್ನು ಕಾಣಲು ಯಾರೇ ಬಂದರೂ ಅವರೊಂದಿಗೆ ಮಾತನಾಡುತ್ತಿದ್ದರೆಂದು ನಾನು ಅಲ್ಲಿಯ ಸಿಬ್ಬಂದಿಯಿಂದ ಕೇಳಿ ತಿಳಿದುಕೊಂಡೆ. ಮತ್ತು ಮರಣಶಯ್ಯೆಗೆ ಹೋಗುವ ಕೊನೆಯ ಕ್ಷಣಗಳು ಹೇಗಿರುತ್ತದೆಂಬುದನ್ನು ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿರುವುದನ್ನು ನಾವು ಓದಿದ್ದೇವೆ. ಅಂದರೆ, 'ಇನ್ನು ನನ್ನ ಕಾಲ ಮುಗೀತು, ನಾನು ಇನ್ನು ಹೋಗುತ್ತಿದ್ದೇನೆ' ಎನ್ನುವಂತಹ ಕಲ್ಪನೆ ಅವರಿಗೆ ಬಂದಾಗ ಮನುಷ್ಯನ ಯಾತನೆ ಯಾವ ರೀತಿಯದಾಗಿರಬಹುದೆಂದು ಅಲ್ಲಿ ವ್ಯಕ್ತವಾಗಿದ್ದನ್ನು ನಾವು ನೋಡಿದ್ದೇವೆ. ಇವೊತ್ತು ನಾಗೇಗೌಡರಂಥ ಒಬ್ಬ ಕ್ರಿಯಾಶೀಲ ವ್ಯಕ್ತಿಯನ್ನು ನಾವು ಕಳೆದುಕೊಂಡಿರುವುದರಿಂದ ರಾಜಕೀಯ ರಂಗ ಬಡವಾಗಿದೆ. ಅವರು ಹೋರಾಟಗಾರರಾಗಿದ್ದರಲ್ಲದೆ, ನೀರಾವರಿ ಬಗ್ಗೆಯೂ ಆಳವಾಗಿ ಅಭ್ಯಾಸ ನಡೆಸಿದಂತಹವರು. ನೀರಾವರಿ ಸಚಿವರಾಗಿ ಅವರು ಕೆಲಸ ಮಾಡುವಂಥ ಸಂದರ್ಭದಲ್ಲಿ ಕೃಷ್ಣಾ ಕಣಿವೆ ಯೋಜನೆಗಳ ಬಗ್ಗೆ ಹೆಚ್ಚು ಮುತುವರ್ಜಿ ವಹಿಸಿದ್ದರು. ಏಕೆಂದರೆ, ದಿವಂಗತ ನಾಗೇಗೌಡರು ಕಾವೇರಿ ಕಣಿವೆ ಪ್ರದೇಶದಿಂದ ಬಂದವರಾಗಿದ್ದರೂ ಕೃಷ್ಣಾ ಕಣಿವೆ ಯೋಜನೆಗಳ ಬಗ್ಗೆಯೂ ಅಷ್ಟೇ ಆಸಕ್ತಿಯಿಂದ ಕೆಲಸ ಮಾಡುವ ಮೂಲಕ ಹೆಚ್ಚು ಹಣವನ್ನು ವಿನಿಯೋಗಿಸಿ ಆಲಮಟ್ಟಿ ಅಣೆಕಟ್ಟು ಯೋಜನೆಯನ್ನು ಒಂದು ಹಂತಕ್ಕೆ ತರುವಲ್ಲಿ ಅವರ ಪಾತ್ರ ಬಹಳಷ್ಟು ಇತ್ತೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹೋರಾಟಗಾರರಾಗಿದ್ದ ಅವರು ಎಷ್ಟೋ ಚಳವಳಿಗಳಲ್ಲಿ ಭಾಗವಹಿಸಿದ್ದರು. ಧಾರವಾಡದಲ್ಲಿ ಇತ್ತೀಚೆಗೆ ಕೆಲವು ದಿವಸಗಳ ಹಿಂದೆ ಅವರು ಚಳವಳಿಯಲ್ಲಿ ಭಾಗವಹಿಸಿ ಬಂಧನಕ್ಕೊಳಗಾಗಿದ್ದಾಗ ನಾನು ಅವರನ್ನು ಭೇಟಿ ಮಾಡಿದೆ. ಆ ಸಂದರ್ಭದಲ್ಲಿ ಅವರು ಅಲ್ಲಿ ಉಪವಾಸ ಸತ್ಯಾಗ್ರ[illegible]

ಹೆಚ್ಚು ಸ್ಫೂರ್ತಿ ತುಂಬಬೇಕೆಂಬ ದೃಷ್ಟಿಯಿಂದ ಅವರು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದುದ್ದನ್ನು ನಾನು ನೋಡಿದ್ದೇನೆ. ಹೀಗಾಗಿ ಒಬ್ಬ ಹೋರಾಟಗಾರರು ಹಾಗೂ ರಾಜಕೀಯ ನಾಯಕರನ್ನು ನಾವು ಕಳೆದುಕೊಂಡಿರುವುದರಿಂದ ಇವೊತ್ತಿನ ರಾಜಕೀಯ ರಂಗ ಬಡವಾಗಿದೆಯೆಂದು ಈ ಸಂದರ್ಭದಲ್ಲಿ ನಾನು ನನ್ನ ಅಭಿಪ್ರಾಯ ವ್ಯಕ್ತಪಡಿಸುತ್ತೇನೆ.

ಇವೊತ್ತು ರೈತ ಚಳವಳಿ ಎಂದ ತಕ್ಷಣ ತಟ್ಟನೆ ನಮಗೆ ನೆನಪಾಗುವ ಹೆಸರೆಂದರೆ ಸನ್ಮಾನ್ಯ ಪ್ರೊ: ಎಂ.ಡಿ. ನಂಜುಂಡಸ್ವಾಮಿಯವರು. ಕರ್ನಾಟಕ ರಾಜ್ಯದಲ್ಲಿ ರೈತ ಚಳವಳಿಗೆ ಒಂದು ದಿಕ್ಕು-ದೆಸೆ, ಮಾರ್ಗದರ್ಶನ ಮಾಡುವ ಮೂಲಕ ಅದಕ್ಕೊಂದು ಗುರಿ ತೋರಿಸಿಕೊಟ್ಟಂಥವರು ಪ್ರೊ: ಎಂ.ಡಿ. ನಂಜುಂಡಸ್ವಾಮಿಯವರೆಂದು ನಾವು ಹೇಳಬೇಕಾಗುತ್ತದೆ. ಯಾವುದೇ ಒಂದು ಅಧಿಕಾರವಿರಲಿ, ಬಿಡಲಿ, ರೈತರ ಪರವಾಗಿ ಮಾತನಾಡಿ, ರೈತರ ಸಮಸ್ಯೆಗಳು ಬಂದಾಗ ದೊಡ್ಡ ದನಿಯಾಗಿ ನಿಂತು ಅವರ ಪರವಾಗಿ ಹೋರಾಟ ಮಾಡುವಂಥ ಒಬ್ಬ ವ್ಯಕ್ತಿಯಾಗಿದ್ದ ನಂಜುಂಡಸ್ವಾಮಿಯವರನ್ನು ನಾವು ಇವೊತ್ತು ಕಳೆದುಕೊಂಡಿದ್ದೇವೆ. ಇವೊತ್ತು ಎಲ್ಲಾ ರಾಜಕೀಯ ಪಕ್ಷಗಳು ರೈತರ ಪರವಾಗಿ ಮಾತನಾಡುತ್ತವೆ. ಆದರೆ, ರೈತರ ಸಮಸ್ಯೆಗಳಿಗೆ ಪರಿಹಾರ ಸಿಗುತ್ತಿಲ್ಲ. ಅವರ ಜ್ವಲಂತ ಸಮಸ್ಯೆಗಳಿಗೆ ಇವೊತ್ತಿಗೂ ಪರಿಹಾರ ಸಿಗುತ್ತಿಲ್ಲ. ಹೀಗಾಗಿ, ರೈತರಿಗೆ ಮಾತನಾಡುವ ಧೈರ್ಯ ಕೊಟ್ಟವರು ಪ್ರೊ: ಎಂ.ಡಿ. ನಂಜುಂಡಸ್ವಾಮಿಯವರು. ರೈತರಿಗೆ ಮಾತನಾಡುವ ದನಿಯೂ ಇರಲಿಲ್ಲ. ಛಲವೂ ಇರಲಿಲ್ಲ. ಅವರಿಗೆ ಮಾತನಾಡುವ ಛಲ ಹಾಗೂ ಒಬ್ಬ ಅಧಿಕಾರಿ ಮುಂದೆ ಎದೆ ಸೆಟೆಸಿ ನಿಂತು ಮಾತನಾಡುವಂಥ ಧೈರ್ಯ ಕೊಟ್ಟವರು ನಂಜುಂಡಸ್ವಾಮಿಯವರು. ಅಧಿಕಾರಿಗಳನ್ನು ಏಕೆಂದು ಪ್ರಶ್ನಿಸುವುದಕ್ಕೆ ಅವರಿಗೆ ಮಾರ್ಗದರ್ಶನ ಮಾಡಿದಂಥವರು ನಂಜುಂಡಸ್ವಾಮಿಯವರು. ರೈತ ಚಳವಳಿ ಇಡೀ ರಾಷ್ಟ್ರದಲ್ಲಿರಬಹುದು. ಕೆಲವೊಂದು ರಾಜ್ಯಗಳಲ್ಲಿರಬಹುದು, ತಮಿಳುನಾಡು, ಉತ್ತರ ಪ್ರದೇಶದಲ್ಲಿ ಇರಬಹುದು, ಮಹೇಂದ್ರಸಿಂಗ್ ಟಿಕಾಯತ್ ಇರಬಹುದು, ಕೆಲವೇ ಕೆಲವು ರಾಜ್ಯಗಳಲ್ಲಿ ರೈತ ಚಳವಳಿ ಒಂದು ದೊಡ್ಡ ಚಳವಳಿಯಾಗಿ ಬೆಳೆಯಲು ಕಾರಣವಾದಂಥ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಅದಕ್ಕೆ ಮೂಲ ಕಾರಣ ಪ್ರೊ: ಎಂ.ಡಿ ನಂಜುಂಡಸ್ವಾಮಿಯವರೆಂದು ನಾವು ಹೇಳಬೇಕಾಗುತ್ತದೆ. ಈ ಚಳವಳಿಯನ್ನು ಅವರು ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತಗೊಳಿಸದೆ ಇಡೀ ರಾಷ್ಟ್ರಕ್ಕಷ್ಟೇ ಅಲ್ಲದೆ, ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಗಳಿಸಿದ ರೈತ ನಾಯಕರನ್ನು ಕರ್ನಾಟಕಕಕ್ಕೂ ಕರೆದುಕೊಂಡು ಬಂದು ಅವರ ವಿಚಾರಗಳಿಗೆ ಸ್ಪಂದಿಸುವಂಥ ಕೆಲಸವನ್ನು ನಂಜುಂಡಸ್ವಾಮಿಯವರು ಇಲ್ಲಿ ಮಾಡಿದರು. ಅವರು ಶಾಸಕರಾಗಿ ಶಾಸನಸಭೆಯಲ್ಲಿ ರೈತರ ಪರವಾಗಿ ದನಿಯೆತ್ತಿ ಬಹಳಷ್ಟು ವಿಚಾರಗಳನ್ನು ಪ್ರಸ್ತಾಪಿಸಿದ್ದನ್ನು ನಾವು ನೋಡಿದ್ದೇವೆ. ಇಲ್ಲಿ ರೈತರ ಪ್ರತಿನಿಧಿಗಳಾಗಿ ನಂಜುಂಡಸ್ವಾಮಿಯವರು, ಬಾಬಾಗೌಡ ಪಾಟೀಲ್‌ರವರು ಶಾಸಕರಾಗಿದ್ದರು. ಹಿಂದಿನ ಸದನದಲ್ಲಿ ಪುಟ್ಟಣ್ಣಯ್ಯನವರು ರೈತರ ಪರವಾದ ನಾಯಕರಾಗಿ ಆರಿಸಿ ಬಂದು ಇಲ್ಲಿ ಮಾತನಾಡುವಂಥ ಅವಕಾಶ ಸಿಕ್ಕಿತ್ತು. ಆದರೆ, 1999ರ ನಂತರ ರೈತರ ಪ್ರತಿನಿಧಿಗಳಾಗಿ ಇಲ್ಲಿಗೆ ಬಂದಂಥ ಬಹುತೇಕ ಶಾಸಕರು ಇವೊತ್ತು ರೈತ ಕುಟುಂಬದಿಂದ ಬಂದವರಾಗಿದ್ದಾರೆ. ಆದರೆ, ರೈತ ಚಳವಳಿ ಹಿನ್ನೆಲೆಯಿಂದ ರೈತರ ಪರವಾಗಿ ಹೋರಾಟ ಮಾಡಿಕೊಂಡು ಬಂದ ವ್ಯಕ್ತಿಗಳ ಪ್ರಾತಿನಿಧ್ಯತೆ ಇವೊತ್ತು ವಿಧಾನಸಭೆಯಲ್ಲಿ ಕಡಿಮೆಯಾಗುತ್ತಿರುವುದರ ಕೊರಗು ಇದೆ. ಏಕೆಂದರೆ, ಮಾನ್ಯ ಪುಟ್ಟಣ್ಣಯ್ಯನವರು ಇಲ್ಲಿ ಮಾತನಾಡಿದ್ದನ್ನು ಕಂಡಿರುವಂತೆ ಪ್ರೊ: ನಂಜುಂಡಸ್ವಾಮಿಯವರು

ಸಹ ಮಾತನಾಡಿದ್ದನ್ನು ನೋಡಿದ್ದೇವೆ. ಅವರುಗಳು ರೈತರ ಪರವಾಗಿ ಹೆಚ್ಚು ದನಿ ಕೊಟ್ಟು ಇಲ್ಲಿ ಮಾತನಾಡುತ್ತಿದ್ದರು. ಇವೊತ್ತು ಆ ಕೊರತೆ ಈ ಸದನದಲ್ಲಿ ಕಾಣುತ್ತಿದೆ. ಹೀಗಾಗಿ, ಚಳವಳಿ ಮುಖಾಂತರ ಬಂದಿರುವ ರೈತ ಪ್ರತಿನಿಧಿಗಳಿಗೆ ಸೂಕ್ತ ಪ್ರಾತಿನಿಧ್ಯ ಸಿಗುವ ಬಗ್ಗೆ ನಾವೆಲ್ಲರೂ ಚಿಂತನೆ ಮಾಡಬೇಕಾಗಿದೆಯೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ರೈತ ಚಳವಳಿಯ ಹರಿಕಾರರಾದ ಪ್ರೊ: ನಂಜುಂಡಸ್ವಾಮಿಯವರು ಇವೊತ್ತು ನಮ್ಮ ಮಧ್ಯದಲ್ಲಿಲ್ಲ. ಅವರು ಹಾಕಿಕೊಟ್ಟ ಚಳವಳಿ ಮುಂದುವರೆಯಬೇಕು ಮತ್ತು ಮಾನ್ಯ ಖರ್ಗೆಯವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದಂಥ ಸಂದರ್ಭದಲ್ಲಿ ಕೆಲವೊಂದು ಮಾತುಗಳನ್ನು ಹೇಳಿದರು. ಇತ್ತೀಚೆಗೆ ಕ್ಯಾಬಿನೆಟ್ ಡಿಸಿಷನ್ ತೆಗೆದುಕೊಳ್ಳುವ ಮೂಲಕ ರೈತ ಚಳವಳಿಯಲ್ಲಿ ಭಾಗವಹಿಸಿದ ರೈತರುಗಳ ಮೇಲೆ ಹೂಡಲಾಗಿದ್ದ ಕೆಲವು ಮೊಕದ್ದಮೆಗಳನ್ನು ವಾಪಸ್ಸು ಪಡೆದಿದ್ದೇವೆಂದು ಹೇಳಿದರು. ಅದು ಕಾವೇರಿ ಕಣಿವೆ ವಿಚಾರದಲ್ಲಿ, ಇತ್ತೀಚೆಗೆ ನಡೆದ ಚಳವಳಿ ಸಂದರ್ಭದಲ್ಲಿ ಸನ್ಮಾನ್ಯ ಮಾದೇಗೌಡರು ಮತ್ತು ಇನ್ನಿತರ ರೈತ ಪ್ರಮುಖರು ನಡೆಸಿದಂಥ ಚಳವಳಿ ಸಂದರ್ಭದಲ್ಲಿ ರೈತರ ಮೇಲೆ ಹೂಡಿದಂಥ ಮೊಕದ್ದಮೆಗಳನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. ಅದೇ ರೀತಿ ಭೀಮಾ ನದಿ ಹೋರಾಟದಲ್ಲಿ ಬಿಜಾಪುರ ಭಾಗದಲ್ಲಿ ರೈತರ ಹೋರಾಟ ನಡೆದಾಗ ಅಲ್ಲಿಯ ರೈತ ಬಾಂಧವರ ಮೇಲೆ ಹೇಡಲಾಗಿದ್ದ ಕಟ್ಲೆಗಳನ್ನು ನೀವು ವಾಪಸ್ಸು ತೆಗೆದುಕೊಂಡಿರಿ. ಆದರೆ, ರೈತ ಸಂಘದ ವತಿಯಿಂದ ಕಳೆದ ಹತ್ತಾರು ವರ್ಷಗಳಿಂದ ಜರುಗಿದ ಚಳವಳಿಗಳಲ್ಲಿ ನಿರತರಾಗಿದ್ದ ರೈತ ಸಂಘದ ಕಾರ್ಯಕರ್ತರ ಮೇಲೆ ಸಾವಿರಾರು ಮೊಕದ್ದಮೆಗಳನ್ನು ಹೂಡಲಾಗಿದೆ. ನೀವು ಕೇವಲ ಕಾವೇರಿ ನದಿ ಕಣಿವೆ, ಭೀಮಾ ನದಿ ವಿಚಾರದಲ್ಲಿ ಇತ್ತೀಚೆಗೆ ಒಂದು ವರ್ಷದಲ್ಲಿ ನಡೆದ ಚಳವಳಿಯಲ್ಲಿ ಭಾಗವಹಿಸಿದ ರೈತರ ಮೇಲೆ ಹೇಡಲಾಗಿದ್ದ ಕಟ್ಲೆಗಳನ್ನು ವಾಪಸ್ಸು ತೆಗೆದುಕೊಂಡರಷ್ಟೇ ಸಾಲದು, ಕಳೆದ ಹತ್ತಾರು ವರ್ಷಗಳಿಂದ ರೈತ ಸಂಘದ ಕಾರ್ಯಕರ್ತರ ಮೇಲೆ ಹೂಡಲಾಗಿದ್ದ, ಅದು ಗ್ಯಾಟ್ ಒಪ್ಪಂದದ ಹಿನ್ನೆಲೆಯಲ್ಲಿ ನಡೆಸಿದ ಚಳವಳಿ ಇರಬಹುದು, ಅಂತರ್‌ರಾಷ್ಟ್ರೀಯ ಕಂಪನಿಗಳ ವಿರುದ್ಧ ನಡೆಸಿದ ಚಳವಳಿ ಇರಬಹುದು, ರೈತ ನಾಯಕರಾದ ನಂಜುಂಡಸ್ವಾಮಿಯವರ ಜೊತೆಗೆ ರೈತ ಸಂಘದ ಇನ್ನಿತರ ಕಾಯಕರ್ತರ ಮೇಲೆ ಏನೇನು ಖಟ್ಲೆಗಳನ್ನು ಹೂಡಲಾಗಿದೆಯೋ, ಕ್ರಿಮಿನಲ್ ಮೊಕದ್ದಮೆಗಳು ದಾಖಲಾಗಿವೆಯೋ ಅವುಗಳೆಲ್ಲವನ್ನೂ ವಾಪಸ್ಸು ತೆಗೆದುಕೊಂಡಾಗ ಮಾತ್ರ ಇಂದು ನಮ್ಮನ್ನು ಅಗಲಿರುವ ನಂಜುಂಡಸ್ವಾಮಿಯವರಿಗೆ ನಾವು ನಿಜವಾದ ರೀತಿಯಲ್ಲಿ ಶ್ರದ್ಧಾಂಜಲಿ ಅರ್ಪಿಸಿದಂತಾಗುತ್ತದೆ. ಈ ದಿಸೆಯಲ್ಲಿ ಸರ್ಕಾರ ಚಿಂತನೆ ಮಾಡಬೇಕೆಂದು ನಾನು ಹೇಳಬಯಸುತ್ತೇನೆ.

ಇದರ ಜೊತೆಗೆ ಇನ್ನಿತರ ಮುಖಂಡರಾದ ಮುನಿರಾಜಾರವರು ಇಂದು ನಮ್ಮೊಂದಿಗಿಲ್ಲ. ಅದೇ ರೀತಿ ವಾದಿರಾಜು ಅವರೂ ಸಹ ಇಲ್ಲ. ಚಲನಚಿತ್ರ ರಂಗದ ಹಿರಿಯ ಹಾಸ್ಯನಟರು ಮತ್ತು ನಿರ್ದೇಶಕ, ನಿರ್ಮಾಪಕರಾಗಿ ಕೆಲಸ ಮಾಡಿದಂಥ ವಾದಿರಾಜ್ ಅವರು ಇತ್ತೀಚೆಗೆ ನಿಧನರಾದರು. ವಾದಿರಾಜ್ ಅವರದ್ದು ಕುಬ್ಜ ವ್ಯಕ್ತಿತ್ವವಾದರೂ ಅವರ ಪ್ರತಿಭೆ, ಸಾಧನೆ ಅಮೋಘವಾದುದೆಂದು ನಾನು ಹೇಳಬೇಕಾಗುತ್ತದೆ. ಅವರು ನಿರ್ಮಿಸಿದಂಥ 'ನಾಂದಿ' 'ನಂದಾದೀಪ' ಇರಬಹುದು, ಸದಭಿರುಚಿಯ ಹಲವಾರು ಚಿತ್ರಗಳನ್ನು ನಿರ್ಮಿಸಿ ಹಾಸ್ಯನಟರಾಗಿಯೂ ಕೆಲಸ ಮಾಡಿದ್ದರು. ಸಮಾಜದಲ್ಲಿನ ಜ್ವಲಂತ ಸಮಸ್ಯೆಗಳ ಬಗ್ಗೆ ಕೆಲವು ಚಿತ್ರಣ ಕೊಡುವಂಥ ಕೆಲಸವನ್ನು ವಾದಿರಾಜ್‌ರವರು ಮಾಡಿದರು. ಒಬ್ಬ ಪ್ರತಿಭಾವಂತ ಚಲನಚಿತ್ರ ನಟ ಇವೊತ್ತು ನಮ್ಮ ಮಧ್ಯದಲ್ಲಿಲ್ಲ. ಇತ್ತೀಚೆಗೆ ಯಾರ್ಯಾರು

ನಿಧನರಾಗಿದ್ದಾರೋ ಅವರೆಲ್ಲರಿಗೂ ನಮ್ಮ ಪಕ್ಷದ ಪರವಾಗಿ ಅವರುಗಳ ಆತ್ಮಕ್ಕೆ ಶಾಂತಿ ಕೋರುವ ಮೂಲಕ ಅವರ ಕುಟುಂಬ ವರ್ಗದವರಿಗೆ ಆಗಿರುವ ದುಃಖ ಭರಿಸುವ ಶಕ್ತಿಯನ್ನು ದೇವರು ಕೊಡಲೆಂದು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

11.50 ಪಿ.ಎಂ

† ಶ್ರೀ ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) :- ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ನಮ್ಮ ರಾಜ್ಯದಲ್ಲಿ ವಿರೋಧ ಪಕ್ಷದ ನಾಯಕರು ಹೇಳಿದಂತೆ ಬಹಳ ಪ್ರಮುಖರಾದಂಥ ಮುಖಂಡರನ್ನು ನಾವು ಕಳೆದುಕೊಳ್ಳುತ್ತಿದ್ದೇವೆ. ಇದು ಏನೋ ಒಂದು ಆಶ್ಚರ್ಯಕರವಾದಂಥ ಮತ್ತು ದುಃಖಕರವಾದಂಥ ರೀತಿಯಲ್ಲಿ ಏನು ಮುಖಂಡರುಗಳ ಸರಣಿ ಕೊಲೆಗಳು, ಸರಣಿ ಮೃತ್ಯುಗಳಾಗುತ್ತಿವೆ. ಇದು ನಿಜವಾಗಿಯೂ ಎಲ್ಲರೂ ಆತಂಕ ಪಡತಕ್ಕಂಥ ಸನ್ನಿವೇಶ. ನಮಗೂ ಒಂದೊಂದು ಜವಾಬ್ದಾರಿ ವಹಿಸಿಕೊಂಡರೆ ಏನಾಗುತ್ತದೋ ಎಂಬ ಭಯ ಆಗುತ್ತಿದೆ. ಇದು ಎಲ್ಲಾ ಮುಖಂಡರಲ್ಲೂ ಮೂಡುವಂಥ ಪರಿಸ್ಥಿತಿ ಬಂದಿದೆ. ಇದಕ್ಕೆ ಕಾರಣವೇನೋ ಗೊತ್ತಿಲ್ಲ. ಒಟ್ಟಿನಲ್ಲಿ ನಮ್ಮ ಕಣ್ಣಿನ ಮುಂದೆ ಸುಮಾರು ಎರಡು ವರ್ಷಗಳಿಂದ ಇತ್ತೀಚೆಗೆ ಎಂತೆಂಥ ನಾಯಕರುಗಳ ಆಶ್ಚರ್ಯಕರವಾಗಿ ಮತ್ತು ದುಃಖಕರವಾಗಿ ತೀರಿಕೊಂಡಿದ್ದಾರೆ. ದಿವಂಗತ ಭೈರೇಗೌಡರು ಇರಬಹುದು, ವೈ.ಕೆ. ರಾಮಯ್ಯನವರಿರಬಹುದು, ನಾಗೇಗೌಡರು ಇರಬಹುದು, ಪ್ರೊಫೆಸರ್ ನಂಜುಂಡಸ್ವಾಮಿಯವರದಂತೂ ಸ್ವಯಂಕೃತ ಸಾವು ಎಂದು ನಾವು ಹೇಳಬಹುದು. ನಾಗೇಗೌಡರನ್ನು ಇಷ್ಟು ಬೇಗ ಸಾಯುತ್ತಾರೆಂದು ನಾವು ತಿಳಿದುಕೊಂಡಿರಲಿಲ್ಲ. ಏಕೆಂದರೆ, ಅವರಿಗೆ ಅರವತ್ತು ವಯಸ್ಸು ಆಗಿದ್ದರೂ ಅವರು ಐವತ್ತು ವರ್ಷದ ರೀತಿ ಕಾಣುತ್ತಿದ್ದರು. ಬಹಳ ಚಟುವಟಿಕೆಯಿಂದ ರಾಜಕಾರಣದಲ್ಲಿ ಎತ್ತಿದ ಕೈ. ಅವರದ್ದು ಕೆಲವು ದೌರ್ಬಲ್ಯಗಳು ಇತ್ತು. ಅದು ಬೇರೆ ಪ್ರಶ್ನೆ. ಆದರೆ ರಾಜಕಾರಣದಲ್ಲಿ ಪ್ರತಿದಿನ ಚಟುವಟಿಕೆಯಿಂದ ಇದ್ದಂಥ ಒಬ್ಬ ವ್ಯಕ್ತಿ. ಯಾವಾಗಲೂ ಸುದ್ದಿಯಲ್ಲಿರಬೇಕು ಎಂಬ ಹಂಬಲ ಅವರಿಗೆ, ಸುಮಾರು 1972ರಲ್ಲಿ ಅವರು ರಾಜಕೀಯಕ್ಕೆ ಬಂದದ್ದು 1972ರ ಚುನಾವಣೆಯಲ್ಲಿ ಪ್ರಥಮ ಬಾರಿಗೆ ಕಾಂಗ್ರೆಸ್‌ನ ಅಭ್ಯರ್ಥಿಯಾಗಿ ಕಿರುಗಾವಲು ಕ್ಷೇತ್ರದಿಂದ ಚುನಾವಣೆಗೆ ನಿಂತು ಅವರು ಕೆಲವೇ ಮತಗಳ ಅಂತರದಿಂದ ಪರಾಭವಗೊಂಡು, ಅದಾದಮೇಲೆ ಸನ್ಮಾನ್ಯ ಮುಖ್ಯಮಂತ್ರಿಗಳು ಆ ಪಕ್ಷದಲ್ಲಿ ಅವರಿಗೆ ಬಹಳ ಸಹಾಯವನ್ನು ಮಾಡಿದ್ದಾರೆ. ಬಹುಶಃ ನಾಗೇಗೌಡರ ಬೆಳವಣಿಗೆಗೆ ಅವರು ಹೆಚ್ಚಿನ ಬೆಂಬಲವನ್ನು ಕೊಟ್ಟಿದ್ದಾರೆಂದರೆ ತಪ್ಪಾಗಲಾರದು. ಅವರು ಕೈಗಾರಿಕಾ ಮಂತ್ರಿಯಾಗಿದ್ದಾಗ ನಾಗೇಗೌಡರನ್ನು ಸಕ್ಕರೆ ಕಾರ್ಖಾನೆಯ ಛೇರ್ಮನ್ ಆಗಿ ಮಾಡಿದ್ದರು, ಅನಂತರ ಅಸಿಟೇಟ್ ಕಂಪನಿಯ ನಿರ್ದೇಶಕರು, ಕಾಂಗ್ರೆಸ್‌ನ ಜಿಲ್ಲಾಧ್ಯಕ್ಷರು, ಅನಂತರ ಎರಡು ಬಾರಿ ವಿಧಾನ ಪರಿಷತ್ತಿಗೆ ಸದಸ್ಯರನ್ನಾಗಿ ಮಾಡಿ, ಕೊನೆಗೆ ಕಾಂಗ್ರೆಸ್‌ನಲ್ಲೇ ಶ್ರೀಮಾನ್ ವೀರಪ್ಪಮೊಯ್ಲಿಯವರ ಸರ್ಕಾರದಲ್ಲಿ ಕೆಲವು ಕಾಲ ಪಶುಸಂಗೋಪನಾ ಮಂತ್ರಿಯೂ ಆಗಿದ್ದರು. ಅದಾದಮೇಲೆ ಅವರಿಗೆ ಟಿಕೆಟಿನ ಭಯ ಬಂದಾಗ ಅವರು ನಮ್ಮ ಪಕ್ಷಕ್ಕೆ ಬಂದರು, ನಾವು ಏನನ್ನೂ ನೋಡದೆ 1994ರಲ್ಲಿ ಅವರನ್ನು ನಮ್ಮ ಪಕ್ಷದ ಅಭ್ಯರ್ಥಿಯಾಗಿ ನಿಲ್ಲಿಸಿದೆವು, ಅವರು ಗೆದ್ದರು. ಗೆದ್ದಮೇಲೆ ಅವರು ಹತ್ತೇ ವರ್ಷದಲ್ಲಿ ಅವರು ನಮ್ಮ ಪಕ್ಷದ ಅತ್ಯುನ್ನತವಾದ ಹುದ್ದೆಯನ್ನು ವಹಿಸಿಕೊಳ್ಳುವಂಥ ಅವಕಾಶ ಸಿಕ್ಕಿತು. ಕ್ಯಾಬಿನೆಟ್ ಮಂತ್ರಿಯಾದರು, ಆ ಮಂತ್ರಿಯಾದಾಗಲೂ ಸಹ ಬಹಳ ಚಟುವಟಿಕೆಯಿಂದ ನೀರಾವರಿ ಖಾತೆಯನ್ನು ವಹಿಸಿದರು. ಬಹುಶಃ ಏನೇ ಆರೋಪಗಳು

(† [illegible] ಪ್ರತಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಇದ್ದರೂ ಅವರು ಕೆಲಸ ಮಾಡಿರುವುದನ್ನು ನೋಡಿದರೆ ಎಲ್ಲರೂ ಮೆಚ್ಚತಕ್ಕದ್ದು. ಆಲಮಟ್ಟಿಯನ್ನು ಅಷ್ಟು ಎತ್ತರಕ್ಕೆ ತರಬೇಕಾದರೆ ಬಹಳ ಶ್ರಮವಹಿಸಿ ಅಲ್ಲಿಗೆ ಅಗಿಂದ್ದಾಗೆ ಭೇಟಿ ಕೊಟ್ಟು ಆ ಡ್ಯಾಂನ ಎತ್ತರವನ್ನು ಎತ್ತರಿಸಲು ಬಹಳ ಪ್ರಂಯತ್ನ ಮಾಡಿದರು. ಅದೇ ರೀತಿ ವಿಶ್ವೇಶ್ವರಯ್ಯ ನಾಲೆಯ ಆಧುನೀಕರಣಕ್ಕೆ ಹೆಚ್ಚು ಆಸಕ್ತಿಯನ್ನು ವಹಿಸಿ ಹಣವನ್ನು ಖರ್ಚು ಮಾಡಿದರು. ಹೆಚ್ಚು ಹಣ ಕರ್ನಾಟಕದಲ್ಲಿ ನೀರಾವರಿಗೆ ಖರ್ಚಾಗಿದ್ದರೆ ಅದು ಅವರ ಅವಧಿಯಲ್ಲಿಯೇ ಎಂದರೆ ತಪ್ಪಾಗಲಾರದು. ಅವರಲ್ಲಿ ಒಂದು ಗುಣವಿತ್ತು. ಯಾವ ಸಂದರ್ಭದಲ್ಲಿ ಬೇಕಾದರೂ ಅವರ ವೈರಿಗಳನ್ನೂ ಮಾತನಾಡಿಸುವ ದೊಡ್ಡತನವಿತ್ತು. ನನಗೂ ಅವರಿಗೂ ರಾಜಕೀಯದಲ್ಲಿ ಸ್ವಲ್ಪ ವ್ಯತ್ಯಾಸ ಬಂದಿತ್ತು. ಆದರೆ, ವೈಯಕ್ತಿಕವಾದಂಥ ವ್ಯತ್ಯಾಸವನ್ನು ನಮ್ಮ ಪಕ್ಷದಲ್ಲಿ ಯಾವತ್ತೂ ಸಹ ತೋರಿಸಿದವರಲ್ಲ. ಮತ್ತು ಕೆಲಸ ಮಾಡತಕ್ಕದ್ದರಲ್ಲೂ ನಾವಿಬ್ಬರೂ ಮಂತ್ರಿಗಳಾಗಿದ್ದೆವು, ಒಂದೇ ತಾಲ್ಲೂಕು, ಒಂದೇ ಊರಿನವರು, ಆದರೆ ನನ್ನ ಖಾತೆಗೆ ಅವರು ಬರುತ್ತಿರಲಿಲ್ಲ. ಅವರ ಖಾತೆಗೆ ನಾನು ಹೋಗುತ್ತಿರಲಿಲ್ಲ. ಅವರು ಒಂದು ರೀತಿ ನನ್ನ ಬಗ್ಗೆ ಗೌರವ ಮತ್ತು ಭಯವನ್ನು ಹೊಂದಿದ್ದರು. ನಾನೇ ಒಂದೊಂದು ಸಾರಿ ಅವರನ್ನು ಸಿಟ್ಟಿನಿಂದ ನೋಡಿದರೆ ಅವರು ನನ್ನನ್ನು ಪ್ರೀತಿಯಿಂದ ಮತನಾಡಿಸತಕ್ಕಂಥ ಒಬ್ಬ ವ್ಯಕ್ತಿ. ಅವರು ಎಷ್ಟೇ ಮನಸ್ಸಿನಲ್ಲಿದ್ದರೂ ತೋರಿಸಿಕೊಳ್ಳುತ್ತಿರಲಿಲ್ಲ. ಎಂಥ ಸಂದರ್ಭದಲ್ಲಾದರೂ ಅನುಸರಿಸಿಕೊಂಡು ಹೋಗತಕ್ಕ ಒಬ್ಬ ರಾಜಕಾರಣಿ. ಅವರು ಅಧ್ಯಕ್ಷರಾದ ಮೇಲಂತೂ ರಾಜ್ಯಾದ್ಯಂತ ಪ್ರವಾಸವನ್ನು ಮಾಡಿ ನಮ್ಮ ಪಕ್ಷಕ್ಕೆ ಚೈತನ್ಯವನ್ನು ತುಂಬುವಂತಹ ಪ್ರಯತ್ನವನ್ನು ಮಾಡಿದರು. ಎಲ್ಲಾ ಕಡೆ ಸಭೆಗಳನ್ನು ಮಾಡಿದರು. ಅವರ ಚಟುವಟಿಕೆಗಳನ್ನು ನೋಡಿ ಮಾನ್ಯ ರಾಮಕೃಷ್ಣ ಹೆಗಡೆಯವರು, ಅವರು ವೈಯಕ್ತಿಕವಾಗಿ ಎಷ್ಟೇ ವ್ಯತ್ಯಾಸಗಳು ಇದ್ದರೂ ಅವರಿಗೇ ಬೆಂಬಲವನ್ನು ಸೂಚಿಸಿದರು. ಕೊನೆಗೆ ರಾಮಕೃಷ್ಣಹೆಗಡೆಯರು ಸಾಯುವಾಗಲೂ ಇವರು ಅವರ ಜೊತೆಗೇ ಇದ್ದರು. ಅದು ಒಂದು ವಿಶಿಷ್ಟವಾದಂಥ ಸನ್ನಿವೇಶ. ರಾಜಕಾರಣದಲ್ಲಿ ಅನೇಕ ವ್ಯತ್ಯಾಸಗಳು ಮತ್ತು ಭಿನ್ನಾಭಿಪ್ರಾಯಗಳು ಬರುತ್ತದೆ. ಆದರೆ ರಾಜ್ಯದ ಹಿತ, ಪಕ್ಷದ ಹಿತ ಬಂದಾಗ ಅದನ್ನು ಇಬ್ಬರೂ ಮರೆತು ಒಂದೇ ಕಡೆ ಸೇರಿ ರಾಜಕಾರಣ ಮಾಡಿದುದು ನಿಜವಾಗಿಯೂ ನಾಗೇಗೌಡರು ಮತ್ತು ರಾಮಕೃಷ್ಣಹೆಗಡೆಯವರು ಬಹುಶಃ ಕರ್ನಾಟಕದ ಇತಿಹಾಸದಲ್ಲಿ ಇದೇ ಮೊದಲನೆಯದು ಎಂದು ನನ್ನ ಭಾವನೆ. ಏಕೆಂದರೆ, ರಾಮಕೃಷ್ಣ ಹೆಗಡೆಯವರು ಅಧಿಕಾರದಲ್ಲಿದ್ದಾಗ ಅಷ್ಟೊಂದು ಟೀಕೆಟಿಪ್ಪಣಿಗಳನ್ನು ಮಾಡಿದಂಥವರು ನಾಗೇಗೌಡರು. ಆದರೆ ಅದನ್ನೆಲ್ಲಾ ಮರೆತು ನಮ್ಮ ಪಕ್ಷದಲ್ಲಿದ್ದ ಅವರನ್ನೇ ಅಧ್ಯಕ್ಷರನ್ನಾಗಿ ಮಾಡತಕ್ಕ ದೊಡ್ಡತನವನ್ನು ರಾಮಕೃಷ್ಣಹೆಗಡೆಯವರು ತೋರಿಸಿದ್ದಾರೆ. ಮತ್ತು ರಾಮಕೃಷ್ಣಹೆಗಡೆಯವರಿಗೆ ನಾಗೇಗೌಡರು ಒಳ್ಳೆಯ ರೀತಿಯಲ್ಲಿ ಸಹಕಾರವನ್ನೂ ಕೊಟ್ಟಿದ್ದಾರೆ. ಆ ರೀತಿ ಕೆಲಸ ಮಾಡಿದಂಥವರು. ಅವರ ನಿಧನ ನಮ್ಮ ಪಕ್ಷಕ್ಕೆ ಮಾತ್ರವಲ್ಲ ರಾಜ್ಯಕ್ಕೂ ತುಂಬಲಾರದ ನಷ್ಟವಾಗಿದೆ. ಅವರು ಯಾವಾಗಲೂ ಸುದ್ಧಿಯಲ್ಲಿರತಕ್ಕ ಒಬ್ಬ ರಾಜಕಾರಣಿ. ಅವರ ಸಾವಿನಲ್ಲಿ ಮಳವಳ್ಳಿಗೆ ಹೋದಾಗ ಸುಮಾರು ಐವತ್ತು ಸಾವಿರಕ್ಕೂ ಹೆಚ್ಚು ಜನ ನೆರೆದಿದ್ದರು. ಇದು ಏನು ತೋರಿಸುತ್ತದೆಂದರೆ, ಒಬ್ಬ ವ್ಯಕ್ತಿ ಸತ್ತಮೇಲೆ ಎಷ್ಟು ಜನಪ್ರಿಯರಾಗಿದ್ದರು ಎಂಬುದನ್ನು ತೋರಿಸುತ್ತದೆ. ಅವರ ನಿಧನ ನಿಜವಾಗಿಯೂ ಬಹಳ ದುಃಖವನ್ನು ತಂದಿದೆ. ನಾವು ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ ನಾನು ಅವರನ್ನು ಅನುಸರಿಸಿಕೊಂಡು ಹೋಗತಕ್ಕ ಕೆಲಸವನ್ನು ಮಾಡಿದ ತೃಪ್ತಿ ಇದೆ. ಅವರು ಅಧ್ಯಕ್ಷರಾಗಿರುವಾಗ, ನಾನು ಈ ಪಕ್ಷದ ನಾಯಕನಾಗಿರುವಾಗ ಒಂದೇ ಊರಿನವರಾಗಿದ್ದರೂ

ಒಂದು ರೀತಿ ಸಹಕಾರದಿಂದ ನಡೆದುಕೊಂಡು ಹೋಗಿದ್ದೆವು. ಅವರ ನಿಧನದಿಂದ ಅವರ ಕುಟುಂಬಕ್ಕೆ ಮಾತ್ರವಲ್ಲ ರಾಜ್ಯಕ್ಕೆ ದುಃಖವಾಗಿದೆ. ಆ ದುಃಖವನ್ನು ತುಂಬತಕ್ಕ ಶಕ್ತಿ ಅವರ ಕುಟುಂಬದವರಿಗೆ ಸಿಗಲಿ ಎಂದು ಹಾರೈಸುತ್ತೇನೆ.

ಇನ್ನು ಪ್ರೊಫೆಸರ್ ನಂಜುಂಡಸ್ವಾಮಿಯವರು ವಿಶಿಷ್ಟವಾದಂಥ ಮುಖಂಡರು. ಅವರ ವಿದ್ಯಾರ್ಥಿದಿಸೆಯಿಂದಲೂ, ಅವರು ಒಳ್ಳೆಯ ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದಿಂದ ಬಂದಂಥವರು. ಅವರ ತಂದೆ ಸುಮಾರು ಐವತ್ತು ಅರವತ್ತು ವರ್ಷಗಳ ಹಿಂದೆ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. ಆ ಕುಟುಂಬದಲ್ಲಿ ಹುಟ್ಟಿದಂಥ ವ್ಯಕ್ತಿ. ವಿದ್ಯಾಭ್ಯಾಸವನ್ನು ಮೈಸೂರಿನಲ್ಲಿ ಮತ್ತು ಬೆಂಗಳೂರಿನಲ್ಲಿ ಮಾಡಿ ಅಂತರ್‌ರಾಷ್ಟ್ರೀಯ ಮಟ್ಟದಲ್ಲೂ ವ್ಯಾಸಂಗ ಮಾಡಿ ಹೆಚ್ಚು ಜ್ಞಾನವನ್ನು ಅವರು ಸಂಪಾದನೆ ಮಾಡಿಕೊಂಡಿದ್ದರು. ಅದರಲ್ಲೂ ಕಾನೂನು ವಿಷಯದಲ್ಲಂತೂ ಪ್ರಧ್ಯಾಪಕರಾಗಿ ಹೆಚ್ಚಿನ ಜ್ಞಾನವನ್ನು ಸಂಪಾದನೆ ಮಾಡಿಕೊಂಡಿದ್ದರು. ರೈತ ಸಂಘಟನೆಯಲ್ಲಿ ಅವರು ಹೆಚ್ಚಿನ ಆಸಕ್ತಿಯನ್ನು ವಹಿಸಿ 1980 ರಲ್ಲಿ ಅದನ್ನು ಕಟ್ಟಿದರು. ಕೇವಲ ಎರಡು ವರ್ಷಗಳಲ್ಲಿ ಅದು ಬಹಳ ಪ್ರಬಲವಾಗಿ ಬೆಳೆದಂಥ ಒಂದು ಸಂಸ್ಥೆಯಾಯಿತು. ರುದ್ರಪ್ಪನವರು ವಯಸ್ಸಾಗಿದ್ದರೂ ಅವರ ಮುಖಂಡತ್ವದಲ್ಲಿ ರೈತಸಂಘಟನೆಯ ದೇಹ ರುದ್ರಪ್ಪನವರಾಗಿದ್ದರೆ ಅದರ ಮೆದುಳು ಪ್ರೊಫೆಸರ್ ನಂಜುಂಡಸ್ವಾಮಿಯವರದ್ದಾಗಿತ್ತು. ಮತ್ತು ಸುಂದರೇಶ್‌ರವರು ಸಂಘಟನೆಯ ಚತುರರು. ಈ ಮೂವರ ಸಂಗಮದಿಂದ ರೈತಸಂಘ ಬಹಳ ಚೆನ್ನಾಗಿ ಬೆಳೆಯಿತು. ಬಹುಶಃ ಪ್ರಥಮಬಾರಿಗೆ ಕರ್ನಾಟಕದಲ್ಲಿ ಕಾಂಗ್ರೇಸೇತರ ಸರ್ಕಾರ ಆಡಳಿತಕ್ಕೆ ಬರಬೇಕಾದರೆ, 1982ರ ಚುನಾವಣೆಯಲ್ಲಿ ರೈತಸಂಘದವರು ಆಗಿನ ಜನತಾಪಕ್ಷಕ್ಕೆ ಬೆಂಬಲವನ್ನು ಕೊಡದಿದ್ದರೆ ಬಹುಶಃ ನಾವು ಚುನಾವಣೆಯಲ್ಲಿ ಗೆಲ್ಲಲ್ಲು ಆಗುತ್ತಿರಲಿಲ್ಲ. ಅದನ್ನು ನಾನು ಈ ಸಂದರ್ಭದಲ್ಲಿ ನೆನಸಿಕೊಳ್ಳುತ್ತಿದ್ದೇನೆ. ಆ ಚುನಾವಣೆಯ ಸಂದರ್ಭದಲ್ಲಿ ಮದ್ಯವನ್ನು ಹಂಚಲು ರೈತ ಸಂಘದ ಕಾರ್ಯಕರ್ತರು ಅವಕಾಶವನ್ನು ಕೊಡಲಿಲ್ಲ. ಪ್ರಾಮಾಣಿಕವಾಗಿ ಅವರು ನಮ್ಮ ಜೊತೆ ಸಹಕಾರವನ್ನು ಕೊಟ್ಟು ಮೊದಲಬಾರಿಗೆ ಕಾಂಗ್ರೇಸೇತರ ಸರ್ಕಾರ ಅಧಿಕಾರಕ್ಕೆ ಬರಲು ಕಾರಣಕರ್ತರಾದರು. ಅದರಲ್ಲಿ ಇವರ ಪಾತ್ರ ಬಹಳ ದೊಡ್ಡದು. ಅದಾದಮೇಲೆ ಅನೇಕ ಸಂದರ್ಭದಲ್ಲಿ ಸ್ವಲ್ಪ ಭಿನ್ನಾಭಿಪ್ರಾಯಗಳು ರೈತ ಸಂಘದಲ್ಲಿ ಬಂದು ಒಡಕು ಉಂಟಾಗಿದ್ದರೂ ಅವರು ಎದೆಗುಂದದೆ ಆತ್ಮಸ್ಥೈರ್ಯದಿಂದ ಆ ಸಂಘಟನೆಯನ್ನು ನಡೆಸಿಕೊಂಡು ಹೋದರು. ತೊಂಭತ್ತರ ದಶಕದಲ್ಲಿ ರಾಷ್ಟ್ರ ಗ್ಯಾಟ್ ಒಪ್ಪಂದದ ವಿಚಾರದಲ್ಲಿ, WTOಬಗ್ಗೆ ನೀತಿ ನಿಯಮಗಳನ್ನು ರಚನೆ ಮಾಡುವಾಗ ಬಹಳ ಪ್ರಬಲವಾಗಿ ವಿರೋಧವನ್ನು ಮಾಡಿದರು. ಅವರು ಕೇವಲ ರಾಜಕೀಯವಾಗಿ ಅದರ ಬಗ್ಗೆ ಪ್ರತಿಭಟನೆಯನ್ನು ಮಾಡಲಿಲ್ಲ. ನಿಜವಾಗಿಯೂ ರೈತರ ಹಿತ್ ಬಗ್ಗೆ ಅಧ್ಯಯನ ಮಾಡಿ WTO ಒಪ್ಪಂದದ ಬಗ್ಗೆ ಬಹಳ ವಿರೋಧ ಮಾಡಿ ಕೇವಲ ರಾಜ್ಯದಲ್ಲಿ ಮಾತ್ರವಲ್ಲ ರಾಷ್ಟ್ರಮಟ್ಟದಲ್ಲಿ ದೊಡ್ಡದೊಡ್ಡ ಸಭೆಗಳನ್ನು ಮಾಡಿ, ವಿಚಾರಗೋಷ್ಠಿಗಳನ್ನು ಮಾಡಿ ರೈತರನ್ನು ಬಡಿದು ಎಬ್ಬಿಸತಕ್ಕಂಥ ಕೆಲಸವನ್ನು ಮಾಡಿದರು. ಅವರಿಗೆ ಇಡೀ ಕರ್ನಾಟಕದ ರೈತ ಮುಖಂಡತ್ವ ಮಾತ್ರವಲ್ಲ. ಭಾರತ ದೇಶದ ರೈತ ಮುಖಂಡತ್ವ ಕೂಡ ಅವರಿಗೆ ಸಿಕ್ಕಿತ್ತು. ಏಕೆಂದರೆ, ಟಿಕಾಯತ್ ಮುಂತಾದ ದೇಶದ ಬೇರೆ ಬೇರೆ ಭಾಗಗಳಲ್ಲಿ ಇರತಕ್ಕಂಥ ರೈತ ನಾಯಕರುಗಳಿಗೆ ಇಂಗ್ಲೀಷ್ ಅಷ್ಟಾಗಿ ಬರುತ್ತಿರಲಿಲ್ಲ. ಅವರಿಗೆ ಸಮಸ್ಯೆಗಳು ಗೊತ್ತಿತ್ತು. ರೈತರ ಬಗ್ಗೆ ಹೋರಾಟಗಳನ್ನು ಮಾಡಿಕೊಂಡೇ ಬಂದಿದ್ದರು. ಆದರೆ ಅವರಿಗೆ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ

ಅಥವಾ ದೊಡ್ಡ ದೊಡ್ಡ ಅಧಿಕಾರಿಗಳ ಸಭೆಗಳಲ್ಲಿ ಇಂಗ್ಲೀಷ್‌ನಲ್ಲಿ ಮಾತನಾಡತಕ್ಕ ನಾಲೆಡ್ಜ್ ಇರಲಿಲ್ಲ. ಆದರೆ ಪ್ರೊಫೆಸರ್‌ರವರು ಇಂಗ್ಲೀಷ್‌ನಲ್ಲಿ ಉತ್ತಮವಾದಂತಹ ವಾಗ್ಮಿಯಾಗಿದ್ದರು. ಅವರು ಎಷ್ಟು ಚೆನ್ನಾಗಿ ವಿಚಾರಗಳನ್ನು ತಿಳಿದುಕೊಂಡಿದ್ದರು ಎಂದರೆ, ಬಹುಶಃ ಯಾವುದೇ ಸಂದರ್ಭದಲ್ಲಾದರೂ ಪತ್ರಿಕೆಗಳಿಗೆ ತಿಳಿಯದೇ ಇದ್ದುದ್ದನ್ನು, ಅವರಿಗೇ ತಿಳಿಯುವಂತೆ ಹೇಳುತ್ತಿದ್ದರು. ಅವರು ಪ್ರತಿಯೊಬ್ಬ ಮುಖಂಡರನ್ನು ಮತ್ತು ಅವರ ಕಾರ್ಯಕರ್ತರನ್ನು ಕುಳ್ಳಿರಿಸಿಕೊಂಡು, ಅಧ್ಯಯನ ಮಾಡಿಕೊಂಡು ಅವರಿಗೆ ತಿಳುವಳಿಕೆ ಹೇಳಿಕೊಡುತ್ತಿದ್ದರು. ವಾದ ಮಾಡಬೇಕಾದರೆ, ಯಾವ ರೀತಿಯಾಗಿ ವಿಚಾರವನ್ನು ತಿಳಿದುಕೊಂಡು ವಾದ ಮಾಡಬೇಕಾಗುತ್ತದೆ ಎಂಬ ಬಗ್ಗೆ ಅವರು ಪ್ರತಿಯೊಬ್ಬರಿಗೂ ಕೂಡ ಮಾಸ್ಟರ್ ರೀತಿಯಲ್ಲಿ ಪಾಠವನ್ನು ಮಾಡಿ ಅವರನ್ನು ತಯಾರು ಮಾಡುತ್ತಿದ್ದರು. ಯಾವುದೇ ಅನ್ಯಾಯದ ವಿರುದ್ಧ ಅನೇಕ ರೀತಿಯ ಹೋರಾಟದ ವಿಧಾನಗಳನ್ನು ಕರ್ನಾಟಕದಲ್ಲಿ ಕಂಡು ಹಿಡಿದುಕೊಟ್ಟವರು ಪ್ರೊಫೆಸರ್ ನಂಜುಂಡಸ್ವಾಮಿಯವರಾಗಿದ್ದರು. ಅವರು ಅನೇಕ ರೀತಿಯ ವಿಭಿನ್ನವಾದಂತಹ ಚಳುವಳಿಗಳು ಮತ್ತು ಪ್ರತಿಭಟನೆಗಳನ್ನು ಮಾಡಿ, ಅವರು ನಮ್ಮ ಕರ್ನಾಟಕದಲ್ಲಿ ಹೆಸರು ಮಾಡಿದ್ದಾರೆ. ಒಂದು ಬಾರಿ ನಮ್ಮ ಮಾನ್ಯ ರಾಮಕೃಷ್ಣ ಹೆಗಡೆಯವರ ಸರ್ಕಾರ ಇದ್ದಾಗ ಹೋರಾಟ ಮಾಡಿ ವಿಧಾನ ಸೌಧದಲ್ಲಿ ಅವರು ಧರಣಿ ಕುಳಿತುಕೊಂಡರು. ರಾತ್ರಿಯೆಲ್ಲಾ ಇವರು ಇಲ್ಲೇ ಇದ್ದರು. ಹೋಗಲೇ ಇಲ್ಲ. ಅವರಿಗಾಗಿ ಇಲ್ಲೇ ಊಟ ತರಿಸಿಕೊಡಲಾಯಿತು. ನಮ್ಮ ರಾಮಕೃಷ್ಣ ಹೆಗಡೆಯವರ ಸರ್ಕಾರ ಅವರನ್ನು ಹೊರಗೂ ಹಾಕಿಸಲಿಲ್ಲ ಅಥವಾ ಇನ್ನೇನನ್ನೂ ಮಾಡಲಿಲ್ಲ. ಅವರು ನಾನು ಇಲ್ಲೇ ಉಳಿದುಕೊಳ್ಳುತ್ತೇನೆ ಎಂದು ಅವರು ಹೇಳಿದಾಗ, ನಾವು ಅವರಿಗೆ ಇಲ್ಲೇ ಉಳಿದುಕೊಳ್ಳಿ ಎಂದು ಹೇಳಿದೆವು. ಅವರಿಗೆ ಊಟ, ತಿಂಡಿ ಎಲ್ಲವನ್ನೂ ಕೊಟ್ಟು ಅವರ ಅತಿಥ್ಯ ಮಾಡಿ ನಾವು ಅವರನ್ನು ಚೆನ್ನಾಗಿ ನೋಡಿಕೊಂಡೆವು. ಅವರು ಒಂದು ತರಹ ಹಠಮಾರಿಯಾಗಿದ್ದರು. ಅವರು ಏನು ಮಾಡಬೇಕೆಂದು ಅಂದುಕೊಳ್ಳುತ್ತಿದ್ದರೋ ಅದನ್ನು ಮಾಡೇ ಮಾಡಬೇಕು ಅನ್ನತಕ್ಕಂಥ ಛಲ ಅವರಲ್ಲಿತ್ತು. ಅವರು ಯಾವತ್ತೂ ತಮ್ಮ ಆತ್ಮಸ್ಥೈರ್ಯವನ್ನು ಕಳೆದುಕೊಂಡಿರಲಿಲ್ಲ. ಅವರು ಅಧಿಕಾರಕ್ಕೂ ಕೂಡ ಆಸೆ ಪಡಲಿಲ್ಲ. ಅವರು ಅಧಿಕಾರಕ್ಕೆ ಆಸೆ ಪಟ್ಟಿದವರಾಗಿದ್ದರೆ ಬಹುಶಃ ಯಾರ ಜೊತೆಗಾದರೂ ಸಹ ಹೊಂದಾಣಿಕೆ ಮಾಡಿಕೊಂಡು, ಯಾವುದಾದರೂ ಒಂದು ಸ್ಥಾನಮಾನವನ್ನು ಇವತ್ತು ಪಡೆದುಕೊಳ್ಳಬಹುದಾಗಿತ್ತು. ಆದರೆ ಅದನ್ನು ಅವರು ಮಾಡಲಿಲ್ಲ. ಅವರು ಯಾವ ರೀತಿಯಾಗಿ ಹೋರಾಟ ಮಾಡಿದರು ಅಂದರೆ, ರೈತರಿಗೆ ತಮ್ಮ ಬೆಳೆಗಳಿಗೆ ವೈಜ್ಞಾನಿಕವಾದಂತಹ ಬೆಲೆ ಸಿಗಬೇಕು. ರೈತನ ಕಷ್ಟ ಹೇಗಿದೆ ಮತ್ತು ಈ ಸರ್ಕಾರದ ಆರ್ಥಿಕ ವ್ಯವಸ್ಥೆಯೊಳಗಡೆ ಯಾವ ರೀತಿಯಾಗಿ ರೈತ ಶೋಷಣೆಯಾಗುತ್ತಿದ್ದಾನೆ. ಅವನು ಬೆಳೆದಂತಹ ಬೆಳೆಗೆ ವೈಜ್ಞಾನಿಕವಾದಂತಹ ಬೆಲೆ ಏಕೆ ಸಿಗುತ್ತಿಲ್ಲ? ಅದನ್ನು ಯಾವ ರೀತಿಯಾಗಿ ಹೊಂದಿಸಿ ಕೊಡಬೇಕು ಎಂಬ ಬಗ್ಗೆ ಪ್ರತಿಯೊಂದಕ್ಕೂ ಅಂಕಿ ಅಂಶಗಳ ಸಮೇತ ಸರ್ಕಾರದ ವಿರುದ್ಧವಾಗಿ ಅವರು ಹೋರಾಟವನ್ನು ಮಾಡುತ್ತಿದ್ದರು. ಈ ಸಮಾಜದಲ್ಲಿ ಶೋಷಣೆಗೆ ಒಳಗಾಗಿರತಕ್ಕವರು ರೈತ ಸಮುದಾಯ, ದಲಿತ ಸಮುದಾಯ ಮತ್ತು ಮಹಿಳೆಯರ ಸಮುದಾಯ. ದಲಿತ ಸಂಘಟನೆ ಮತ್ತು ರೈತರ ಸಂಘಟನೆ ಎರಡೂ ಒಟ್ಟಾಗಿ ಹೋಗಬೇಕೆಂಬ ಕನಸನ್ನು ಅವರು ಕಂಡಿದ್ದರು. ಈ ಶೋಷಣೆಯಲ್ಲಿ ಮಹಿಳೆಯರಿಗೆ ಯಾವುದೇ ಜಾತಿ ಇಲ್ಲ. ಎಲ್ಲಾ ಜಾತಿಯ ಮಹಿಳೆಯರ ಶೋಷಣೆಯೂ ಸಹ ಆಗುತ್ತಿದೆ. ದಲಿತರೂ ಶೋಷಿತರಾಗುತ್ತಿದ್ದಾರೆ, ರೈತರೂ ಕೂಡ ಶೋಷಿತರಾಗುತ್ತಿದ್ದಾರೆ. ಈ ಮೂರೂ ವರ್ಗಗಳನ್ನು

ಒಟ್ಟಾಗಿ ಕೂಡಿಸಿ ಶೋಷಿತ ವರ್ಗದವರಿಗೆ ಹೋರಾಟ ಮಾಡತಕ್ಕಂಥದ್ದನ್ನು ನಾವು ಹಮ್ಮಿಕೊಂಡರೆ, ಬಹುಶಃ ಇದೇ ನಾವು ಅವರಿಗೆ ಸಲ್ಲಿಸತಕ್ಕಂಥ ಶ್ರದ್ಧಾಂಜಲಿ ಎಂದು ನಾನು ಭಾವಿಸುತ್ತೇನೆ. ಈ ಸಂದರ್ಭದಲ್ಲಿ ಇನ್ನೊಂದು ಸಲಹೆಯನ್ನು ನಾನು ಕೊಡಬಯಸುತ್ತೇನೆ. ಆ ರೀತಿ ಚಳುವಳಿಯಿಂದ, ವೈಜ್ಞಾನಿಕವಾಗಿ ರೈತರ ಸಮಸ್ಯೆಯನ್ನು ಯಾವುದೇ ರೀತಿಯ ರಾಜಿಯಾಗದೇ ಹೋರಾಟ ಮಾಡತಕ್ಕಂಥ ಇನ್ನೊಬ್ಬ ವ್ಯಕ್ತಿ ಸಿಗುವುದು ಬಹಳ ಕಷ್ಟ. ಅವರ ಜ್ಞಾಪಕಾರ್ಥವಾಗಿ ರಾಜ್ಯ ಸರ್ಕಾರ ಒಂದು ರೈತ ಭವನವನ್ನಾದರೂ ಕಟ್ಟಿಸಿ ಅವರ ಹೆಸರನ್ನು ಇಡತಕ್ಕಂಥದ್ದು ಬಹಳ ಒಳ್ಳೆಯದು. ನಮ್ಮ ಮಾನ್ಯ ನಜೀರ್‌ಸಾಬ್ ಅವರು ತೀರಿಕೊಂಡ ಮೇಲೆ ಅವರ ಹೆಸರಿನಲ್ಲಿ "ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ಸಂಸ್ಥೆ" ಎಂಬ ಹೆಸರಿನಲ್ಲಿ ಸಂಸ್ಥೆಯೊಂದನ್ನು ಸ್ಥಾಪಿಸಿರುವ ರೀತಿಯಲ್ಲಿ, ರೈತರ ಸಂಸ್ಥೆಗಳ ಅಭಿವೃದ್ಧಿಗೋಸ್ಕರ ಒಂದು ಸಂಸ್ಥೆಯೊಂದನ್ನು ಸರ್ಕಾರ ಅಭಿವೃದ್ಧಿ ಮಾಡತಕ್ಕಂಥದ್ದು ಬಹಳ ಒಳ್ಳೆಯದು. ಅದಕ್ಕೆ ಪ್ರೊಫೆಸರ್ ನಂಜುಂಡಸ್ವಾಮಿಯವರ ಹೆಸರನ್ನು ಇಟ್ಟರೆ ಬಹುಶಃ ಅದು ಅರ್ಥಪೂರ್ಣವಾಗುತ್ತದೆ ಎಂದು ನಾನು ಸರ್ಕಾರಕ್ಕೆ ಸಲಹೆಯನ್ನು ಕೊಡಬಯಸುತ್ತೇನೆ. ಅವರಿಗೆ ಇಬ್ಬರೇ ಮಕ್ಕಳು, ಒಬ್ಬ ಹುಡುಗ ಮತ್ತು ಒಬ್ಬ ಹುಡುಗಿ. ದಿವಂಗತ ನಾಗೇಗೌಡರಿಗೂ ಇಬ್ಬರೇ ಮಕ್ಕಳು, ಒಬ್ಬ ಹುಡುಗ ಮತ್ತು ಹುಡುಗಿ. ಪ್ರೊಫೆಸರ್ ನಂಜುಂಡಸ್ವಾಮಿಯವರು ಬಹಳ ಲೇಟಾಗಿ ಮದುವೆಯಾಗಿದ್ದರು. ಅವರ ಮಕ್ಕಳು ಇನ್ನೂ ಚಿಕ್ಕವರಾಗಿದ್ದಾರೆ. ಅವರ ಆರೋಗ್ಯವನ್ನು ಅವರೇ ಕೆಡಿಸಿಕೊಂಡರು. ಅವರು ಯಾವಾಗಲೂ chain smoker. ನಮ್ಮ ದಿವಂಗತ ಅಜೀಜ್‌ಸೇಟ್‌ರವರು ಯಾವ ರೀತಿಯಾಗಿ ಒಂದರ ಮೇಲೊಂದು ಸಿಗರೇಟ್ ಅನ್ನು ಸೇದುತ್ತಿದ್ದರೋ ಅದೇ ರೀತಿಯಲ್ಲಿ ನಮ್ಮ ನಂಜುಂಡಸ್ವಾಮಿಯವರೂ ಸಹ ಸಿಗರೇಟ್‌ಗಳನ್ನು ಸೇದುತ್ತಿದ್ದರು. ಅವರನ್ನು ನೆನಸಿಕೊಂಡರೆ ಬಹಳ ದುಃಖವಾಗುತ್ತದೆ. ಅವರ ಆರೋಗ್ಯದ ಬಗ್ಗೆ ಅವರು ಯಾವತ್ತೂ ಚಿಂತೆಯನ್ನೇ ಮಾಡಲಿಲ್ಲ. ಅವರು ಹಗಲೂ-ರಾತ್ರಿ ಚರ್ಚೆ, ಚಿಂತನೆ ಮತ್ತು ಹೋರಾಟವನ್ನೇ ಮಾಡುತ್ತಾ ಬಂದವರಾಗಿದ್ದಾರೆ. ಅವರ ಸಾವಿನ ದುಃಖವನ್ನು ಭರಿಸತಕ್ಕಂಥ ಶಕ್ತಿಯನ್ನು ಭಗವಂತನು ಅವರ ಕುಟುಂಬ ವರ್ಗದವರಿಗೆ ಕೊಡಲೆಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ. ದಿವಂಗತ ಮುನಿರಾಜುರವರೂ ಸಹ ಹಿಂದುಳಿದ ವರ್ಗಗಳವರ ಏಳಿಗೆಗಾಗಿ ಬಹಳಷ್ಟು ಹೋರಾಟ ಮಾಡಿದ್ದಾರೆ. ಅವರು ತಮ್ಮ ಜಿಲ್ಲೆಯವರು. ಅವರು ಮೊನ್ನೆ CETನಲ್ಲಿ ಕೆಲವೊಂದು ಗೊಂದಲಗಳು ಆದಾಗ, ಅವರು ಕಾಂಗ್ರೆಸ್ಸಿನ ಸದಸ್ಯರಾಗಿದ್ದರೂ, ಆ ಒಂದು ಆಯೋಗದ ಅಧ್ಯಕ್ಷರಾಗಿದ್ದರೂ ಕೂಡ, ಅವರು ನಮ್ಮ ಜೊತೆಗೆ ಬಂದು ಆ ಬಗ್ಗೆ ಚರ್ಚೆ ಮಾಡಿ, ನೀವು ಹಿಂದೆ ಮಂತ್ರಿಗಳಾಗಿದ್ದಾಗ ಒಂದು ನಿಯಮಾವಳಿಗಳನ್ನು ಜಾರಿಗೆ ತಂದು ಒಳ್ಳೆಯ ಪದ್ಧತಿಯನ್ನು ಜಾರಿಗೆ ತಂದಿದ್ದೀರಿ, ಈಗ ನೀವೇ ಹೋರಾಟ ಮಾಡಿ, ಇಷ್ಟೊಂದು ಸೀಟುಗಳು ಹಿಂದುಳಿದ ವರ್ಗದವರಿಗೆ ಕಡಿಮೆಯಾಗುತ್ತಿವೆ. ಈ ಬಗ್ಗೆ ತಾವು ವಾದ ಮಾಡಿ ಎಂದು ಅವರು ನನ್ನ ಹತ್ತಿರ ಬಂದು ಕೇಳಿಕೊಂಡಿದ್ದರು. ಅಂದರೆ, ಅವರು ಯಾವುದೇ ಪಕ್ಷದಲ್ಲಿದ್ದರೂ ಸಹ ಹಿಂದುಳಿದ ವರ್ಗದವರಿಗೆ ಅನ್ಯಾಯ ಆದಾಗ, ನಮ್ಮ ಜೊತೆಗೂ ಚರ್ಚೆ ಮಾಡಿ, ಹೋರಾಟ ಮಾಡಬೇಕು ಎನ್ನುವಂತಹ ನಿಲುವನ್ನು ತೆಗೆದುಕೊಂಡಿದ್ದರು. ಅದರಿಂದ ನಾನು ಅವರಿಗೆ ಬಹಳ ಹತ್ತಿರದವನಾಗಿದ್ದೆ. ಅವರ ನಿಧನದಿಂದ ಸಹ ಹಿಂದುಳಿದ ವರ್ಗದವರಿಗೆ ನಷ್ಟವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ದಿವಂಗತ ವಾದಿರಾಜ್‌ರವರು ಚಲನಚಿತ್ರ ರಂಗದಲ್ಲಿ ಬಹಳ

ಹೆಸರುವಾಸಿಯಾದಂತಹವರು. ನಾವೆಲ್ಲಾ ಬಹಳ ವರ್ಷಗಳಿಂದ ಅವರ ಅನೇಕ ಚಿತ್ರಗಳನ್ನು ನೋಡಿದ್ದೇವೆ. ಹಾಸ್ಯ ಪಾತ್ರದಲ್ಲಿ ಅವರು ಎತ್ತಿದ ಕೈ. ಅವರು ಇವತ್ತು ನಿಧನರಾಗಿದ್ದಾರೆ. ಅವರಿಗೂ ಸಹ ನನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ. ಮಾನ್ಯ ಅಧ್ಯಕ್ಷರು ಇವತ್ತು ಸದನದಲ್ಲಿ ಮಂಡಿಸಿರತಕ್ಕಂಥ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಪಕ್ಷದ ಪರವಾಗಿ ನಾನು ಬೆಂಬಲವನ್ನು ಸೂಚಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† **ಶ್ರೀ ಸಿ. ಚೆನ್ನಿಗಪ್ಪ (ಕೊರಟಗೆರೆ)** :– ಸನ್ಮಾನ್ಯ ಅಧ್ಯಕ್ಷರೇ, ನಾಗೇಗೌಡರದ್ದು ಅಕಾಲಿಕ ಮರಣ ಎಂದು ಹೇಳಬಹುದು. ಈ ಒಂದು ಸದನದಲ್ಲಿ ಅವರು ಎರಡು ಬಾರಿ ಮಂತ್ರಿಗಳಾಗಿ, ಶಾಸಕರಾಗಿ, ವಿಧಾನ ಪರಿಷತ್ತಿನ ಸಚೇತಕರಾಗಿ ಬಹಳ ಉತ್ತಮವಾದಂತಹ ಸೇವೆ ಮಾಡಿದಂತಹ ಸನ್ಮಾನ್ಯ ನಾಗೇಗೌಡರ ನಿಧನದಿಂದ ಇವತ್ತು ಒಬ್ಬ ರೈತ ನಾಯಕ, ಅತ್ಯುತ್ತಮವಾದಂತಹ ರಾಜಕಾರಣಿ, ತತ್ವ ಆಧಾರಿತವಾದಂತಹ ವ್ಯಕ್ತಿಯೊಬ್ಬರನ್ನು ಕಳೆದುಕೊಂಡಂತಾಗಿದೆ. ರಾಜ್ಯದ ರಾಜಕೀಯಕ್ಕೆ ಅದರಲ್ಲೂ ಮಂಡ್ಯ ಜಿಲ್ಲೆಗೆ ಇದರಿಂದ ತುಂಬಲಾರದ ನಷ್ಟವಾಗಿದೆ. ಅವರು ಮಂಡ್ಯ ಜಿಲ್ಲೆಯಲ್ಲಿ ನೀರಾವರಿ ಸಚಿವರಾಗಿದ್ದಾಗ ಶ್ಲಾಘನೀಯವಾದಂತಹ ಕೆಲಸಗಳನ್ನು ಮಾಡಿದ್ದರು. ಅವರು ನೀರಾವರಿ ಸಚಿವರಾಗಿದ್ದಾಗ, ಕೃಷ್ಣ ಭಾಗ್ಯ ಜಲ ನಿಗಮದ ಮೂಲಕ ರೈತರಿಗೆ ಸಹಾಯ ಮಾಡುವಂತಹ ಅವರದೇ ಆದಂತಹ ತೀರ್ಮಾನವನ್ನು ತೆಗೆದುಕೊಂಡಿದ್ದರು. ಈ ರಾಜ್ಯದ ಯಾವುದೇ ಮೂಲೆಯ ರೈತರಿಗೂ ಕೂಡ ಅನುಕೂಲ ಮಾಡಿಕೊಡಬೇಕು ಎಂಬ ಉದ್ದೇಶದಿಂದ ಮಾನ್ಯ ಜೆ.ಹೆಚ್. ಪಟೇಲ್‌ರವನ್ನು ಅವರು ಆಗಾಗ ನೀರಾವರಿ ಕ್ಷೇತ್ರಕ್ಕೆ ಹೆಚ್ಚು ಹಣವನ್ನು ಕೊಡಬೇಕೆಂದು ಎಂದು ಡಿಮ್ಯಾಂಡ್ ಮಾಡುತ್ತಿದ್ದರು. ಇದರಿಂದ ರೈತರಿಗೆ ಹೆಚ್ಚಿಗೆ ಅನುಕೂಲ ಮಾಡಿಕೊಡಲು ಸಾಧ್ಯ ಎಂದು ಅವರು ನಂಬಿದ್ದರು. ಇವತ್ತು ನೀರಾವರಿಯಿಂದ ಮಾತ್ರ ರಾಜ್ಯದ ರೈತರು ಆರ್ಥಿಕವಾಗಿ ಸಬಲರಾಗಬಹುದು ಎನ್ನುವಂತಹ ಮಾತನ್ನು ಸನ್ಮಾನ್ಯ ನಾಗೇಗೌಡರು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದರು. ಅವರ ರಾಜಕೀಯ ಜೀವನದ ಉದ್ದಕ್ಕೂ ಚಿಂತನಶೀಲರಾಗಿ ಕೆಲಸ ಮಾಡಿದಂತಹ ಅತ್ಯುತ್ತಮ ರಾಜಕಾರಣಿಯಾಗಿದ್ದರು. ಅದೇ ರೀತಿಯಲ್ಲಿ ಪ್ರೊಫೆಸರ್ ಎಂ.ಡಿ. ನಂಜುಂಡಸ್ವಾಮಿ ರವರು ರೈತರ ಬಗ್ಗೆ, ವ್ಯವಸಾಯದ ಬಗ್ಗೆ ಕೆಲಸ ಮಾಡಿದಂತಹ ಅತ್ಯುತ್ತಮ ರಾಜಕಾರಣಿಯಾಗಿದ್ದರು. ಅವರು ಜಾತಿ ಇರಬಾರದು ಎಂಬ ವಾದವನ್ನು ಇಟ್ಟುಕೊಂಡವರಾಗಿದ್ದರು. ಅದಕ್ಕಾಗಿ ದೊಡ್ಡ ಆಂದೋಲನವನ್ನೇ ಮಾಡಿ, ಸಮಾಜವನ್ನು ಸಮಾನವಾಗಿ ತೆಗೆದುಕೊಂಡು ಹೋಗಬೇಕೆನ್ನುವ ಭಾವನೆ ಇಟ್ಟುಕೊಂಡಿದ್ದಂತಹ ರಾಜಕಾರಣಿಯಾಗಿದ್ದರು. ಅದೇ ರೀತಿಯಲ್ಲಿ ಸನ್ಮಾನ್ಯ ಮುನಿರಾಜುರವರೂ ಸಹ ಒಬ್ಬ ಉತ್ತಮವಾದಂತಹ ರಾಜಕಾರಣಿಯಾಗಿದ್ದರು. ಅವರು ತಮ್ಮ ಜೀವನದಲ್ಲಿ ಯಾವಾಗಲೂ ಜನತೆಯ ಬಗ್ಗೆ, ರಾಜ್ಯದ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡತಕ್ಕಂಥ ರಾಜಕಾರಣಿಯಾಗಿದ್ದರು. ಅಂತಹವರ ನಿಧನದಿಂದಾಗಿ ರಾಜ್ಯಕ್ಕೆ ಬಹಳ ನಷ್ಟ ಉಂಟಾಗಿದೆ. ಈ ವರ್ಷದಲ್ಲಿ ಉತ್ತಮ ರಾಜಕಾರಣಿಗಳಾಗಿದ್ದಂತಹ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು, ಬೈರೇಗೌಡರು. ನಾಗೇಗೌಡರು, ನಂಜುಂಡಸ್ವಾಮಿಯವರು, ಮುನಿರಾಜುರವರು ಮತ್ತು ವೈ.ಕೆ. ರಾಮಯ್ಯನವರನ್ನು ಕಳೆದುಕೊಂಡು ರಾಜ್ಯ ಬಡವಾಗಿದೆ. ಇವರುಗಳ ಅಕಾಲಿಕ ನಿಧನದಿಂದಾಗಿ ರಾಜ್ಯದ ರಾಜಕೀಯದಲ್ಲಿ ಕಪ್ಪು ಮೋಡ ಮುಸುಕಿದೆ. ರಾಜಕಾರಣಿಗಳದ್ದು ಶಾಶ್ವತವಾದಂತಹ ಜೀವನವೇನೂ ಅಲ್ಲ. ಆ ಜೀವನದಲ್ಲಿ ರಾಜಕಾರಣಿಗಳು ಸಮಾಜ ಸೇವೆಯೇ ದೇವರ ಸೇವೆ, ಜನ ಸೇವೆಯೇ ಜನಾರ್ಧನನ

(† ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿ [illegible]

ಸೇವೆ ಎಂದು ಅವರು ಕೆಲಸ ಮಾಡುತ್ತಾರೆ. ಅವರು ಕೊನೆಗೊಮ್ಮೆ ಸಾಯಬೇಕಾದರೆ ಅವರಿಗೆ ತಾವುಗಳು ಯಾವ ರೀತಿಯಾಗಿ ಸಾಯುತ್ತೇವೆ ಎಂಬುದು ಅವರಿಗೆ ಗೊತ್ತಿರುವುದಿಲ್ಲ. ಇಂತಹ ಒಂದುಕೆಟ್ಟ ಪರಿಸ್ಥಿತಿಯಲ್ಲಿ ಇವತ್ತು ರಾಜಕಾರಣಿಗಳ ಜೀವನ ಸ್ಥಿತಿ ಇದೆ. ಇಂತಹವರಿಗೆ ಪರಮಾತ್ಮ ಏಕೆ ಅನುಕೂಲ ಮಾಡಬಾರದು ಎಂದು ನನಗನ್ನಿಸುತ್ತದೆ. ದಿವಂಗತರ ಕುಟುಂಬಗಳಿಗೆ ಅವರ ನಿಧನದ ದುಃಖವನ್ನು ಭರಿಸತಕ್ಕಂಥ ಶಕ್ತಿಯನ್ನು ದಯಾಮಯನಾದ ಭಗವಂತನು ನೀಡಲೆಂದು ಪ್ರಾರ್ಥಿಸುತ್ತಾ, ತಾವು ಇಲ್ಲಿ ಮಂಡಿಸಿರುವ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತಾ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† **ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ)** :– ಸನ್ಮಾನ್ಯ ಸಭಾಧ್ಯಕ್ಷರೆ, ತಾವು ತಂದಿರತಕ್ಕಂತಹ ಈ ಸಂತಾಪ ಸೂಚನೆ ನಿರ್ಣಯಕ್ಕೆ ಬೆಂಬಲವನ್ನು ಸೂಚಿಸುತ್ತಾ, ಅದರಲ್ಲಿ ಮೊದಲನೆಯದಾಗಿ ಸನ್ಮಾನ್ಯ ನಾಗೇಗೌಡರ ಬಗ್ಗೆ ನಮ್ಮ ಎಲ್ಲಾ ನಾಯಕರೂ ಮಾತನಾಡಿದ್ದಾರೆ. ಅವರು ಪ್ರಥಮವಾಗಿ 1992–03ರಲ್ಲಿ ಮಂತ್ರಿಯಾದ ಸಂದರ್ಭದಲ್ಲಿ ನಾನೂ ಸಹ ರಾಜ್ಯ ಸಚಿವನಾಗಿ ಕೆಲಸ ಮಾಡುವ ಅವಕಾಶ ದೊರೆಕಿತ್ತು. ಅದೇ ಸಂದರ್ಭದಲ್ಲಿ ನಮ್ಮ ಜಿಲ್ಲೆಯ ಹಾಲು ಉತ್ಪಾದಕರು ಬಹಳಷ್ಟು ತೊಂದರೆಯಲ್ಲಿ ಸಿಕ್ಕಿ ಹಾಕಿ ಕೊಂಡಿದ್ದರು. ಆ ಸಂದರ್ಭದಲ್ಲಿ ಬಹಳ ದೊಡ್ಡ ಧರಣಿಗಳು ನಡೆದವು. ಆಗ ನಾನು ಅವರಿಗೆ ನಮ್ಮ ಜಿಲ್ಲೆಗೆ ಆಹ್ವಾನಿಸಿ ಜಿಲ್ಲೆಯ ಹಾಲು ಉತ್ಪಾದಕರ ಸಮಸ್ಯೆ ಬಗ್ಗೆ ಪರಿಹಾರ ಕಂಡುಕೊಳ್ಳಬೇಕು. ಜೊತೆಗೆ ಹಾಲಿನ ದರವನ್ನು ಹೆಚ್ಚು ಮಾಡಬೇಕೆಂಬ ಒತ್ತಾಯಕ್ಕೆ ತತಕ್ಷಣ ಮನ್ನಣೆ ಕೊಟ್ಟು ಸ್ಥಳದಲ್ಲಿಯೇ ಘೋಷಣೆ ಮಾಡಿ ಬಂದರು. ಅದನ್ನು ಸಚಿವ ಸಂಪುಟದ ಮುಂದೆ ತಂದು ಹಾಲಿನ ದರವನ್ನು ಹೆಚ್ಚಿಗೆ ಮಾಡತಕ್ಕಂತಹ ವಿಶೇಷ ಕಾಳಜಿಯನ್ನು ಇಟ್ಟುಕೊಂಡು ಮಾಡಿದರು. ಜೊತೆಗೆ ಅವರು ಒಬ್ಬ ಸಕ್ರಿಯ ಚಾಣಾಕ್ಷ್ಯ ರಾಜಕಾರಣಿಯಾಗಿದ್ದರು. ಅವರು ಎಂತಹ ಸಂದರ್ಭದಲ್ಲಿಯೂ, ಎಂತಹ ಕ್ಲಿಷ್ಟ ಪರಿಸ್ಥಿತಿ ಬಂದರೂ ಅದಕ್ಕೆ ಸೂಕ್ತವಾದ ಪರಿಹಾರವನ್ನು ಹುಡುಕತಕ್ಕಂತಹ ಬುದ್ಧಿ ಜೀವಿ ರಾಜಕಾರಣಿಯಾಗಿದ್ದರು. ಅಂತಹ ರಾಜಕಾರಣಿಯಾಗಿ ಅವರು ಅನೇಕ ಸಂದರ್ಭಗಳಲ್ಲಿ 1985 ರಿಂದ 1989 ರವರೆಗೆ ವಿಧಾನ ಪರಿಷತ್ತಿನಲ್ಲಿ ಮುಖ್ಯ ಸಚೇತಕವಾಗಿ ಕಾಂಗ್ರೆಸ್ ಪಕ್ಷಕ್ಕೆ ವಿಶೇಷವಾಗಿ ಶಕ್ತಿಯನ್ನು ಕೊಡುವುದರಲ್ಲಿ ಅವರು ತಮ್ಮದೇ ಆದ ವಿಶಿಷ್ಟವಾದ ರೀತಿಯಲ್ಲಿ ರಾಜ್ಯದಾದ್ಯಂತ ಸಂಚಾರ ಮಾಡಿ ಕಾಂಗ್ರೆಸ್ ಪಕ್ಷವನ್ನು ಪುನರ್ ಸಂಘಟನೆ ಮಾಡಿ 1989ರಲ್ಲಿ ಅತಿ ಹೆಚ್ಚು ವಿಧಾನ ಸಭಾ ಸದಸ್ಯರನ್ನು ಗೆಲ್ಲಿಸತಕ್ಕಂತಹ ಅವಕಾಶಕ್ಕೆ ಅವರು ಕಾರಣಕರ್ತರು ಎಂದು ಹೇಳಿ, ಒಟ್ಟಾರೆ ಒಬ್ಬ ರೈತ ಪ್ರತಿನಿಧಿಯಾಗಿ ಕೆಲಸ ಮಾಡಿರತಕ್ಕಂಥದ್ದು, ನೀರಾವರಿ ಸಚಿವರಾಗಿದ್ದ ಸಂದರ್ಭ, ನಾನೂ ಸಹ ಶಾಸಕನಾಗಿ ಕೆಲಸ ಮಾಡತಕ್ಕಂತಹ ಅವಕಾಸ ಸಿಕ್ಕಿ, ಅನೇಕ ಸಂದರ್ಭಗಳಲ್ಲಿ ನಮ್ಮ ಕ್ಷೇತ್ರಕ್ಕೆ ಬಯಲು ಪ್ರದೇಶಕ್ಕೆ ನೀರು ತರಬೇಕೆಂಬ ಬಹಳ ವರ್ಷಗಳ ಒತ್ತಾಯಕ್ಕೆ ಅವರಲ್ಲಿ ಚರ್ಚೆ ಮಾಡಿದಾಗ ಅದಕ್ಕೆ ಬಹಳಷ್ಟು ಜವಾಬ್ದಾರಿಯಿಂದ ಖಂಡಿತ ಪ್ರಯತ್ನ ಮಾಡೋಣ ಎಂದು ಹೇಳಿ, ನೀರಾವರಿ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚೆ ಮಾಡುವ ಅವಕಾಶ ಮಾಡಿಕೊಟ್ಟ ಸಂದರ್ಭವನ್ನು ನಾವು ಮರೆಯುವ ಹಾಗೆ ಇಲ್ಲ. ಬಯಲು ಪ್ರದೇಶಗಳಿಗೆ ನೀರು ಕೊಡತಕ್ಕಂತಹ ಪರಮಶಿವಯ್ಯನವರ ವರದಿ, ಅವರು ಕೊಟ್ಟಿರತಕ್ಕಂತಹ ವರದಿಯನ್ನು ಜಾರಿಗೆ ತರಬೇಕು. ಅದರ ಬಗ್ಗೆ ದೊಡ್ಡ ಸಮೀಕ್ಷೆ ಆಗಬೇಕೆಂಬ ಒತ್ತಾಯ ಏನಿತ್ತು, ಅವುಗಳಿಗೆ ಇವತ್ತು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಚಾಲನೆ ಕೊಟ್ಟಿದ್ದು, ಅವರ ಚರ್ಚೆಯ ಮುಖಾಂತರ ಬಂದಂತಹ ಪ್ರಸ್ತುಪದಿಂದ

(† ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಅದು ಚಾಲನೆಗೆ ಒಂದು ಸಮೀಕ್ಷೆ ಹಂತಕ್ಕೆ ಹೋಗಿದೆ. ಇಸ್ರೋ ಸಂಸ್ಥೆಯವರು ಈಗ ಸಮೀಕ್ಷೆ ಮಾಡುತ್ತಿದ್ದಾರೆ. ಅಂತಹ ವಿಶೇಷವಾದ ಬಯಲು ಸೀಮೆ ಪ್ರದೇಶಕ್ಕೂ ನೀರು ಕೊಡತಕ್ಕಂತಹ, ಕುಡಿಯುವ ನೀರು ಕೊಡತಕ್ಕಂತಹ ವಿಶೇಷವಾದ ಕಾಳಜಿಯನ್ನು ಸನ್ಮಾನ್ಯ ನಾಗೇಗೌಡರು ಇಟ್ಟುಕೊಂಡಿದ್ದರು. ಇಂತಹವರನ್ನು ನಾವು ಇಲ್ಲಿ ಸ್ಮರಿಸಬೇಕಾಗಿದೆ. ಇವರ ನಂತರ ಪ್ರೊ: ಎಂ.ಡಿ. ನಂಜುಂಡಸ್ವಾಮಿಯವರು ರೈತ ಸಂಘ ಎಂದರೆ ಪ್ರೊ: ನಂಜುಂಡಸ್ವಾಮಿಯವರು ಎನ್ನತಕ್ಕಂತಹ ಮಾತನ್ನು ಎಲ್ಲರೂ ಹೇಳುತ್ತಾರೆ. ರೈತ ಸಮುದಾಯ ಅಸಂಘಟಿತ ವರ್ಗ ಇದಕ್ಕೆ ಸಂಘಟನೆ ಇರಲಿಲ್ಲ. ಏನೇ ಸಮಸ್ಯೆ ಬಂದರೂ ಅವರವರೇ ಅನುಭವಿಸಿಕೊಂಡು ಅವರು ಕೊನೆಯ ಉಸಿರು ಎಳೆಯಬೇಕು. ನೀನು ಸಾಯಿ, ನಿಮ್ಮ ಮಕ್ಕಳು ಸಾಯಿ, ವ್ಯವಸಾಯ ಎನ್ನತಕ್ಕಂತಹ ಮಾತು ಇತ್ತೇ ಹೊರತು ಅದಕ್ಕೆ ಸರಿಯಾದ ಸಂಘಟನೆ ಇರಲಿಲ್ಲ. ಸಂಘಟನೆಗೆ ಚಾಲನೆ ಕೊಟ್ಟಂತಹವರು ಪ್ರೊ: ಎಂ.ಡಿ. ನಂಜುಂಡಸ್ವಾಮಿಯವರು. ಅವರ ಮುಖಾಂತರ ರೈತರ ಸಮಸ್ಯೆಗಳಿಗೆ ವಿಶೇಷವಾದ ಚಾಲನೆ ಸಿಕ್ಕಿತು. ಅದರಲ್ಲಿ ಬಹಳ ಮುಖ್ಯವಾಗಿ ರೈತ ಬೆಳೆದ ಬೆಳೆಗೆ ವೈಜ್ಞಾನಿಕವಾದ ರೀತಿಯಲ್ಲಿ ಬೆಂಬಲಿತ ಬೆಲೆ ಕೊಡಬೇಕು. ಸಪೋರ್ಟ್ ಪ್ರೈಸ್ ಕೊಡಬೇಕೆಂಬ ಒತ್ತಾಯವನ್ನು ರೈತ ಸಂಘ ಪ್ರಾರಂಭವಾದಾಗಲೇ ಕೊಟ್ಟರು. ರೈತರು ಉತ್ಪಾದನೆ ಮಾಡುವ ವೆಚ್ಚಕ್ಕೆ ಅನುಗುಣವಾಗಿ ಬೆಲೆ ನಿಗದಿ ಮಾಡತಕ್ಕಂತಹ ವ್ಯವಸ್ಥೆ ನಮ್ಮ ರಾಜ್ಯದಲ್ಲಿ ಆಗಬೇಕು. ಎನ್ನತಕ್ಕಂತಹ ಬೇಡಿಕೆಯನ್ನು ಮುಂದೆ ಇಟ್ಟಿದ್ದರು. ಅದೃಷ್ಟವಶಾತ್ ಕನಿಷ್ಟ ನಮ್ಮ ಆಹಾರಧಾನ್ಯಗಳಿಗೆ, ಬೇಳೆ ಕಾಳುಗಳಿಗೆ, ತೆಂಗಿನ ಕಾಯಿಗೆ ಮತ್ತು ಆಲುಗಡ್ಡೆಗೆ ನಮ್ಮ ರಾಜ್ಯದಲ್ಲಿ ಬೆಂಬಲ ಬೆಲೆ ಘೋಷಣೆ ಮಾಡಿ ಆವರ್ತ ನಿಧಿ ಮಾಡತಕ್ಕಂತಹ ಹೊರ ಆಯಾಮವನ್ನು ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾದ ಕೃಷ್ಣಾರವರು ಜಾರಿಗೆ ತಂದಿದ್ದಾರೆ. ಮಾನ್ಯ ಪ್ರೊ: ಎಂ.ಡಿ ನಂಜುಂಡಸ್ವಾಮಿಯವರು ಬೆಂಬಲಿತ ಬೆಲೆ ಕೊಡಬೇಕೆಂದು ಘೋಷಣೆ ಮಾಡಿದ್ದರು. ಅಂತಹ ವ್ಯವಸ್ಥೆಯನ್ನು ಪ್ರಾರಂಭ ಮಾಡಿ ಆಂಧೋಲನಕ್ಕೆ ಚಾಲನೆ ಕೊಟ್ಟಂತಹ ನಿಜವಾದ ಕಾನೂನು ತಜ್ಞರು. ನಿಜವಾದ ಕೃಷಿ ತಜ್ಞರೂ ಅವರು. ನಾನು ರೇಷ್ಮೆ ಸಚಿವನಾಗಿ ಕೆಲಸ ಮಾಡುತ್ತಿದ್ದ ಆ ಸಂದರ್ಭದಲ್ಲಿ ಯಾವುದೋ ಒಂದು ರೋಗ ಅನಿರೀಕ್ಷಿತವಾಗಿ ಕೆಲವು ಕಾಲ ಪೆಬ್ರಿನ್ ಡಿಸೀಸ್ ಎಂದು ಗಂಟು ರೋಗ ಬಂದಿತ್ತು. ಆ ಸಂದರ್ಭದಲ್ಲಿ ಪ್ರೊ: ಎಂ.ಡಿ. ನಂಜುಂಡಸ್ವಾಮಿಯವರು ಪ್ರೊ: ಎಂ.ಡಿ. ನಂಜುಂಡಸ್ವಾಮಿಯವರು ನಮ್ಮ ಇಲಾಖೆಯಲ್ಲಿ ಇರತಕ್ಕಂತಹ ತಜ್ಞರಿಗೆ ಅದರ ಜ್ಞಾನ ಇರಲಿಲ್ಲ. ಆ ಸಂದರ್ಭದಲ್ಲಿ ಅರ್ಧಗಂಟೆ ಅವರ ಬಗ್ಗೆ ಭಾಷಣ ಮಾಡಿ ವೈಜ್ಞಾನಿಕ ಸಲಹೆಗಳನ್ನು ಕೊಟ್ಟರು. ವಾಸ್ತವವಾಗಿ ಅವರು ಕೃಷಿ ತಜ್ಞರಾಗಿ ಕೆಲಸ ಮಾಡುತ್ತಿದ್ದರು. ಕೃಷಿ ತಜ್ಞರಾಗಿ ರೈತ ಸಮುದಾಯಕ್ಕೆ ಹೆಚ್ಚು ಶಕ್ತಿಯನ್ನು ಕೊಟ್ಟು ಸಂಘಟನೆಗೆ ಕಾರಣಕರ್ತರಾದವರಿಗೆ ನಾವು ಇಲ್ಲಿ ಸ್ಮರಿಸಬೇಕಾದುದು ಬಹಳ ಅವಶ್ಯಕ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಎಸ್. ಮುನಿರಾಜ್‌ರವರು ನಮ್ಮ ಜಿಲ್ಲೆಯಲ್ಲಿ ಅತ್ಯಂತ ಹಿರಿಯ ರಾಜಕಾರಣಿ. 1957ರಲ್ಲಿ ಅವರು ಎರಡನೇ ವಿಧಾನಸಭೆಗೆ ಆಯ್ಕೆಯಾಗಿ ಅತ್ಯಂತ ಸಂಭಾವಿತ, ಗೌರವಾನ್ವಿತ, ಸೌಹಾರ್ದವಾದ ವಾತಾವರಣವನ್ನು ನಿರ್ಮಾಣ ಮಾಡುವುದರಲ್ಲಿ ಅವರು ವಿಶೇಷವಾದ ಕಾಳಜಿಯನ್ನು ಇಟ್ಟುಕೊಂಡಿರತಕ್ಕಂತಹ ಒಬ್ಬ ವ್ಯಕ್ತಿ ಆಗಿದ್ದರು. ಪ್ರತಿ ನಿತ್ಯ ಸಕ್ರಿಯವಾಗಿ ಕೆಲಸ ಮಾಡುತ್ತಿದ್ದರು. 1957ರಲ್ಲಿ ಅವರು ಏನು ರಾಜಕೀಯ ಪ್ರವೇಶ ಮಾಡಿದ್ದಾರೆ, ಅಲ್ಲಿಂದ ಇಲ್ಲಿಯವರೆಗೆ ಅವರ ಕಟ್ಟ ಕಡೆಯ ಉಸಿರು ಇರುವವರೆಗೆ ಅವರು ಸಾಯುವುದಕ್ಕೆ ಮುಂಚೆ

ಮಧ್ಯಾಹ್ನ ವಿಧಾನಸಭೆಗೆ ಬಂದು ಯಾರ್‍ಯಾರಿಗೋ ಭೇಟಿ ಮಾಡಿ ಹೋಗಿದ್ದಾರೆ. ವಿಧಾನ ಸಭೆಗೆ ಎರಡು ಸಾರಿ ಆಯ್ಕೆ ಆಗಿದ್ದರು. ಕೇಂದ್ರ ರೇಷ್ಮೆ ಮಂಡಳಿ ಅಧ್ಯಕ್ಷರಾಗಿದ್ದರು. ರೇಷ್ಮೆ ಮಂಡಳಿ ಅಧ್ಯಕ್ಷರಾಗಿ ಎರಡು ಬಾರಿ ಕೆಲಸ ಮಾಡುವ ಅವಕಾಶ ಬಹುಶಃ ರಾಷ್ಟ್ರದಲ್ಲಿ ಅವರಿಗೆ ಒಬ್ಬರಿಗೇ ಸಿಕ್ಕಿರುವುದು. ಆ ಸಂದರ್ಭದಲ್ಲಿ ರೇಷ್ಮೆ ಕೃಷಿಗೆ ವಿಶೇಷವಾದ ಚಾಲನೆ ಕೊಟ್ಟರು. ಆಧುನಿಕವಾದ ರೇಷ್ಮೆ ತಳಿಗಳು ಏನಿವೆ ಆ ತಳಿಗಳನ್ನು ಚೈನಾದೇಶದಿಂದ ಇಲ್ಲಿಗೆ ತರಬೇಕಾದರೆ ಕೇಂದ್ರ ರೇಷ್ಮೆ ಮಂಡಳಿ ಮುಖಾಂತರ ಅವರು ಬಹಳ ಪ್ರಮುಖ ಪಾತ್ರ ವಹಿಸಿದ್ದರು. ಜೊತೆಗೆ ಅವರು ಕೇಂದ್ರ ರೇಷ್ಮೆ ಮಂಡಳಿಯಲ್ಲಿ ಆರ್ ಅಂಡ್ ಡಿ (ರೀಸರ್ಚ್ ಅಂಡ್ ಡೆವಲಪ್‌ಮೆಂಟ್) ವಿಭಾಗವನ್ನು ಬಲಿಷ್ಟಗೊಳಿಸಿದರು. ಮೈಸೂರಿನಲ್ಲಿ ಸಿಎಸ್‌ಆರ್‌ಟಿ ಬಲಿಷ್ಟವಾಗಿ ಕೆಲಸ ಮಾಡುತ್ತಿದೆ ಎಂದರೆ ಅದು ಸನ್ಮಾನ್ಯ ಮುನಿರಾಜುರವರ ಪ್ರಯತ್ನ ಎಂದು ನಾವು ಇಲ್ಲಿ ಸ್ಮರಿಸಬೇಕಾಗುತ್ತದೆ. ರೇಷ್ಮೆ ಕೃಷಿಯಲ್ಲಿ ಹೆಚ್ಚು ಇಳುವರಿ ಬರಬೇಕು. ಖರ್ಚು ಕಡಿಮೆ ಆಗಬೇಕೆಂದು ಚೈನಾದೇಶದಲ್ಲಿ ಹೆಚ್ಚು ಇಳುವರಿ ಕೊಡತಕ್ಕಂತಹ ಹೈಬ್ರಿಡ್ ರೇಸಸ್ ನಮ್ಮ ರಾಷ್ಟಕ್ಕೆ ತರತಕ್ಕಂತಹ ಪ್ರಯತ್ನದಲ್ಲಿ ಅವರು ಬಹಳ ಪ್ರಮುಖ ಪಾತ್ರ ವಹಿಸಿದ್ದರು. ಆದ್ದರಿಂದಲೇ ರೇಷ್ಮೆ ಉತ್ಪಾದನೆ ಬಹಳಷ್ಟು ಪ್ರಗತಿ ಆಗಿದೆ. 100 ಮೊಟ್ಟೆ ತಂದರೆ, ಮೊದಲು 25 ರಿಂದ 30 ಕೆಜಿ ರೇಷ್ಮೆ ಬರುತ್ತಿತ್ತು. ಇಳುವರಿ ಉತ್ಪನ್ನ ಬರುತ್ತಿತ್ತು. ಇವತ್ತು 70 ರಿಂದ ಕೆಜಿ ಇಳುವರಿ ಪಡೆಯತಕ್ಕಂತಹ ಅವಕಾಶ ಬಂದಿದೆ. ಅದಕ್ಕೆ ಮೂಲಭೂತವಾಗಿ ಸನ್ಮಾನ್ಯ ಎಸ್. ಮುನಿರಾಜ್‌ರವರ ಕೊಡುಗೆ ಇದೆ ಎಂದು ನಾವು ಸ್ಮರಿಸಬೇಕಾಗಿದೆ. ಪ್ರತಿಯೊಂದು ಸಂದರ್ಭದಲ್ಲಿ ಅವರು ಕಾಂಗ್ರೆಸ್ ಬಿಟ್ಟು ಹೊರಗಡೆ ಹೋಗಲಿಲ್ಲ. ಅವರಿಗೆ ಕಾಂಗ್ರೆಸ್ಸಿನಿಂದ ಸೀಟು ಕೊಡದಿದ್ದರೂ ಕೂಡ ಯಾವತ್ತೂ ಕಾಂಗ್ರೆಸ್ ಪಕ್ಷ ಬಿಟ್ಟು ಹೋಗಲಿಲ್ಲ. ನಿಷ್ಟಾವಂತ ಕಾಂಗ್ರೆಸಿಗರಾಗಿ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿದ್ದರು. ನಮಗೆ ಮಾರ್ಗದರ್ಶಕರಾಗಿ ಕೆಲಸ ಮಾಡುತ್ತಿದ್ದರು. ವಾರದಲ್ಲಿ ಒಂದು ಸಾರಿಯಾದರೂ ನಾನು ಅವರನ್ನು ಭೇಟಿ ಮಾಡುತ್ತಿದ್ದೆ. ಜಿಲ್ಲೆಯಲ್ಲಿ ಇರತಕ್ಕಂತಹ ಅನೇಕ ಸಮಸ್ಯೆಗಳ ಬಗ್ಗೆ ಗಮನ ಸೆಳೆಯುವುದು, ಮತ್ತು ಸೂಕ್ತವಾದ ಪರಿಹಾರ, ಸಲಹೆಗಳನ್ನು ಕೊಡುವುದು ಸದಾಕಾಲ ಸಕ್ರಿಯವಾಗಿ ರಾಜಕಾರಣದಲ್ಲಿ ಪ್ರಾಮಾಣಿಕವಾದ ಜೀವನ ನಡೆಸಿಕೊಂಡು ಹೋಗಿದ್ದಾರೆ ಎನ್ನುವುದಕ್ಕೆ ಅವರು ಆದರ್ಶ ರಾಜಕಾರಣಿಯಾಗಿದ್ದರು ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ನೆನೆಸಬೇಕಾಗುತ್ತದೆ. ಅವರನ್ನು ಕಳೆದುಕೊಂಡ ಅವರ ಕುಟುಂಬಕ್ಕೆ ಭಗವಂತ ಹೆಚ್ಚು ಶಕ್ತಿ ಕೊಟ್ಟು ಅವರ ನೋವನ್ನು ಭರಿಸತಕ್ಕಂತಹ ಅವಕಾಶ ಲಭಿಸಲಿ ಎಂದು ನಾನು ದೇವರಲ್ಲಿ ಪ್ರಾರ್ಥನೆ ಮಾಡುತ್ತಾ ತಾವು ತಂದಿರತಕ್ಕಂತಹ ಸಂತಾಪ ಸೂಚಕ ನಿರ್ಣಯದಲ್ಲಿ ಚಿತ್ರ ನಟ ವಾದಿರಾಜ್‌ರವರ ಬಗ್ಗೆ ಸಹ ಪ್ರಸ್ತಾಪ ಮಾಡಿದಿರಿ. ಅವರೆಲ್ಲರಿಗೂ ಸಹ ನಾನು ವೈಯಕ್ತಿಕವಾದ ನೋವನ್ನು ವ್ಯಕ್ತ ಮಾಡುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) :– ಸನ್ಮಾನ್ಯ ಅಧ್ಯಕ್ಷರೆ, ತಾವು ತಂದಂತಹ ಈ ಸಂತಾಪ ಸೂಚನೆಗೆ ನನ್ನ ಬೆಂಬಲವನ್ನು ಸೂಚಿಸಿ ಬಹುಶಃ ಈಗ ದೇಶದಲ್ಲಿ ಬಹಳ ಕಷ್ಟದಲ್ಲಿ ಇರುವವನು ರೈತ. ಅದು ಒಂದು ಅಸಂಘಟಿತ ವಲಯ, ಇತ್ತೀಚೆಗೆ ನಮ್ಮ ರಾಜ್ಯದಲ್ಲಿ ರೈತರ ಹೋರಾಟದಲ್ಲಿ, ರೈತರ ಪರವಾಗಿ ಮುಂಚೂಣಿಯಲ್ಲಿ ಇದ್ದಂತಹ ನಾಯಕರೇ ಸತ್ತು ಹೋಗುತ್ತಿದ್ದಾರೆ. ಇದು ಇವತ್ತು ನಮ್ಮ ರೈತ ಸಮುದಾಯಕ್ಕೆ ಸಹಿಸಲಾರದ ನೋವಾಗಿದೆ. ಅದನ್ನು ಭರಿಸಲಾರದ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಮೊದಲನೆಯದಾಗಿ ನಾವು

(† ಈ ಚಿಹ್ನೆ [illegible] ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಬೈರೇಗೌಡರನ್ನು ಕಳೆದುಕೊಂಡೆವು. ಯಾವುದೇ ಪಕ್ಷ ಯಾವುದೇ ಜಾತಿಗೆ ಸೀಮಿತವಾದ ಮಾತಲ್ಲ. ರೈತರಿಗೆ ಜಾತಿ ಇಲ್ಲ. ರೈತರೇ ದೇಶದ ಬೆನ್ನೆಲುಬು. ಆಗಿದ್ದರೂ ಕೂಡ ಸ್ವಾತಂತ್ರ್ಯ ಬಂದು ಇಷ್ಟು ವರ್ಷ ಆದರೂ ಕೂಡ ರೈತರ ಪರವಾಗಿ ಮುಂಚೂಣಿಯಲ್ಲಿ ನಿಂತು ಬಡಿದಾಡಿದ ಜನ ಬಹಳ ಕಡಿಮೆ ಇದ್ದಾರೆ.

12.20 ಪಿಎಂ

ಅದರಲ್ಲಿ ಮುಂಚೂಣಿಯಲ್ಲಿದ್ದ ಬೈರೇಗೌಡರು ತದನಂತರ ವೈ.ಕೆ. ರಾಮಯ್ಯನವರನ್ನು ನಾವು ಕಳೇದುಕೊಂಡೆವು. ಇವರೂಕೂಡ ರೈತರ ಪರ ವಿಚಾರ ಬಂದಾಗ ಪಕ್ಷವನ್ನು ಮರೆತು ರೈತರ ಬಗ್ಗೆ ಕಾಳಜಿ ವಹಿಸುತ್ತಿದ್ದರು. ಆದರೆ ಇಂದು ಅಂಥ ನಾಯಕರನ್ನೂ ಕೂಡ ನಾವು ಕಳೆದುಕೊಂಡಿದ್ದೇವೆ. ತದನಂತರ ನಾಯಕರಾದ ರಾಮಕೃಷ್ಣ ಹೆಗಡೆಯವರನ್ನು ಕಳೆದುಕೊಂಡೆವು. ತದನಂತರ ರೈತ ನಾಯಕರಾಗಿದ್ದಂಥ ಮಾನ್ಯ ನಾಗೇಗೌಡರನ್ನು ರೈತ ಸಮುದಾಯ ಕಳೆದುಕೊಂಡಿತು. ಇನ್ನು ಪ್ರೊಫೆಸರ್ ನಂಜುಂಡಸ್ವಾಮಿಯವರಂತೂ ನೇರವಾಗಿ ರೈತರ ಪರವಾಗಿ ಹೋರಾಟವನ್ನು ಮಾಡಿದಂಥವರಿದ್ದರು. ಇಂಥ ರೈತರ ಪರವಾದ ಹಲವಾರು ನಾಯಕರನ್ನು ಕಳೆದುಕೊಂಡು ಇಂದು ರೈತರ ಸಮುದಾಯದ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ಹೊಸದಾಗಿ ನಾಯಕರನ್ನೇ ಹುಟ್ಟು ಹಾಕಬೇಕೇನೋ ಎನ್ನುವ ಪರಿಸ್ಥಿತಿ ರಾಜ್ಯದಲ್ಲಿ ನಿರ್ಮಾಣವಾಗಿದೆ. ಅದರಲ್ಲೂ ಸನ್ಮಾನ್ಯ ನಾಗೇಗೌಡರು ನಮ್ಮ ಪಕ್ಷದ ರಾಜ್ಯಾಧ್ಯಕ್ಷರು. ಬಹುಶಃ ಇವೊತ್ತು ನಮ್ಮ ಪಕ್ಷ ಎಂಥ ಸ್ಥಿತಿಯಲ್ಲಿದೆ ಎಂದರೆ ಎ.ಬಿ.ಜೆ.ಡಿ. ಎಂದರೆ ಮುಗಿದೇ ಹೋಯಿತು ಇದರ ಕಾಲ ಎನ್ನುವ ಸ್ಥಿತಿ ಬಂದಾಗ, ಮೊದಲನೆಯದಾಗಿ ಪಕ್ಷವನ್ನು ಪುನಃಶ್ಚೇತನ ಮಾಡಿ ಕಟ್ಟಲು ಪ್ರಯತ್ನ ಮಾಡಿದಂಥ ಬೈರೇಗೌಡರನ್ನು ಕಳೆದುಕೊಂಡೆವು. ತದನಂತರ ಪಕ್ಷದ ಅಧ್ಯಕ್ಷರಾದ ಮಾನ್ಯ ನಾಗೇಗೌಡರು ಪಕ್ಷವನ್ನು ಬಹಳ ಚುರುಕುಗೊಳಿಸಿದ್ದರು. ಪಕ್ಷ ಕಟ್ಟಬೇಕು. ಇದಕ್ಕಾಗಿ ಸಂಘಟನೆ ಮಾಡಬೇಕು. ಆ ಪಕ್ಷದ ಮುಖಾಂತರವಾಗಿ ರಾಜ್ಯದಲ್ಲಿ ರೈತರ ಪರವಾದಂಥ ಸರ್ಕಾರ ತರಬೇಕು ಎಂದು ಪ್ರಯತ್ನ ಮಾಡುತ್ತಿದ್ದ ನಾಗೇಗೌಡರೂ ಕೂಡ ಇವೊತ್ತು ನಮ್ಮನ್ನು ಅಗಲಿದ್ದಾರೆ. ಆದಕಾರಣ ಇಂದು ಅವರ ಅಗಲಿಕೆಯಿಂದ ನಮ್ಮ ಅಖಿಲ ಭಾರತ ಪ್ರಗತಿಪರ ಜನತಾದಳ ಪಕ್ಷಕ್ಕೆ ಭರಿಸಲಾರದಂಥ ನಷ್ಟವಾಗಿದೆ ಎಂದರೆ ತಪ್ಪಾಗುವುದಿಲ್ಲ. ಇನ್ನು ನಮ್ಮ ಉತ್ತರ ಕರ್ನಾಟಕದ ಬಗ್ಗೆ ನಾಗೇಗೌಡರಿಗಿದ್ದ ಅಭಿಮಾನದ ಬಗ್ಗೆ ಹೇಳುವುದಾದರೆ ಬಹಳ ಹಿಂದುಳಿದಿರುವಂಥ ಮುಂಡರಗಿ, ಹಡಗಲಿ ಮತ್ತು ಕೊಪ್ಪಳ ತಾಲ್ಲೂಕಿಗೆ ಉಪಯೋಗವಾಗತಕ್ಕಂಥ ಹೂಲಿಗುಡ್ಡ ನೀರಾವರಿ ಯೋಜನೆಯು ಬಹುಶಃ ನಾಗೇಗೌಡರು ಇನ್ನು ಆರು ತಿಂಗಳುಗಳ ಕಾಲ ನೀರಾವರಿ ಸಚಿವರಾಗಿ ನಮ್ಮ ಸರ್ಕಾರವಿದ್ದಾಗ ಮುಂದುವರೆದಿದ್ದರೆ ಆ ಬರಗಾಲ ಪೀಡಿತ ಪ್ರದೇಶಕ್ಕೆ ಇವೊತ್ತು ಆ ನೀರಾವರಿ ಸೌಲಭ್ಯ ಒದಗುತ್ತಿತ್ತು. ಅಷ್ಟೇ ಅಲ್ಲ ಈಗ ಪರಿಸ್ಥಿತಿ ಅಲ್ಲಿ ಹೊಳೆ ಒಣಗಿದೆ. ಅಲ್ಲಿ ಈಗ ಗದಗ್ ಮತ್ತು ಮುಂತಾದ ಹಳ್ಳಿಗಳಲ್ಲಿ ಕುಡಿಯುವ ನೀರಿಗೂ ತೊಂದರೆಯಾಗಿದೆ. ಆ ಒಂದು ಪರಿಸ್ಥಿತಿಯಲ್ಲಿ ಈ ಹೂಲಿಗುಡ್ಡ ಯೋಜನೆಯಿಂದ ಈ ತೊಂದರೆ ಪರಿಹಾರವಾಗುವ ಪರಿಸ್ಥಿತಿ ಇತ್ತು. ಅದಕ್ಕೂ ಅಡಿಗಲ್ಲು ಹಾಕಿ ಪ್ರಾರಂಭ ಮಾಡಿ ಅದಕ್ಕೆ ದುಡ್ಡು ಕೊಟ್ಟು ಅದನ್ನು ಒಂದು ವರ್ಷದಲ್ಲಿಯೇ ಮುಗಿಸಿ ರೈತರಿಗೆ ನೀರಾವರಿ ಸೌಲಭ್ಯ ಕೊಡಬೇಕೆಂದು ಹೋರಾಟ ಮಾಡಿದಂಥ ನಾಯಕರು ಇಂದು ನಮ್ಮಿಂದ ಕಣ್ಮರೆಯಾಗಿದ್ದಾರೆ. ಇದೇ ರೀತಿ ಕೃಷ್ಣಾ ಮೇಲ್ದಂಡೆ ಯೋಜನೆಯ ಕೀರ್ತಿ ನಮ್ಮ ನಾಗೇಗೌಡರಿಗೆ ಸಲ್ಲಬೇಕಾಗುತ್ತದೆ.

ಏಕೆಂದರೆ ಅವರು ಭಾರಿ ನೀರಾವರಿ ಇಲಾಖೆಯನ್ನು ವಹಿಸಿಕೊಂಡ ಮೇಲೆ ನೀರಾವರಿ ತಜ್ಞರಾದ ಇವರು ಬಹಳ ಚೆನ್ನಾಗಿ ಕೆಲಸ ಮಾಡಿದರು. ನನ್ನ ಪ್ರಕಾರ ನೀರಾವರಿ ತಜ್ಞರಾದ ನಂಜೇಗೌಡರನ್ನು ಬಿಟ್ಟರೆ ನಾಗೇಗೌಡರೇ ತದನಂತರದಲ್ಲಿ ನೀರಾವರಿ ವಿಚಾರದಲ್ಲಿ ಹೆಚ್ಚು ತಜ್ಞರು ಎಂದು ನನಗನ್ನಿಸುತ್ತದೆ. ನಾಗೇಗೌಡರು ಇಲಾಖೆಯನ್ನು ಉತ್ತಮವಾಗಿ ನಡೆಸಿಕೊಂಡು ಬಂದಿದ್ದರು. ಅಂಥ ಒಬ್ಬ ನಾಯಕ ಇಂದು ನಮ್ಮನ್ನು ಅಗಲಿದ್ದಾರೆ. ದೇವರು ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲಿ ಹಾಗೂ ಅವರನ್ನು ಅಗಲಿರುವ ಅವರ ಕುಟುಂಬದವರಿಗೆ ಆಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ಕೊಡಲಿ ಎಂದು ಹಾರೈಸುತ್ತೇನೆ. ಇನ್ನು ಪ್ರೊಫೆಸರ್ ನಂಜುಂಡಸ್ವಾಮಿಯವರ ಬಗ್ಗೆ ಹೇಳಬೇಕೆಂದರೆ, ಹಿಂದೆ ಹೆಚ್.ಎಸ್. ರುದ್ರಪ್ಪನವರು; ನಂಜುಂಡಸ್ವಾಮಿಯವರು ಹಾಗೂ ಇನ್ನೂ ಕೆಲವರು ಸೇರಿ ರುದ್ರಪ್ಪನವರ ಜೊತೆ ಪಕ್ಷವನ್ನು ಕಟ್ಟಿದಾಗ ನಾನೂ ಕೂಡ ರೈತ ಸಂಘದ ಮೂವ್‌ಮೆಂಟ್‌ನಲ್ಲಿ ಇದ್ದೆ. ಮುಂದೆ ಇವರು ರೈತ ಸಂಘದ ಮೂಲಕ ಚುನಾವಣೆಗಳಲ್ಲಿ ನಿಂತುಕೊಳ್ಳಲು ಹೊರಟಾಗ ನಮಗೆ ಮತ್ತು ಅವರ ನಡುವೆ ಭಿನ್ನಾಭಿಪ್ರಾಯ ಬಂದು ರೈತ ಸಂಘ ಯಾವುದೇ ಚುನಾವಣೆಗಳಿಗೆ ಹೋಗುವುದು ಬೇಡ. ಯಾವುದೇ ಪಕ್ಷವಾಗುವುದು ಬೇಡ. ಯಾರು ರೈತರ ಪರವಾಗಿ ಹೋರಾಟ ಮಾಡುತ್ತಾರೋ, ಯಾರು ರೈತರ ಪರವಾದ ಸರ್ಕಾರವನ್ನು ಕೊಡುತ್ತಾರೋ ಅವರಿಗೆ ಬೆಂಬಲ ಕೊಟ್ಟರೆ ಸರಿ ಎನ್ನುವ ವಿಚಾರ ಬಂದಾಗ ನಮ್ಮನಮ್ಮೊಳಗೆ ಭಿನ್ನಾಭಿಪ್ರಾಯ ಬಂದು ನಾನು ಆ ಚಳುವಳಿಯಿಂದ ಹಿಂದೆ ಸರಿದರೂ ಕೂಡ ಬೇರೆ ನಮ್ಮ ಪಕ್ಷದ ಮುಖಾಂತರವಾಗಿ ಆ ಚಳುವಳಿ ಬಗ್ಗೆ ನಾನು ಪ್ರಯತ್ನ ಮಾಡುತ್ತಿದ್ದೇನೆ. ಪ್ರೊಫೆಸರ್ ನಂಜುಂಡಸ್ವಾಮಿಯವರಿಗೆ ರೈತರ ಬಗ್ಗೆ ಇದ್ದಂಥ ಕಾಳಜಿಯ ಬಗ್ಗೆ ಹೇಳುವುದಾದರೆ, ನಾನು ಮಂತ್ರಿಯಾಗಿದ್ದಾಗ ಅವರು ವಿಧಾನಸಭಾ ಸದಸ್ಯರಾಗಿ ಇರಲಿಲ್ಲ. ಅವರು ಹೊರಗೇ ಇದ್ದರು. ಹಲವಾರು ಸಂದರ್ಭಗಳಲ್ಲಿ ಅವರು ನನ್ನ ಮನೆಗೇ ಒಂದು ಸಹಕಾರಿ ವಿಚಾರದಲ್ಲಿ ಬಹಳಷ್ಟು ಚರ್ಚೆ ಮಾಡಿ ರೈತರ ಪರವಾಗಿ ಸರ್ಕಾರ ಏನೇನು ಕೆಲಸ ಮಾಡುತ್ತಿದೆ, ಏನೇನು ಮಾಡಬೇಕು. ಇವೊತ್ತು ಸಹಕಾರಿ ಮೂವ್‌ಮೆಂಟ್ ಹೇಗಿದೆ? ನೀವೆಲ್ಲಾ ರೈತರ ಪರವಾಗಿ ಇಲ್ಲ ಎಂದು ಹೇಳಿ ಹಲವಾರು ಸಂದರ್ಭಗಳಲ್ಲಿ ನಮಗೆ ಬೈಯ್ದು ನಮ್ಮಲ್ಲೂ ಕೂಡ ಹಾದಿಗೆ ತರುವಂಥ ಕೆಲಸ ಮಾಡಿದ್ದಾರೆ. ಇಂಥ ನಂಜುಂಡಸ್ವಾಮಿಯವರೂ ಕೂಡ ಇಂದು ನಮ್ಮನ್ನು ಬಿಟ್ಟು ಅಗಲಿದ್ದಾರೆ. ಅವರ ಬಗ್ಗೆ ಈಗಾಗಲೇ ಬಹಳ ಉತ್ತಮವಾದ ಮಾತುಗಳನ್ನು ನಮ್ಮ ನಾಯಕರು ಆಡಿದ್ದಾರೆ. ನಂಜುಂಡಸ್ವಾಮಿಯವರ ಹೆಸರಿನಲ್ಲಿ ಹಲವಾರು ಸಂಸ್ಥೆಗಳನ್ನು ತೆಗೆಯಿರಿ ಎಂದು ಹೇಳಿದ್ದಾರೆ. ಅದರ ಜೊತೆಗೆ ನನ್ನದೊಂದು ಸಲಹೆ ಏನು ಎಂದರೆ ಹಾಲಿ ವ್ಯವಸ್ಥೆಯಲ್ಲಿ ಸರ್ಕಾರ ಸ್ಪರ್ಧೆಯನ್ನು ಏರ್ಪಡಿಸಿ ಇದರಲ್ಲಿ ಉತ್ತಮವಾದ ಬೆಳೆಯನ್ನು ಹೆಚ್ಚು ಬೆಳೆದಂಥ ರೈತರಿಗೆ ಪ್ರಶಸ್ತಿಗಳನ್ನು ಕೊಡುತ್ತಿದೆ. ಈ ಪ್ರಶಸ್ತಿಗೆ ನಂಜುಂಡಸ್ವಾಮಿಯವರ ಹೆಸರನ್ನು ತಕ್ಷಣದಲ್ಲಿಯೇ ಇಟ್ಟರೆ ಒಳ್ಳೆಯದು. ಈ ರೀತಿ ಮಾಡುವುದರಿಂದ ರೈತ ಸಮುದಾಯಕ್ಕೆ ಗೌರವ ಸಲ್ಲಿಸಿದಂತಾಗುತ್ತದೆ ಎಂದು ಹೇಳಿ ಇಂದೇನು ನಮ್ಮನ್ನು ನಂಜುಂಡಸ್ವಾಮಿಯವರು ಅಗಲಿದ್ದಾರೆ ಅವರ ಆತ್ಮಕ್ಕೆ ಶಾಂತಿ ದೊರೆಯಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ. ಇನ್ನು ಮುನಿರಾಜುರವರೂ ಕೂಡ ಉತ್ತಮವಾದಂಥ ರಾಜಕಾರಣಿ ಆಗಿದ್ದರು. ಅವರ ಮತ್ತು ನನ್ನ ನಡುವೆ ಹೆಚ್ಚು ಗೆಳೆತನ ಇಲ್ಲದೇ ಇದ್ದರೂ ಕೂಡ ಒಂದೆರಡು ಬಾರಿ ನನ್ನ ಮನೆಗೆ ನಾನು ಮಂತ್ರಿಯಾಗಿದ್ದಾಗ ಬಂದಿದ್ದರು. ಅಷ್ಟು ಬಿಟ್ಟರೆ ಹೆಚ್ಚೇನೂ ನನಗೆ ಪರಿಚಯವಿಲ್ಲ. ಆದಗೂ ಕೂಡ

ಅವರೊಬ್ಬ ಉತ್ತಮವಾದ ಹೋರಾಟಗಾರರು ಎನ್ನುವುದನ್ನು ನಾನು ಕೇಳಿದ್ದೇನೆ. ಇನ್ನು ವಾದಿರಾಜ್‌ರವರ ಬಗ್ಗೆ ಹೇಳಬೇಕೆಂದರೆ, ಇವತ್ತಿನ ಚಲನಚಿತ್ರ ರಂಗದಲ್ಲಿ ಚಿತ್ರ ನಟರು, ಅದರಲ್ಲೂ ಹಾಸ್ಯ ನಟರು ಅಶ್ಲೀಲವಾಗಿ ಹಾಸ್ಯವನ್ನು ಮಾಡುತ್ತಾರೆ. ಆದರೆ ವಾದಿರಾಜ್‌ರವರು ಹಿಂದೆ ಸಿನಿಮಾಗಳಲ್ಲಿ ಜನರಿಗೆ ತಿಳಿಹೇಳುವಂಥ ರೀತಿಯಲ್ಲಿ ಬಹಳ ಉತ್ತಮವಾಗಿ ಹಾಸ್ಯನಟನೆಯನ್ನು ಮಾಡಿದ್ದರು. ನಾನು ಸಿನಿಮಾ ನೋಡುವುದು ಕಡಿಮೆ. ಆದರೆ ಮೊನ್ನೆ ವಾದಿರಾಜ್‌ರವರು ನಿಧನರಾದಾಗ ಟಿ.ವಿ. ಮಾಧ್ಯಮದಲ್ಲಿ ಅವರ ಬಗ್ಗೆ ಬಂದಾಗ ತೋರಿಸಿದಂಥ ವಾದಿರಾಜ್‌ರವರ ಸಿನಿಮಾದಲ್ಲಿ ಕೆಲವು ಅಂಶಗಲನ್ನು ತೋರಿಸಿದರು. ಬಹಳ ಸುಂದರ, ಹಾಗೂ ಉತ್ತಮವಾದ ಹಾಸ್ಯದ ಮೂಲಕ ಜನರು ಒಳ್ಳೆಯ ಪರಿವರ್ತನೆಯಲ್ಲಿ ಸಾಗಬೇಕು ಎನ್ನುವಂತಿತ್ತು. ಇಂಥ ಹಾಸ್ಯನಟರು ಇಂದು ಸಿಗುವುದು ಕಷ್ಟ. ವಾದಿರಾಜ್‌ರವರು ಕೇವಲ ಹಾಸ್ಯ ಚಿತ್ರ ನಟರಲ್ಲ, ಇವರು ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದರು. ಸ್ವಾತಂತ್ರ್ಯ ಹೋರಾಟಗಾರರಾಗಿ ಈ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟರು. ಸ್ವಾತಂತ್ರ್ಯ ತಂದು ಕೊಟ್ಟವರಲ್ಲಿ ಇವರೂ ಕೂಡ ಮುಂಚೂಣಿಯಲ್ಲಿದ್ದರು ಎಂಬುದು ನಮಗೆಲ್ಲರಿಗೂ ಅಭಿಮಾನದ ವಿಚಾರವಾಗಿದೆ. ಇಂದು ನಮ್ಮನ್ನಗಲಿರುವ ಇವರ ಆತ್ಮಕ್ಕೆ ಕೂಡ ಭಗವಂತ ಶಾಂತಿಯನ್ನು ಕೊಡಲಿ ಎಂದು ಪ್ರಾರ್ಥಿಸಿ ತಾವೇನು ಇಂದು ಸಂತಾಪ ಸೂಚಕ ನಿರ್ಣಯವನ್ನು ಮಂಡಿಸಿದ್ದೀರಿ ಅದಕ್ಕೆ ನಾನೂ ಕೂಡ ಬೆಂಬಲವನ್ನು ಸೂಚಿಸಿ ತಮಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† **ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ)** :– ಮಾನ್ಯ ಅಧ್ಯಕ್ಷರೆ, ತಾವೇನು ಈ ದಿನ ಸಂತಾಪ ಸೂಚಕ ನಿರ್ಣಯವನ್ನು ಮಂಡಿಸಿದ್ದೀರಿ, ಅದಕ್ಕೆ ನಾನು ನನ್ನ ಬೆಂಬಲವನ್ನು ಸೂಚಿಸುತ್ತೇನೆ. ಕಳೆದ ಎರಡು ಅಧಿವೇಶನಗಳನ್ನು ನಾವು ಬಹಳ ಕೆಟ್ಟ ಘಳಿಗೆಯಲ್ಲಿ ಆರಂಭ ಮಾಡಿದೆವೋ ಅಥವಾ ಈ ರಾಜ್ಯದ ಒಂದು ವಾತಾವರಣವೇ ಸರಿ ಇಲ್ಲವೋ, ನನಗಂತೂ ಅರ್ಥವಾಗುತ್ತಿಲ್ಲ. ಸಾರ್ವಜನಿಕ ಜೀವನದಲ್ಲಿ ಬಹಳ ದೊಡ್ಡ ಕೊಡುಗೆಯನ್ನು ಕೊಟ್ಟಿರತಕ್ಕಂಥ ಈ ರಾಜ್ಯದ ಕೆಲವು ಗಣ್ಯ ವ್ಯಕ್ತಿಗಳು ನಮ್ಮಿಂದ ಕಣ್ಮರೆಯಾಗತಕ್ಕಂಥ, ನಮ್ಮ ಜೊತೆ ಇಲ್ಲದೇ ಇರತಕ್ಕಂಥ ಪರಿಸ್ಥಿತಿ ನಿರ್ಮಾಣವಾಯಿತು. ಎರಡೂ ಅಧಿವೇಶನದಲ್ಲಿ ಅನೇಕ ಗಣ್ಯರ ಬಗ್ಗೆ ಸಂತಾಪ ಸೂಚಕ ನಿರ್ಣಯ ಮಂಡಿಸತಕ್ಕಂಥ ದುರದೃಷ್ಟಕರವಾದ ಸಂಗತಿಗಳು ಈ ರಾಜ್ಯದಲ್ಲಿ ಬಂತು. ಇದರಿಂದಾಗಿ ನಮ್ಮ ಮನಸ್ಸಿಗೆ ಬಹಳ ನೋವು ಉಂಟಾಗಿದೆ. ಮೊದಲನೆಯದಾಗಿ ಹೇಳುವುದಾದರೆ ಸಾರ್ವಜನಿಕ ಜೀವನದಲ್ಲಿ ನಾಗೇಗೌಡರ ಕಾರ್ಯವೈಖರಿಯನ್ನು ಬಹಳ ಹತ್ತಿರದಿಂದ ನೋಡುವಂಥ ಅವಕಾಶ ನನಗೆ ಇತ್ತು. ವೀರಪ್ಪಮೊಯ್ಲಿಯವರ ಸಂಪುಟದಲ್ಲಿ ಪಶು ಸಂಗೋಪನಾ ಸಚಿವರಾಗಿ ನಾಗೇಗೌಡರು ಕಾರ್ಯ ನಿರ್ವಹಿಸುತ್ತಿದ್ದಾಗ ನಾನು ಶಿವಮೊಗ್ಗ ಮಿಲ್ಕ್ ಡೈರಿಯ ಅಧ್ಯಕ್ಷನಾಗಿ ಕೆಲಸ ಮಾಡುತ್ತಿದ್ದೆ. ನಮಗೆ ಅನ್ನಿಸುತ್ತದೆ. ಬಹಳಷ್ಟು ಇಲಾಖೆಗಳ ಕೆಲಸಗಳು ಕೆಲವು ಮಂತ್ರಿಗಳಿಗೆ ಘನತೆಯನ್ನು ತಂದುಕೊಡುತ್ತದೆ. ಆದರೆ ನಾಗೇಗೌಡರಂಥ ಮಂತ್ರಿ ಇಲಾಖೆಗೇ ದೊಡ್ಡ ಘನತೆಯನ್ನು ತಂದುಕೊಟ್ಟರು. ಪಶು ಸಂಗೋಪನಾ ಇಲಾಖೆ ಎಂದರೆ ನಮಗೆಲ್ಲಾ ಸಾಮಾನ್ಯವಾಗಿ ನೋಡುವ ಹಾಗೆ ಯಾರೋ ಒಬ್ಬರನ್ನು ಮಂತ್ರಿ ಮಾಡಬೇಕು ಎನ್ನುವ ಉದ್ದೇಶಕ್ಕೋಸ್ಕರವಾಗಿಯೇ ಇದೊಂದು ಖಾತೆ ಇದೆಯೇನೋ ಎಂದು ನಮಗನ್ನಿಸುತ್ತದೆ. ಏಕೆಂದರೆ ಅದಕ್ಕೆ ಕೊಡುವ ದುಡ್ಡು, ಅದರ ನಡವಳಿಕೆಗಳನ್ನು ನೆನಸಿಕೊಂಡರೆ ಹಾಗನ್ನಿಸುತ್ತದೆ. ಆದರೆ ನಾಗೇಗೌಡರಂಥ ಮಂತ್ರಿಗಳು ಆ

(† ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಪಶು ಸಂಗೋಪನಾ ಇಲಾಖೆಯನ್ನು ಎಷ್ಟು ದೊಡ್ಡ ಇಲಾಖೆ ಎಂದು ಅವರ ಕಾಲದಲ್ಲಿ ಜನತೆಗೆ ತೋರಿಸಿಕೊಟ್ಟರು. ಮಾನ್ಯ ಗಣಿ ಸಚಿವರಾದ ಮುನಿಯಪ್ಪನವರು ಮಾತನಾಡುವ ಸಂದರ್ಭದಲ್ಲಿ ನಾಗೇಗೌಡರ ಬಗ್ಗೆ ಬಹಳಷ್ಟು ಉತ್ತಮವಾಗಿ ಹೇಳಿದ್ದಾರೆ. ಹಿಂದೆ ಕರ್ನಾಟಕ ರಾಜ್ಯದಲ್ಲಿ ಹಾಲಿನ ಉತ್ಪಾದನೆ ಮಾರಾಟಕ್ಕಿಂತ ಜಾಸ್ತಿ ಆಗಿತ್ತು. ಅಂಥ ಸಂದರ್ಭದಲ್ಲಿ ಪಶು ಸಂಗೋಪನಾ ಸಚಿವರಾಗಿ ನಾಗೇಗೌಡರು ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ ತುಮಕೂರು, ಮಂಡ್ಯ, ಕೋಲಾರ ಹಾಗೂ ಮೈಸೂರು ಡೈರಿಗಳಲ್ಲಿ ಮೂರು ತಿಂಗಳು, ನಾಲ್ಕು ತಿಂಗಳುಗಳ ಕಾಲ ಹಾಲಿ ಬಟವಾಡೆಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ರೈತರು ಬಂದ್ ಮಾಡಿ ರಸ್ತೆ ತಡೆಯನ್ನು ಮಾಡಿ ಚಳವಳಿಯನ್ನು ಕೂಡ ಮಾಡುತ್ತಿದ್ದರು. ಒಂದೆರಡು ಕಡೆ ಲಾಠಿ ಛಾರ್ಜ್ ಕೂಡ ಆಗಿತ್ತು. ಇಂಥ ಸಂದರ್ಭದಲ್ಲಿ ನಾಗೇಗೌಡರು ಆ ಇಲಾಖೆಯನ್ನು ಬಹಳ ಚಾಣಾಕ್ಷತನದಿಂದ ನಡೆಸಿ; ಅವರು ಹೇಳುತ್ತಿದ್ದರು, ನಾವು ಇಲಾಖೆಯನ್ನು ಎಕ್ಸ್‌ಪ್ಯಾನ್‌ಶನ್ ಮಾಡುವುದಕ್ಕಿಂತ ಇಲಾಖೆಯಲ್ಲಿ ಉತ್ಪಾದನೆಯಾಗುವ ಹಾಲಿನ ಮಾರಾಟದ ಬಗ್ಗೆ, ಹಾಲು ಉತ್ಪನ್ನಗಳ ಮಾರಾಟದ ಬಗ್ಗೆ ಹೆಚ್ಚು ನಿಗಾ ಕೊಡಬೇಕೆಂದು ಯೋಚನೆ ಮಾಡಿ ಈ ನಿಟ್ಟಿನಲ್ಲಿ ಮಂತ್ರಿಯಾಗಿದ್ದಂಥ ವೀರಪ್ಪಮೊಯ್ಲಿಯವರ ಜೊತೆ ಮಾತನಾಡಿ ಎಕ್ಸೆಸ್ ಹಾಲನ್ನು ಚರಂಡಿಗಳಿಗೆ ಬಿಡತಕ್ಕಂಥ ಸಂದರ್ಭಗಳಲ್ಲಿ, ಮಿಲ್ಕ್ ಹಾಲಿಡೇಗಳನ್ನು ಡಿಕ್ಲೇರ್ ಮಾಡತಕ್ಕಂಥ ಸಂದರ್ಭಗಳಲ್ಲಿ ಇವರುಗಳು ಯೋಚನೆ ಮಾಡಿ ಪ್ರಾಥಮಿಕ ಶಾಲೆಗಳ ಮಕ್ಕಳಿಗೆ ಹಾಲನ್ನು ಕೊಡತಕ್ಕಂಥ ಯೋಜನೆಯನ್ನು ಅಂದು ಜಾರಿಗೆ ತಂದರು. ಡೈರಿಗಳ ಮೂಲಕ ಮತ್ತು ಹಾಲಿನ ಸೊಸೈಟಿಗಳ ಮೂಲಕ ಎಲ್ಲಾ ಪ್ರಾಥಮಿಕ ಶಾಲೆಗಳಿಗೆ ಹಾಲನ್ನು ಸರಬರಾಜು ಮಾಡತಕ್ಕಂಥ ವ್ಯವಸ್ಥೆಯನ್ನು ಜಾರಿಗೆ ತಂದು ಸರಬರಾಜಾದ ಹಾಲಿಗೆ ಸರ್ಕಾರ ಹಣ ಕೊಡುವ ಹಾಗೆ ಮಾಡಿದರು. ಅದರ ಜೊತೆಗೆ ಮಾನ್ಯ ನಾಗೇಗೌಡರು ವಿಶೇಷವಾಗಿ ಈ ಖಾತೆಯನ್ನು ನಡೆಸಿರತಕ್ಕಂಥವರು. ಅವತ್ತು ಮಾಧ್ಯಮದ ಮಿತ್ರರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಆ ದಿವಸದಲ್ಲಿ ಒಂದು ಪತ್ರಿಕೆಯಲ್ಲಿ ಒಂದು ಜೋಕ್ ಬಂದಿತ್ತು. ಅದೇನೆಂದರೆ ಪತ್ರಕರ್ತರ ಮನೆಯಲ್ಲಿ ಪತ್ರಕರ್ತ ಹೊರಗೆ ಹೊರಡಬೇಕಾದರೆ ಅವರ ಹೆಂಡತಿ ಇವತ್ತು ಮನೆಯಲ್ಲಿ ತುಪ್ಪ ಖಾಲಿಯಾಗಿದೆ. ತೆಗೆದುಕೊಂಡು ಬನ್ನಿ ಎಂದಾಗ ಪತ್ರಕರ್ತ, 'ಮಾನ್ಯ ನಾಗೇಗೌಡರು ನಾಳೆ ಅಥವಾ ನಾಡಿದ್ದು ಪತ್ರಿಕಾಗೋಷ್ಠಿ ಕರೆಯುತ್ತಾರೆ. ಸ್ವಲ್ಪ ಇರು ಎಂದು ಹೇಳುತ್ತಾರೆ. ಎಂದರೆ ಪತ್ರಿಕಾಗೋಷ್ಠಿ ಕರೆದು ನಮ್ಮ ಮಾಧ್ಯಮ ಮಿತ್ರರಿಗೆ ಹಾಲಿನ ಉತ್ಪನ್ನಗಳ ಸ್ಯಾಂಪಲ್ ಅನ್ನು ಕೊಡುವುದರ ಮೂಲಕ ಹಾಲಿನ ಉತ್ಪನ್ನವನ್ನು ಮಾರ್ಕೆಂಟಿಂಗ್ ಮಾಡುವಂತಹ ವ್ಯವಸ್ಥಿತವಾಗಿರತಕ್ಕಂಥ ಪ್ರಯತ್ನವನ್ನು ಮಾಡಿದರು. ಬಹುಶಃ ಅವರು ಹಾಗೆ ಮಾಡದಿದ್ದರೆ ಕೆ.ಎಂ.ಎಫ್ ನಿಂದ ಕೋಟಿಗಟ್ಟಲೆ ಹಣವನ್ನು ಅಡ್ವರ್‌ಟೈಸ್‌ಮೆಂಟ್‌ಗೆ ಕೊಡಬೇಕಾಗಿತ್ತು. ಅಂದು ಅವರು ಒಬ್ಬ ಮಂತ್ರಿಯಾಗಿ ಆ ಮಾಧ್ಯಮದ ಮಿತ್ರರನ್ನು, ನಾನು ಈ ಮಾತನ್ನು ಹೇಳುವಾಗ ಪತ್ರಕರ್ತರು ಕ್ಷಮಿಸಬೇಕು. ನಾನೇನು ಹಾಲಿನ ಪ್ಯಾಕೇಟ್ ಅನ್ನು ಅಥವಾ ತುಪ್ಪದ ಪ್ಯಾಕೇಟನ್ನು ಕೊಟ್ಟು ವಿಶ್ವಾಸಕ್ಕೆ ತೆಗೆದುಕೊಂಡರು ಎಂದು ಹೇಳುವುದಿಲ್ಲ. ಇದಕ್ಕೆ ಸಂಬಂಧಪಟ್ಟ ಹಾಗೆ ಒಂದು ಜೋಕ್ ಬಂದಿತ್ತು. ಅದನ್ನು ಹೇಳಿದೆ. ಆದರೆ ಅವತ್ತು ಹಾಗೆ ಮಾಧ್ಯಮದ ಮಿತ್ರರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಪತ್ರಿಕಾಗೋಷ್ಠಿಯಲ್ಲಿ ಹೈಲೈಟ್ ಮಾಡಿಸತಕ್ಕಂಥ ವಿಚಾರ ಇವತ್ತು ನೋಡಿದರೆ, ನಮ್ಮ ಕೆ.ಎಂ.ಎಫ್‌ನವರು ಅಡ್ವರ್‌ಟೈಸ್‌ಮೆಂಟ್ ಕೊಟ್ಟಿದ್ದರೆ ಅಲ್ಲಿ ಕೋಟಿ ಗಟ್ಟಲೆ ರೂ. ಹಣ ಅಡ್ವಟೈಸ್‌ಮೆಂಟ್‌ಗೆ ಹೋಗುತ್ತಿತ್ತು. ಇಂತಹ ಒಂದು ಪರಿಸ್ಥಿತಿಯಲ್ಲಿ ಬಹಳ ಚೆನ್ನಾಗಿ

ಆ ಒಂದು ಖಾತೆಯನ್ನು ನಿಭಾಯಿಸಿದರು. ಇನ್ನು ವಿಶೇಷವಾಗಿ ನೆನಪು ಮಾಡಿಕೊಳ್ಳತಕ್ಕದ್ದು ಈ ಸಂದರ್ಭದಲ್ಲಿ ಡೈರಿಯ ಅಧ್ಯಕ್ಷರು ವಿದೇಶ ಪ್ರವಾಸ ಮಾಡಬೇಕೆಂದು ಹೇಳಿ ಕೆ.ಎಂ.ಎಫ್ ನಲ್ಲಿ ಒಂದು ಅಧ್ಯಯನ ಪ್ರವಾಸಕ್ಕೋಸ್ಕರ ಒಂದು ನಿಧಿಯನ್ನು ಸ್ಥಾಪನೆ ಮಾಡಿದ್ದಾರೆ. ಅದುವರೆಗೂ ನಮ್ಮ ಅನೇಕ ಅಧಿಕಾರಿಗಳೇ ವಿದೇಶ ಪ್ರವಾಸವನ್ನು ಮಾಡುತ್ತಿದ್ದರು. ಆಗ ಮಾನ್ಯ ನಾಗೇಗೌಡರು, ನಮ್ಮ ರೈತರ ಮಕ್ಕಳು ವಿದೇಶ ಪ್ರವಾಸ ಮಾಡಬೇಕು. ಅಲ್ಲಿ ಏನು ಕೆಲಸ ನಡೆಯುತ್ತಿದೆ, ಹಾಲಿನ ಉತ್ಪಾದನೆ ಹಾಗೂ ಉತ್ಪನ್ನಗಳು ಹೇಗೆ ಆಗುತ್ತದೆಂದು ನೋಡಬೇಕೆಂದು ಹೇಳಿದರು. ಅಂತಹ ಒಂದು ಸಂದರ್ಭದಲ್ಲಿ ನಾವೆಲ್ಲಾ ಹೊರಡುವುದಕ್ಕೆ ವೀಸಾ ಎಲ್ಲಾ ಆಗಿತ್ತು. ಆದರೆ ಹೊರಡಬೇಕು ಎನ್ನುವಷ್ಟರಲ್ಲಿ, ನಮ್ಮ ಬ್ಯಾಚ್‌ನಲ್ಲಿ ಯಾರೋ ಒಬ್ಬ ಅಧಿಕಾರಿಯನ್ನು ಕರೆದುಕೊಂಡು ಹೋಗುತ್ತಿಲ್ಲವೆನ್ನುವ ಕಾರಣಕ್ಕೆ ಅದನ್ನು ಎತ್ತಿಕಟ್ಟೆ ನಮ್ಮ ವಿದೇಶ ಪ್ರವಾಸವನ್ನು ಮೊಟಕು ಮಾಡುವಂತಹ ಸಂದರ್ಭ ಬಂತು. ಆಗ ಮಾನ್ಯ ನಾಗೇಗೌಡರು ನಮ್ಮನೆಲ್ಲಾ ಮಾನ್ಯ ಮುಖ್ಯಮಂತ್ರಿಗಳಾಗಿದ್ದಂತಹ ವೀರಪ್ಪ ಮೊಯಿಲಿ ಯವರ ಹತ್ತಿರ ಕರೆದುಕೊಂಡು ಹೋಗಿ ಒಂದು ಮಾತನ್ನು ಹೇಳಿದರು. ಮಾನ್ಯ ಮುಖ್ಯಮಂತ್ರಿಗಳೇ ನಿಮ್ಮ ಕಾಲದಲ್ಲಿ ರೈತರ ಮಕ್ಕಳು ಈ ಹಣದಲ್ಲಿ ವಿದೇಶ ಪ್ರವಾಸ ಮಾಡಬಾರದು ಎಂದರೆ, ಇನ್ನು ಯಾವ ಕಾಲದಲ್ಲಿ ಮಾಡಬೇಕೆಂದು ಕೇಳಿದರು. ಆಗ ಮಾನ್ಯ ವೀರಪ್ಪ ಮೊಯಿಲಿಯವರು ಅಲ್ಲಿಯೇ ಒಂದು ಆದೇಶವನ್ನು ಬರೆದು, ಇವರು ಹೋಗಬಹುದು ಎಂದು ಹೇಳಿದಾಗ, ಆ ಸಂದರ್ಭದಲ್ಲಿ ನಾವೆಲ್ಲಾ ವಿದೇಶ ಪ್ರವಾಸ ಮಾಡಿ ನೋಡುವುದಕ್ಕೆ ಆಯಿತು. ಇಲ್ಲದೆ ನಮ್ಮ ಜೀವನದಲ್ಲಿ ಅದು ಸಾಧ್ಯವಾಗುತ್ತಿರಲಿಲ್ಲ. ಮಾನ್ಯ ನಾಗೇಗೌಡರಂತಹ ಮಂತ್ರಿಗಳು ಸಾರ್ವಜನಿಕ ಜೀವನಕ್ಕೆ ಯಾವರೀತಿ ಮೌಲ್ಯವನ್ನು ತುಂಬಿಕೊಟ್ಟರು, ದೊರಕಿಸಿಕೊಟ್ಟರು ಎನ್ನುವುದಕ್ಕೆ ಅವರು ನೀರಾವರಿ ಸಚಿವರಾಗಿದ್ದಂತಹ ಸಂದರ್ಭದಲ್ಲಿ ಬಹಳ ಚಟುವಟಿಕೆಯಿಂದ ಕೆಲಸ ಮಾಡುತ್ತಿದ್ದರು ಎನ್ನುವುದನ್ನು ನಾವು ಕಣ್ಣಾರೆ ಕಂಡಿದ್ದೇವೆ. ಅಂತಹ ವ್ಯಕ್ತಿ ನಮ್ಮ ನಡುವೆ ಇಲ್ಲ. ಇದರಿಂದ ಸಾರ್ವಜನಿಕ ಜೀವನಕ್ಕೆ ಬಹಳ ದೊಡ್ಡ ನಷ್ಟವಾಗಿದೆ ಎಂದು ಹೇಳುತ್ತಾ, ಇನ್ನು ಪ್ರೊ: ನಂಜುಂಡಸ್ವಾಮಿ ಮತ್ತು ಸುಂದರೇಶ್ ಅವರು ನನ್ನ ಕ್ಷೇತ್ರದವರು ಮಾನ್ಯ ರುದ್ರಪ್ಪನವರೂ ಕೂಡ ನಮ್ಮ ಜಿಲ್ಲೆಯವರು. ಇವತ್ತು ರೈತರಿಗೆ ಒಂದು ದೊಡ್ಡ ಧ್ವನಿಯನ್ನು ಶಕ್ತಿಯನ್ನು ಒದಗಿಸಿದ್ದರೆ ಪ್ರೊ: ನಂಜುಂಡಸ್ವಾಮಿಯವರು. ಏನೂ ಆಗದೆ ಇದ್ದರೂ ಕೂಡ ನಾವೆಲ್ಲಾ ರೈತರ ಪ್ರತಿನಿಧಿಗಳಾಗಿ ಆಯ್ಕೆಯಾಗಿ ಬರುತ್ತೇವೆ. ಇಲ್ಲಿ ಈ ಸದನದೊಳಗೆ ಬಂದಕೂಡಲೇ ರೈತರ ಬಗ್ಗೆ ಎಷ್ಟು ಒತ್ತನ್ನು ಕೊಡಬೇಕು ಅದನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಆದರೆ ಅವರು ನಮ್ಮ ಕಣ್ಣನ್ನು ತೆರೆಸುವಂತಹ ರೀತಿಯಲ್ಲಿ ಹೋರಾಟ ಹಾಗೂ ಚಿಂತನೆಗಳನ್ನು ಕೊಟ್ಟಿರತಕ್ಕಂಥವರು ಪ್ರೊ: ನಂಜುಂಡಸ್ವಾಮಿಯವರು. ಇವತ್ತು ನಮ್ಮ ದರ್ಪಿಷ್ಟ ಅಧಿಕಾರಿಗಳು, ಒಬ್ಬ ಸಾಮಾನ್ಯ ಹಳ್ಳಿಯ ಹರಕು ಬಟ್ಟೆಯ ರೈತರ ಕಚೇರಿಗೆ ಹೋದರೆ ಅವನನ್ನು ನಡೆಸಿಕೊಳ್ಳತಕ್ಕಂತ ರೀತಿ ನೋಡಿದರೆ ಅವನು ಕುರ್ಚಿಯಲ್ಲಿ ಕೂರುವ ಹಾಗೆ ಇರಲಿಲ್ಲ, ಅವನನ್ನು ಅವನ ಬಟ್ಟೆಯನ್ನು ನೋಡಿ ಹೊರಗಡೆ ನಿಲ್ಲಿಸಿ ಹಾಗೆ ಕಳುಹಿಸುವಂತಹ ಪರಿಸ್ಥಿತಿ ಹಾಗೂ ತಾಲ್ಲೂಕು ಕಚೇರಿಯಲ್ಲಿ ಅಲ್ಲಿನ ಜವಾನ ಒಬ್ಬ ರೈತನನ್ನು ಒಳಗೆ ಬಿಡುತ್ತಿರಲಿಲ್ಲ ಅಂತಹ ಒಂದು ಸಂದರ್ಭ ಕೂಡ ಇತ್ತು. ಆದರೆ ಇವತ್ತು ರೈತರು ಬರುತ್ತಾರೆ ಎಂದರೆ ತಹಸೀಲ್ದಾರ್ ಅಥವಾ ಕಚೇರಿಯಲ್ಲಿ ಇನ್ನು ಇರುವಂತಹ ಬೇರೆ ಅಧಿಕಾರಿಗಳು ಎದ್ದು ನಿಲ್ಲುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದಾರೆ. ಆ ಒಂದು [illegible]

ತಂದುಕೊಟ್ಟಿದ್ದರೆ, ರೈತನಿಗೆ ಗೌರವಿಸಬೇಕು ಎಂದು ಹೇಳಿಕೊಟ್ಟಿದ್ದು, ಅಧಿಕಾರಿ ತಿನ್ನುವ ಅನ್ನ ನಿನ್ನದು, ಅವನ ಬಟ್ಟೆ ನನ್ನದು, ಅವರ ಸಂಬಳ ನಿನ್ನದು, ಅವನು ಹಾಕುವ ಯೂನಿಫಾರಂ ನಿನ್ನದು, ನೀನೇಕೆ ಅಧಿಕಾರಿಯ ಜೊತೆ ಮಾತನಾಡಬಾರದು ಎಂದು ಹೇಳಿಕೊಟ್ಟು, ಅಂತಹ ಒಂದು ಪ್ರಜ್ಞೆಯನ್ನು ನಿರ್ಮಾಣ ಮಾಡಿ, ರೈತ ಚಳುವಳಿಯನ್ನು ಪ್ರಾರಂಭ ಮಾಡಿದರು. ಅವರು ಇವತ್ತು ರೈತರಿಗೆ ಒಂದು ದೊಡ್ಡ ಶಕ್ತಿಯನ್ನು ತುಂಬಿ ಕೊಟ್ಟಿದ್ದಾರೆ. ಅಂತಹ ವ್ಯಕ್ತಿಯ ಸಾವಿನಿಂದ ಇವತ್ತು ರೈತ ಸಮುದಾಯ ಬಹಳ ದೊಡ್ಡ ನಷ್ಟವನ್ನು ಅನುಭವಿಸಿದೆ. ಅವರ ಕುಟುಂಬದವರಿಗೆ ಮತ್ತು ಸಾರ್ವಜನಿಕ ಜೀವನದಲ್ಲಿ ಅವರನ್ನು ಮೆಚ್ಚಿರತಕ್ಕಂಥ ಅವರ ಬಂಧುಗಳಿಗೆ, ಅವರ ಅಗಲಿಕೆಯ ನೋವನ್ನು ಸಹಿಸುವಂತಹ ಶಕ್ತಿಯನ್ನು ಭಗವಂತನು ಕೊಡಲಿ ಎಂದು ಹಾಗೂ ಅವರ ಚಿಂತನೆಗಳು ಮುಂದುವರೆಯಲಿ ಎಂದು ಹಾರೈಸುತ್ತಾ ನನಗೆ ಇವತ್ತು ಮಾತನಾಡುವುದಕ್ಕೆ ಅವಕಾಶ ಕೊಟ್ಟಂತಹ ತಮಗೆ ವಂದಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

† **ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ)** :– ಮಾನ್ಯ ಅಧ್ಯಕ್ಷರೆ, ತಾವು ತಂದಿರುವಂತಹ ಸಂತಾಪ ಸೂಚನಾ ನಿರ್ಣಯಕ್ಕೆ ನನ್ನ ಬೆಂಬಲವನ್ನು ಸೂಚಿಸುತ್ತಾ, ಈಗಾಗಲೇ ನಮ್ಮ ಎಲ್ಲಾ ನಾಯಕರುಗಳು, ನಿಧನರಾದಂತಹ ಮೂರು ಮಂದಿಗಳ ಬಗ್ಗೆ ಹೇಳುತ್ತಾ, ನಮ್ಮ ನಾಡಿನ ನಮ್ಮ ರಾಜ್ಯದ ರೈತ ಸಮುದಾಯದ ಬಗ್ಗೆ ಬಹಳಷ್ಟು ಕಳಕಳಿ ಇದ್ದು ಒಳ್ಳೆಯ ಕಾರ್ಯವನ್ನು ಮಾಡಿ ತಮ್ಮ ಸೇವೆಯ ಮೂಲಕ ಈ ಒಂದು ರಾಜ್ಯಕ್ಕೆ ಸಹಾಯವನ್ನು ಮಾಡಿರುವುದರ ಬಗ್ಗೆ ಅನೇಕ ವಿಚಾರಗಳನ್ನು ತಿಳಿಸಿದ್ದಾರೆ. ಅದರಲ್ಲೂ ಮುಖ್ಯವಾಗಿ ಮೊನ್ನೆ ನಿಧನರಾದಂತಹ ಮಾನ್ಯ ಕೆ.ಎನ್. ನಾಗೇಗೌಡರು ನಮ್ಮ ಜೊತೆ ಇದ್ದಂತಹವರು. ಅವರು ಪಶುಸಂಗೋಪನಾ ಸಚಿವರಾಗಿ ರಾಜ್ಯಕ್ಕೆ ಮಾಡಿದಂತಹ ಸೇವೆಯನ್ನು ಮತ್ತು ನೀರಾವರಿ ಸಚಿವರಾಗಿ ಅವರು ರಾಜ್ಯಕ್ಕೆ ನೀಡಿದಂತಹ ಸೇವೆಯನ್ನು ಈಗಾಗಲೇ ಅನೇಕ ನಾಯಕರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಭಾಗದ ರೈತರಿಗೆ ಬಹಳ ಪ್ರಾಮುಖ್ಯವಾಗಿರುವುದು ನೀರಾವರಿ ಏಕೆಂದರೆ ಕರ್ನಾಟಕ ರಾಜ್ಯದ ಉಳಿದ ರಾಜ್ಯಗಳಿಗೆ ಹೋಲಿಸಿದರೆ ನೀರಾವರಿಯ ಪ್ರಮಾಣದಲ್ಲಿ ಎಷ್ಟು ತೀವ್ರವಾಗಿ ನಾವು ಪ್ರಯೋಜನವನ್ನು ಮಾಡಿಕೊಳ್ಳಬೇಕಾಗಿತ್ತು ಆ ದೃಷ್ಟಿಯಲ್ಲಿ ಪ್ರಯೋಜನವಾಗಿರಲಿಲ್ಲ. ಅಂತಹ ಕಾಲದಲ್ಲಿ ಮಾನ್ಯ ನಾಗೇಗೌಡರು ಬಂದು ಕೃಷ್ಣಾ ಇರಬಹುದು ಕಾವೇರಿ ಇರಬಹುದು. ಈ ಎಲ್ಲಾ ಜಲಾನಯನಗಳ ಮೂಲಕ ರೈತರಿಗೆ ನೀರನ್ನು ತೀವ್ರವಾಗಿ ಒದಗಿಸುವುದು, ರೈತರಿಗೆ ಈ ಯೋಜನೆಗಳ ಪ್ರಯೋಜನ ಹಿಂದೆ ಎಂದೋ ಆಗಬೇಕಾಗಿತ್ತು ಆಗಲಿಲ್ಲವೆನ್ನುವ ದಿಸೆಯಲ್ಲಿ ಅವರು ಸಾಕಷ್ಟು ಪ್ರಯತ್ನವನ್ನು ಮಾಡಿದರು. ಇನ್ನು ಮಹಾದಾಯಿ ಸಲುವಾಗಿ ಸಹ ಅವರು ಮಂತ್ರಿಗಳಾಗಿದ್ದಾಗ ಒತ್ತಾಯವನ್ನು ಮಾಡಿ ಮಲಪ್ರಭಾಗೆ ಮಹಾದಾಯಿಯನ್ನು ಜೋಡಿಸಬೇಕೆಂದು ಹೇಳಿ ಗೋವಾ ಸರ್ಕಾರವನ್ನು ಕೂಡ ಒತ್ತಾಯ ಮಾಡಿ ತರಬೇಕು ಎನ್ನುವುದರ ಬಗ್ಗೆ ಸಾಕಷ್ಟು ಚರ್ಚೆ ಮಾಡಿತ್ತು. ಇದನ್ನು ಮಾನ್ಯ ಮುಖ್ಯಮಂತ್ರಿಗಳಾದಂತಹ ಜೆ.ಹೆಚ್. ಪಟೇಲರ ಕಾಲದಲ್ಲಿ ಕೂಡ ಅವರು ಮಾಡುವುದಕ್ಕೆ ಪ್ರಯತ್ನ ಮಾಡಿದರು. ಆದರೆ ಈ ಕಾರ್ಯ ಇನ್ನುವರೆಗೂ ಕೂಡ ಆಗಲಿಲ್ಲ. ಆದರೆ ಮುಖ್ಯವಾಗಿ ಹೇಳುವುದೇನೆಂದರೆ, ಅವರಿಗೆ ಇರುವಂತಹ ನೀರಾವರಿ ಬಗ್ಗೆ ಹಾಗೂ ರೈತರಿಗೆ ನೀರು ಒದಗಿಸಬೇಕು ಎನ್ನುವಂತಹ ಕಾಳಜಿಯಿಂದ ಕೆಲಸ ಮಾಡಿದರು. ಅವರಿಗೆ ಶಿಕ್ಷಣದ ಬಗ್ಗೆ ಕೂಡ ಅಷ್ಟೇ ಪ್ರೀತಿ ಪ್ರೇಮ ಇದ್ದು, ಅದರ ಬಗ್ಗೆ ಕೂಡ ಶಿಕ್ಷಣ ಸಂಸ್ಥೆ ಮೂಲಕ ಕಾರ್ಯವನ್ನು

(† ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಮಾಡಿದ್ದಾರೆ. ಅವರು ಇನ್ನೂ ಬಹಳ ದಿವಸ ರಾಜ್ಯದ ರಾಜಕೀಯದಲ್ಲಿ ಇದ್ದು ಸೇವೆ ಮಾಡುವಂತಹ ಅವಕಾಶ ಇತ್ತು. ಅವರು ಅನಿರೀಕ್ಷಿತವಾಗಿ ನಿಧನರಾಗಿದ್ದಾರೆ. ಇದು ದುಃಖದಾಯಕವಾದಂತಹ ವಿಚಾರ. ಬಹಳ ಸಂಕಷ್ಟದಲ್ಲಿ ಇರುವಂತಹ ರಾಜಕೀಯ ಸನ್ನಿವೇಶದಲ್ಲಿ ಅವರು ಒಂದು ಒಳ್ಳೆಯ ವಿಚಾರಕ್ಕಾಗಿ ದೆಹಲಿಗೆ ಹೋದಾಗ ನಿಧನರಾಗಿದ್ದು ನಮ್ಮೆಲ್ಲರಿಗೂ ಕೂಡ ಬಹಳ ದುಃಖವಾಗಿದೆ. ಅವರ ಕುಟುಂಬಕ್ಕೆ ಮತ್ತು ಸಾರ್ವಜನಿಕರಿಗೆ ಆದಂತಹ ದುಃಖದಲ್ಲಿ ಸಹ ನಾವು ಪಾಲುಗಾರದಾಗಿದ್ದೇವೆ. ಇನ್ನು ಎರಡನೆಯದಾಗಿ ಮಾನ್ಯ ಮುನಿರಾಜು ಅವರು 1965 ರಿಂದ ನನಗೆ ಪರಿಚಯ. ಅವರು ರೈತರ ಸಲುವಾಗಿ ದೊಡ್ಡಬಳ್ಳಾಪುರದಲ್ಲಿ ನಂದಿ ಸೀಡ್ಸ್ ಪ್ರೋಸಿಂಗ್ ಯುನಿಟ್ ಹಾಕಿದ್ದರು. ಆ ಕಾಲದಿಂದಲೂ ಸಹ ಅವರು ಉತ್ತಮ ತಳಿಗಳನ್ನು ಬೆಳೆಸುವುದು, ಹೈಬ್ರೀಡ್ ಯಾವಾಗ ಬಂತು ಆವಾಗಿನಿಂದ ಅವರು ಹೆಚ್ಚು ರೈತರ ಬೆಳವಣಿಗೆಗಾಗಿ ಪ್ರೋಸೆಸಿಂಗ್ ಯುನಿಟ್ ಹಾಕಿ ಸೀಡ್ ಉತ್ಪಾದನೆ ಮಾಡುವಂತಹ ಕಾರ್ಯದಲ್ಲಿ ತೊಡಗಿದವರು. ಅವರು ಶಾಸಕರೂ ಕೂಡ ಆಗಿದ್ದರು. ನಾವು ಶಾಸಕರಾಗಿ ಬಂದಾಗ ಅವರು ಶಾಸಕರಾಗಿ ಇರಲಿಲ್ಲ. ಅವರು ಎಂದಿನಿಂದ ರಾಜಕೀಯ ಜೀವನದಲ್ಲಿ ಇದ್ದರೋ ಅಂದಿನಿಂದ ನಮಗೆ ಹೆಚ್ಚು ಪರಿಚಯ ಇದೆ. ಮತ್ತು ಅವರು ಬೀಜೋತ್ಪಾದನೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿ ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ಸೀಡ್ಸ್ ಎನ್ನುವ ಸಂಸ್ಥೆಯನ್ನು ಮುಂದೆ ತರುವುದಕ್ಕೆ ಪ್ರಯತ್ನ ಮಾಡಿದವರು. ಅದರ ಜೊತೆಗೆ ಶಾಸಕರಾಗಿ, ರೈತರಿಗೆ ಮತ್ತು ಹಿಂದುಳಿದ ಜನಾಂಗದ ಸಲುವಾಗಿ ಒಳ್ಳೆಯ ಕಾರ್ಯವನ್ನು ಮಾಡಿದ್ದಾರೆ. ಅವರು ಕೇಂದ್ರ ರೇಷ್ಮೆ ಮಂಡಲಿಯ ಅಧ್ಯಕ್ಷರಾಗಿ ಏನು ಕೆಲಸ ಮಾಡಿದ್ದಾರೆ ಅದನ್ನು ಮೆಚ್ಚತಕ್ಕಂಥಾದ್ದು. ಆ ಎಲ್ಲಾ ವಿಚಾರಗಳು ಈಗಾಗಲೇ ಸದನದಲ್ಲಿ ತಿಳಿಸಿದ್ದಾರೆ. ಅವರು ರೈತ ಸಮಾಜದ ಬೆಳವಣಿಗೆಗೆ ಏನು ಕಾರ್ಯ ಮಾಡಿದ್ದಾರೆ ಅದನ್ನು ಸ್ಮರಿಸಿಕೊಳ್ಳಬೇಕಾಗುತ್ತದೆ. ಈಗಾಗಲೇ ಎಲ್ಲರೂ ಮಾನ್ಯ ನಂಜುಂಡಸ್ವಾಮಿಯವರು ಸಹ ಕರ್ನಾಟಕ ರಾಜ್ಯದಲ್ಲಿ ಮತ್ತು ರಾಷ್ಟ್ರ ಮಟ್ಟದಲ್ಲಿ ರೈತ ಚಳುವಳಿಗೆ ಬಹಳ ದೊಡ್ಡ ಪ್ರಾಮುಖ್ಯತೆಯನ್ನು ಕೊಟ್ಟವರು. ಚಳುವಳಿ ಇಷ್ಟೊಂದು ಬೆಳವಣಿಗೆ ಆಗಿ ಈ ರಾಜ್ಯದಲ್ಲಿ ಏನಾದರೂ ರಾಜಕೀಯ ಇಚ್ಛಾಸಕ್ತಿಯಿಂದ ರೈತರಿಗೆ ಅದರಲ್ಲೂ ಗ್ರಾಮೀಣ ಪ್ರದೇಶದ ಜನತೆಗೆ ಸಹಾಯ ಮಾಡುವಂತಹ ಯೋಜನೆಗಳು ಏನಾದರೂ ಬಂದಿದ್ದರೆ ಮಾನ್ಯ ನಂಜುಂಡಸ್ವಾಮಿ ಅವರ ಹೋರಾಟದ ಮೂಲಕ ಎಂದು ಹೇಳಬೇಕಾಗುತ್ತದೆ. ಏಕೆಂದರೆ ಅಸಂಘಟಿತವಾದಂಥ ರೈತ ಸಮುದಾಯವೇನಿದೆ, ರೈತ ಅಸಂಘಟಿತನಾಗಿರುವುದರಿಂದ ಅವರಿಗೆ ಸಂಘಟಿತವಾದಂಥ ಕಾರ್ಯವನ್ನು ರೈತ ಹೋರಾಟದ ಮೂಲಕ ಅವರು ಮಾಡಿದರು. ಇಷ್ಟೆ ಅಲ್ಲ ಅನೇಕ ಜನರಿಗೆ ಅವರು ತರಬೇತಿಯನ್ನು ಕೊಟ್ಟರು. ಬಹುಶಃ ರಾಜಕೀಯದಲ್ಲಿ ಯಾರಾದರೂ ಇವತ್ತು ಬೆಳೆದಿದ್ದರೆ, ಶಾಸಕರಾಗಿ, ಕೇಂದ್ರದಲ್ಲಿ ಮಂತ್ರಿಯಾಗಿ, ರಾಜ್ಯದಲ್ಲಿ ಸಹ ಶಾಸಕರಾಗಿ ಬೆಳೆದಿದ್ದರೆ ಅವರ ಉಪಕಾರವನ್ನು ಅವರು ಸ್ಮರಿಸಿಕೊಳ್ಳಬೇಕಾಗುತ್ತದೆ, ಅದು ಪ್ರೊಫೆಸರ್ ನಂಜುಂಡಸ್ವಾಮಿಯರ ಬಹು ದೊಡ್ಡ ಕೊಡುಗೆ. ಬಹುಶಃ ಅವರು ಪ್ರೊಫೆಸರ್ ಆಗಿ ಮತ್ತು ರಾಜಕಿಯ ವಿಷಯದಲ್ಲಿ ಅವರು ತಿಳಿದುಕೊಂಡಷ್ಟು, ರೈತರ ವಿಷಯವಾಗಿ ತಿಳಿದುಕೊಂಡಷ್ಟು ಗ್ರಾಮೀಣ ಅಭಿವೃದ್ಧಿ ಬಗ್ಗೆ ತಿಳಿದುಕೊಂಡಷ್ಟು ಬಹುಶಃ ಯಾರೂ ತಿಳಿದುಕೊಂಡಿರುವುದಿಲ್ಲ. ಅಷ್ಟೊಂದು ವಿಷಯವನ್ನು ಅವರು ತಿಳಿದುಕೊಂಡಿದ್ದರು ಎಂದು ಹೇಳಬೇಕಾಗುತ್ತದೆ. ಅವರು ಯಾವಾಗಲೂ ಹೋರಾಟದ ಪ್ರವೃತ್ತಿಯನ್ನು ಹೊಂದಿದ್ದರು. ಬಹುಶಃ ಡಂಕಲ್ ವಿಷಯವಾಗಿ ಬಹಳ ದೊಡ್ಡ ಹೋರಾಟವನ್ನು ಮಾಡಿದರು. ಜಂಟಿಕ್ ವಿಷಯದಲ್ಲಿ

ತಳಿಯ ಟ್ರೇಡ್ ಮಾಡುವಂಥ ವಿಷಯದಲ್ಲೇನು ಒಂದು ನೀತಿಯನ್ನು ತಂದರು. WTO ಮೇಲೆ, ಈ ಎಲ್ಲಾ ವಿಷಯಗಳ ಮೇಲೆ ಅವರು ಬಹಳ ದೊಡ್ಡ ಪ್ರಬಲವಾದಂಥ ಅಸ್ತ್ರವನ್ನು ಮತ್ತು ಅದರ ಮೂಲಕ ನಮ್ಮ ರಾಜ್ಯಕ್ಕೆ ರೈತ ಸಮುದಾಯಕ್ಕೆ ಆಗತಕ್ಕ ಅನ್ಯಾಯಕ್ಕೆ ಅವರು ಪ್ರಬಲವಾದಂಥ ಹೋರಾಟವನ್ನು ಮಾಡಿದರು. ಅವರಿಂದ ಅನೇಕ ಕಾರ್ಯಗಳು ಇವತ್ತು ರಾಜ್ಯದಲ್ಲಿ ರಾಷ್ಟ್ರದಲ್ಲಿ ರೈತರಿಗೆ ದೊರೆಕಿದೆ ಎಂಬ ವಿಚಾರವನ್ನು ಹೇಳಬೇಕಾಗುತ್ತದೆ. ಅಂಥ ಒಬ್ಬ ನಂಜುಂಡಸ್ವಾಮಿಯವರ ಆರೋಗ್ಯ ಸರಿಯಾಗಿಲ್ಲವೆಂದು ನನಗೆ ಗೊತ್ತಾದದ್ದು ಕಿದ್ವಾಯ್ ಆಸ್ಪತ್ರೆಯಲ್ಲಿ ಇದ್ದಾರೆ ಎಂದಾಗ ನಾನು ಹೋಗಿ ಅವರನ್ನು ಕಾಣುವಂಥ ಪ್ರಸಂಘ ಬಂತು. ಅವತ್ತೂ ಸಹ ನಾವು ಮಾತನಾಡಿದ್ದೇವೆ. ಇಷ್ಟೇ ಅಲ್ಲ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು ಎಂಬ ದೃಷ್ಟಿಯಿಂದ ಮತ್ತು ರಾಜಕೀಯವಾಗಿ ಸಹ ಈ ದೇಶಕ್ಕೆ ಸಾಕಷ್ಟು ಕೊಡುಗೆ ಅವರದ್ದು ಇದೆ ಎಂಬ ದೃಷ್ಟಿಯಿಂದ ಧಾರವಾಡದಲ್ಲಿ ಅಖಿಲ ಕರ್ನಾಟಕ ಕನ್ನಡ ಕೇಂದ್ರ ಕ್ರಿಯಾ ಸಮಿತಿಯ ಒಂದು ಕಾರ್ಯಕ್ರಮಕ್ಕೆ ಸ್ವಾತಂತ್ರ್ಯದಲ್ಲಿ ರಾಷ್ಟ್ರದ ಜನತೆಯ ಪಾಲುಗೊಳ್ಳುವಿಕೆ ಮತ್ತು ರಾಜ್ಯದಲ್ಲಿ ಜನತೆಯ ಪಾಲುಗೊಳ್ಳುವಿಕೆಯ ವಿಷಯವಾಗಿ ಸ್ವಾತಂತ್ರ್ಯದ ಬಗ್ಗೆ ಒಂದು ಗೋಷ್ಟಿಯನ್ನು ಇಟ್ಟುಕೊಂಡಿದ್ದೇವೆ. ಬರಬೇಕೆಂದು ವಿನಂತಿಸಿದಾಗ ಅವರು ಅನಾರೋಗ್ಯದಿಂದ ಒಪ್ಪಿಕೊಂಡಿದ್ದರು ಆ ಕಾರ್ಯಕ್ರಮಕ್ಕೆ ಬರಲು ಆಗಲಿಲ್ಲ. ಅವರು ಕಿದ್ವಾಯ್ ಆಸ್ಪತ್ರೆಯಲ್ಲಿ ಇದ್ದಾರೆ ಎಂದಾಗ, ನಿಮಗೆ ವಿಚಾರಗಳನ್ನು ಬರೆದು ಕಳಿಸಲು ಆಗದಿದ್ದರೂ ಸಹ ಒಂದು ಕ್ಯಾಸೆಟ್ ಮೂಲಕವಾದರೂ ನಿಮ್ಮ ವಿಚಾರಗಳನ್ನು ಕೊಡಿ, ನಾವು ಪುಸ್ತಕವನ್ನು ಮುದ್ರಣ ಮಾಡುತ್ತಿದ್ದೇವೆ, ನಿಮ್ಮ ಅಭಿಪ್ರಾಯಗಳನ್ನು ಮುದ್ರಣ ಮಾಡಬೇಕಾಗಿದೆ ನಿಮ್ಮ ಸಲಹೆಯನ್ನು ಕೊಡಿಯೆಂದು ಅವರನ್ನು ಪ್ರತ್ಯಕ್ಷವಾಗಿ ಕಂಡು ಕೇಳಿಕೊಂಡು ಬಂದಿದ್ದೆ ಆದರೆ ಆರೋಗ್ಯ ಸರಿಯಿಲ್ಲದ ಕಾರಣ ಅವರು ಇವತ್ತು ನಮ್ಮಿಂದ ಅಗಲಿದ್ದಾರೆ, ಆದ್ದರಿಂದ ಅವರ ಸಲುವಾಗಿ ರೈತರ ಮೂವ್‌ಮೆಂಟ್ ಬಗ್ಗೆ, ರೈತರ ಕಾರ್ಯಗಳ ಬಗ್ಗೆ ಅಭಿವೃದ್ಧಿಯ ಬಗ್ಗೆ ಈ ರಾಷ್ಟ್ರ ರೈತರಿಂದ ಕೂಡಿದಂಥ ರಾಷ್ಟ್ರ, ಗ್ರಾಮೀಣ ಪ್ರದೇಶದಿಂದ ಕೂಡಿದಂಥ ರಾಷ್ಟ್ರ ಬಹುಸಂಖ್ಯಾತ ಅಸಂಘಟಿತರಿಗೆ ಏನಾದರೂ ಧ್ವನಿ ಕೊಡಬೇಕಾಗಿದ್ದರೆ ಮಾನ್ಯ ನಂಜುಂಡಸ್ವಾಮಿಯವರ ಹೆಸರಿನ ಮೇಲೆ ಒಂದು ಪ್ರತಿಷ್ಟಾನವನ್ನು ಪ್ರಾರಂಭ ಮಾಡುವುದು ರಾಜ್ಯಸರ್ಕಾರಕ್ಕೆ ಬಹಳ ಅವಶ್ಯವಾಗಿತ್ತದೆಂದು ಹೇಳಬಯಸುತ್ತೇನೆ.

ಹಾಗೆಯೇ ಮಾನ್ಯ ವಾದಿರಾಜ್‌ರವರು ಒಬ್ಬ ಉತ್ತಮ ನಟರಾಗಿ, ಹಾಸ್ಯ ನಟರಾಗಿ ಕನ್ನಡ ರಂಗಭೂಮಿಗೆ ಅವರು ನೀಡಿದಂಥ ಬಹಳ ದೊಡ್ಡ ಕಾಣಿಕೆಯನ್ನು ಸ್ಮರಿಸಿಕೊಳ್ಳಬೇಕಾಗುತ್ತದೆ. ಅಂಥ ಹಾಸ್ಯ ನಟರು ಕನ್ನಡ ರಂಗಭೂಮಿಯಲ್ಲಿ ಇವತ್ತು ಇಲ್ಲ. ಅಂಥ ಉತ್ತಮವಾದ ನಟನೆಯ ಮೂಲಕ, ಅವರು ತಂದಂಥ ಅನೇಕ ಚಿತ್ರಗಳು, ಇಡೀ ರಾಜ್ಯಕ್ಕೆ ಕನ್ನಡ ಚಿತ್ರಲೋಖಕ್ಕೆ ಆದರ್ಶವಾದ ಚಿತ್ರಗಳನ್ನು ಅವರು ತಂದು ಈ ನಾಡಿಗೆ ಸೇವೆಯನ್ನು ಮಾಡಿದ್ದಾರೆ. ಅವರು ಸ್ವಾತಂತ್ರ್ಯದಲ್ಲೂ ಭಾಗವಹಿಸಿ ಈ ನಾಡಿಗೆ ಸೇವೆಯನ್ನು ಮಾಡಿದ್ದಾರೆ. ಅವರೂ ಸಹ ನಮ್ಮನ್ನು ಅಗಲಿದ್ದಾರೆ. ಚಿತ್ರಲೋಕಕ್ಕೆ ಅವರ ಅಗಲಿಕೆಯಿಂದ ಹಾನಿಯಾಗಿದೆ. ಒಬ್ಬರು ರಾಷ್ಟ್ರಭಕ್ತರ ಅಗಲಿಕೆಯಿಂದ ಈ ರಾಜ್ಯಕ್ಕೆ ರಾಷ್ಟ್ರಕ್ಕೆ ಹಾನಿಯಾಗಿದೆ. ಇವರೆಲ್ಲರ ಕುಟುಂಬದವರಿಗೆ ಅವರ ಅಗಲಿಕೆಯನ್ನು ಸಹಿಸುವಂತಹ ಶಕ್ತಿಯನ್ನು ದೇವರು ಕೊಡಲಿ. ಅಗಲಿದ ಎಲ್ಲಾ ಗಣ್ಯರಿಗೆ ನಮ್ಮ ಸಂತಾಪವನ್ನು ನೀಡಿ ಅವರು ನೀಡಿದಂಥ ಉತ್ತಮವಾದ ಕಾರ್ಯಗಳಲಿ ನಾವೂ ಸಹ ಈ ರಾಜ್ಯದ ಜನತೆಯ ಸೇವೆ ಮಾಡುವಲ್ಲಿ

ಪಾಲುಗೊಳ್ಳೋಣ ಎಂದು ಹೇಳುವ ಮೂಲಕ ಅವರುಗಳ ಆತ್ಮಕ್ಕೆ ಶಾಂತಿಯನ್ನು ನೀಡಲಿ ಎಂದು ಏಳಿ ನನಗೆ ಮಾತನಾಡಲು ತಾವು ಅವಕಾಶ ಮಾಡಿಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ.ಆರ್. ಯಾವಗಲ್ (ನರಗುಂದ) :– ಮಾನ್ಯ ಅಧ್ಯಕ್ಷರೆ, ತಾವು ತಂದಿರುವಂಥ ಸಂತಾಪ ಸೂಚನೆಯನ್ನು ಬೆಂಬಲಿಸುತ್ತಾ ದಿವಂಗತ ನಾಗೇಗೌಡರು ಮಂತ್ರಿಗಳಾಗಿ, ವಿಧಾನ ಪರಿಷತ್ತಿನ ಸದಸ್ಯರಾಗಿ ನಮ್ಮ ಜೊತೆ ಕೆಲಸ ಮಾಡಿದಂಥವರು. ಇವರು ನೀರಾವರಿ ಸಚಿವರಾಗಿ ಬಹಳ ದೊಡ್ಡ ಕೊಡುಗೆಯನ್ನು ಉತ್ತರ ಕರ್ನಾಟಕದ ಭಾಗಕ್ಕೆ, ಉತ್ತರ ಕರ್ನಾಟಕದ ಭಾಗದಲ್ಲಿ ಇದ್ದಂಥ ಅನೇಕ ಯೋಜನೆಗಳಿಗೆ ಬಹಳಷ್ಟು ಚಾಲನೆ ನೀಡುವ ಮೂಲಕ, ಹಣವನ್ನು ಒದಗಿಸುವ ಮೂಲಕ ಒತ್ತನ್ನು ಕೊಡುವ ಮೂಲಕ, ಅನೇಕ ಸಂದರ್ಭಗಳಲ್ಲಿ ನಾವು ನೋಡುತ್ತೇವೆ, ಎಲ್ಲಾ ಕೆಲಸಗಳು ಬೆಂಗಳೂರಿನಿಂದ ಪತ್ರಿಕೆಗಳ ಮೂಲ, ನಿರ್ದೇಶನಗಳ ಮೂಲಕ ಆಗುವಂಥ ಸಂದರ್ಭವನ್ನು ನೋಡುತ್ತೇವೆ. ಆದರೆ, ಇವರು ಒಂದು ರೀತಿ ವಿಭಿನ್ನವಾದಂಥ ವ್ಯಕ್ತಿಗಳಾಗಿದ್ದರು. ಬಹಳಷ್ಟು ಪ್ರವಾಸವನ್ನು ಮಾಡುತ್ತಿದ್ದರು, ಚಾಲನೆ ಕೊಡುತ್ತಿದ್ದರು, ಅದು ಅವರ ದೊಡ್ಡ ಗುಣ. ಅವರು ಬಹಳ ಮುಕ್ತಮನಸ್ಸಿನವರಾಗಿದ್ದರು, openminded ಆಗಿದ್ದರು. ಬಹಳ positive approach ಅವರದ್ದಾಗಿತ್ತು. ಆದ್ದರಿಂದ ಅವರು ಪಶುಸಂಗೋಪನಾ ಸಚಿವರಾಗಿ ಮತ್ತು ನೀರಾವರಿ ಸಚಿವರಾಗಿ ರಾಜ್ಯಕ್ಕೆ ಬಹಳ ದೊಡ್ಡ ಕೊಡುಗೆಯನ್ನು ನೀಡಿದ್ದಾರೆ. ಬಹಳ ಮುಖ್ಯವಾಗಿ ಮಾನ್ಯ ನಂಜುಂಡಸ್ವಾಮಿಯವರ ಬಗ್ಗೆ ಒಂದೆರಡು ಮಾತನ್ನು ಹೇಳಲು ಬಯಸುತ್ತೇನೆ. ತಮಗೆ ನೆನಪು ಇರಬಹುದು. 1980ರ ದಶಕದಲ್ಲಿ ನರಗುಂದ ನವಲಗುಂದದಿಂದ ಪ್ರಾರಂಭವಾದಂಥ ರೈತರ ಚಳುವಳಿ ರಾಜ್ಯವ್ಯಾಪಿ ಬಹಳ ದೊಡ್ಡ ಪ್ರಮಾಣದಲ್ಲಿ ಹರಡಿತು. ಅಷ್ಟೇ ಅಲ್ಲ ಅದು ಜನರಲ್ಲಿ ಒಂದು ರೀತಿಯ ಜಾಗ್ರತೆಯನ್ನು ಮತ್ತು ವ್ಯವಸ್ಥೆಯ ವಿರುದ್ಧ ಸಿಟ್ಟನ್ನು ಹಬ್ಬಿಸಿದಂಥ ಬಹಳ ದೊಡ್ಡ ಪ್ರಮಾಣದ ಚಳುವಳಿ ಅದಾಗಿತ್ತು. ಆಗಿರುವಂಥ ಪರಿಸ್ಥಿತಿಯನ್ನು ಸಂಪೂರ್ಣವಾಗಿ ಅದನ್ನು ಒಂದು ಸಂಘಟಿತವಾದಂಥ ವ್ಯವಸ್ಥೆಗೆ ತರುವಲ್ಲಿ ಅವರ ಪಾತ್ರ ಬಹಳ ದೊಡ್ಡದು ಇದೆಯೆಂದು ನಾನು ನೆನೆಯಬಯಸುತ್ತೇನೆ. ನನಗೂ ಅವರಿಗೂ, ನಮ್ಮ ಮಲಪ್ರಭಾ ಹೋರಾಟ ಸಮಿತಿಗೂ ಅವರಿಗೂ ಅಷ್ಟಾಗಿ ಹೊಂದಾನಿಕೆ ಇಲ್ಲದಿದ್ದರೂ ನೋಡುವ ದೃಷ್ಟಿ ಬದಲಾವಣೆ ಇದ್ದರೂ ಅವರ ಒಂದು ದೊಡ್ಡ ದೊಡ್ಡ ಕೊಡುಗೆ ಈ ರಾಜ್ಯಕ್ಕೆ ಮತ್ತು ದೇಶಕ್ಕೆ ಎಂದರೆ ಈ ರೈತರ ಹೋರಾಟಕ್ಕೆ ರೈತರ ಸಮುದಾಯಕ್ಕೆ ಒಂದು ರೀತಿ ಅಸಂಘಟಿತರಾದಂಥ ಆ ಸಂದರ್ಭಕ್ಕೆ ಅನುಗುಣವಾಗಿ ಪ್ರತಿಕ್ರಿಯೆಯ ರೂಪದಲ್ಲಿ ಬಂದಂಥ ಈ ಚಳುವಳಿಯನ್ನು ಒಂದೇ ವೇದಿಕೆಯಲ್ಲಿ ತರುವಂತೆ ಅವರೂ ಸಹ ಶಿವಮೊಗ್ಗ ಕಬ್ಬು ಬೆಳೆಗಾರರ ಸಂಘದ ಒಬ್ಬ ಸದಸ್ಯರಾಗಿ ಬಂದರು. ರುದ್ರಪ್ಪನವರು ಏನು ನೇತೃತ್ವವನ್ನು ಹೊಂದಿದ್ದರು ಆ ಸಂಘದಿಂದ ಅವರೂ ಪಾತಿನಿಧಿಕವಾಗಿ ಬಂದರು. ತದನಂತರದಲ್ಲಿ ಆ ಸಂಘಟನೆಯನ್ನು ಒಂದು ರೀತಿಯಲ್ಲಿ ಬಹಳ ವ್ಯವಸ್ಥಿತವಾಗಿ ಬೆಳೆಸಿದರು ಎಂದು ಹೇಳಿದರೆ ತಪ್ಪಾಗಲಾರದು. ನಮ್ಮ ಸಂಘಟನೆಗು ಅವರ ಸಂಘಟನೆಗೂ ಬಹಳಷ್ಟು ಜನ ವಿರೋಧ ಬಂತು. ನಾವೆಲ್ಲಾ ಪ್ರತ್ಯೇಕವಾದಿಗಳು. ಆದರೆ ಅವರು ಅದನ್ನು ನಡೆಸಿಕೊಂಡು ಹೋದರು. ಹಲವಾರು ಸಂದರ್ಭಗಳಲ್ಲಿ ಅವರ ದ್ವಂದ್ವ ರೀತಿಯಿಂದಾಗಿ ಅದು ಅನೇಕ ಬಾರಿ ಒಡೆದು ಹೋಗಿ ಛಿದ್ರವಾಯಿತು. ಅದು ಅವರ ಅನೇಕ ಸಂಗಾತಿಗಳು ಅವರನ್ನು ಬಿಟ್ಟು ಹೋದರು. ಅವರು ಒಂದು ರೀತಿ

(† ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಸರ್ವಾಧಿಕಾರವನ್ನೂ ನಡೆಸುತ್ತಿದ್ದರು. ಅದರಲ್ಲಿ ಎರಡು ಮಾತು ಇಲ್ಲ. ಅದು ಸ್ವಲ್ಪ ರೀತಿಯಿಂದ ಅಷ್ಟು ಸಶಕ್ತವಾಗಿ ಉಳಿಯಲಿಲ್ಲ. ಈ ದೇಶದ ರೈತ ಸಮುದಾಯಕ್ಕೆ ಮತ್ತು ರೈತರ ಹಿತಕ್ಕೆ ಬಹಳ ದೊಡ್ಡ ಎರಡು ಕೊಡುಗೆಗಳನ್ನು ಅವರು ಕೊಟ್ಟರು. ಸ್ನೇಹಿತರು ಹೇಳಿದಂತೆ, ಅದನ್ನು ಒಂದು ತಾರ್ಕಿಕ ಮಟ್ಟಕ್ಕೆ ಆ ಹಂತಕ್ಕೆ ಒಯ್ಯಾಲಿಕ್ಕೆ ಅವರು ಎಲ್ಲಾ ಸಂದರ್ಭದಲ್ಲೂ ಕಾರಣರಾದರು ಎಂಬುದು ಇಪ್ಪತ್ತು ಇಪ್ಪತ್ತೈದು ವರ್ಷಗಳ ಕಾಲ ದೀರ್ಘಕಾಲದಲ್ಲಿ ಅವರು ಅದಕ್ಕೆ ಅಂಟಿಕೊಂಡು ಬಂದದ್ದು ಮಾತ್ರವಲ್ಲ. ಅವರು ಒಂದು ರೀತಿಯಾಗಿ ಗೌರವಯುತವಾಗಿ ಆ ವರ್ಗದ ಬಗ್ಗೆ ಗೌರವವನ್ನು ತಂದು ಕೊಡುವುದು ಮತ್ತು ಯಾವುದೇ ಮುಖ್ಯವಾದ ವಿಷಯಗಳನ್ನು ನಾವು ಇನ್ನು ಮುಂದೆ ಎಳೆದುಕೊಂಡು ಹೋಗಲು ಸಾಧ್ಯವಿಲ್ಲ ಎನ್ನುವಂಥ ಸಂದರ್ಭದಲ್ಲೂ ಸಹ ಬಹಳ ಬುದ್ಧಿವಂತಿಕೆಯಿಂದ, ಬಹಳ ಪರಿಣತಿಯನ್ನು ಪಡೆದಿರುವಂಥ, ಬಹಳಷ್ಟು ಅಧ್ಯಯನ ಮಾಡಿದಂಥ, ಆರ್ಥಿಕ ವಿಷಯ, ಕಾನೂನಿನ ವಿಷಯದಲ್ಲಿ ಇರಬಹುದು, ರೈತರ ವಿಷಯದಲ್ಲಿರಬಹುದು, ಬಹಳ ಮೇಲ್ಮಟ್ಟದ ಮೇಧಾವಿತನವನ್ನು ಹೊಂದಿದ್ದಂಥ ಅವರು ಅದನ್ನು ಎಳೆದುಕೊಂಡು ಹೋಗಿ ಅದಕ್ಕೆ ಒಂದು ರೂಪವನ್ನು ಕೊಡುವಂಥ ಒಂದು ಶಕ್ತಿಯನ್ನು ಪಡೆದಿದ್ದರು ಎಂದು ಹೇಳಿದರೆ ತಪ್ಪಾಗುವುದಿಲ್ಲ. ಉದಾಹರಣೆಗೆ, ಆವತ್ತು ಡಂಕಲ್ ಎಂದು ಏನು ಹೇಳಿದ್ದರು, ಗ್ಯಾಟ್ ಒಪ್ಪಂದದ ವಿರೋಧವಾಗಿ ಬಹಳ ದೊಡ್ಡ ಹೋರಾಟವನ್ನು ಅವರು ಪ್ರಾರಂಭ ಮಾಡಿದ್ದರು. ರಾಜಕೀಯ ಸಂಘಟನೆಗಳು, ವಿರೋಧ ಪಕ್ಷದವರು ಕೇವಲ ಅದರ ವಿರೋಧಕ್ಕಾಗಿ ಮಾತ್ರ ಮಾಡಿದ್ದರು. ಆದರೆ ಅವರು ಅದನ್ನು ನಿಜವಾಗಿಯೂ ನಿಯತ್ತಿನಿಂದ ಮಾಡುವಂಥ ಕೆಲಸವನ್ನು ಮಾಡಿದ್ದಲ್ಲದೆ ಆವತ್ತು ಏನೇನು ಎಚ್ಚರಿಕೆಗಳನ್ನು ನೀಡಿದ್ದರು ಇವತ್ತು ಬಹತೇಕ ಅವೆಲ್ಲಾ ನಿಜವಾಗುವಂಥ ಸಂದರ್ಭ ಬರುತ್ತಿದೆ. ಅದು ಗ್ಯಾಟ್ ಬಗ್ಗೆ ಇರಬಹುದು, ಅಥವಾ ಎಂಎನ್‌ಸಿ ಬಗ್ಗೆ ಇರಬಹುದು, ತಮಗೆ ನೆನಪು ಇರಬಹುದು, ಕೆ.ಎಫ್.ಸಿಗೆ ಹೋಗಿ ಅಲ್ಲೆಲ್ಲಾ ಕಿತ್ತು ಹಾಕಿರುವುದಾಗಲಿ, ಅಥವಾ ಬಿಟಿ ಕಾಟನ್ ಗಿಡಗಳನ್ನು ಕಿತ್ತು ಹಾಕುವುದಾಗಿರಬಹುದು, ಅಥವಾ ಕಾರ್ಗಿಲ್ ಕಛೇರಿಗೆ ಹೋಗಿ ಧಾಂದಲೆ ಮಾಡಿರುವುದಾಗಿರಬಹುದು, ಅದು ಎಷ್ಟೇ ಅಸಂಬದ್ಧವೆಂದು ಅನ್ನಿಸಿದ್ದರು ಅದನ್ನು ಕೊನೆ ಹಂತಕ್ಕೆ ತೆಗೆದುಕೊಂಡು ಹೋಗುತ್ತೇನೆ ಎನ್ನುವಂಥ ಗಡಸುತನ ಎದೆಗಾರಿಕೆ ಅವರಲ್ಲಿ ಇತ್ತು ಎಂದು ಹೇಳುವುದರಲ್ಲಿ ಎರಡು ಮಾತಿಲ್ಲ.

12.50 ಪಿಎಂ

ಏನೇ ಆದರೂ ಇವತ್ತು ಏನೋ ನಮ್ಮನ್ನು ಎಲ್ಲಾ ಕಡೆಯಿಂದಲೂ ಆವರಿಸಿರುವಂತಹ ವಿಶ್ವ ವ್ಯಾಪಾರ ಮಾರುಕಟ್ಟೆ ವ್ಯವಸ್ಥೆ ಅದರ ವಿರುದ್ಧ ರೈತರನ್ನು ನಾವು ಹೇಗೆ ರಕ್ಷಣೆಯನ್ನು ಮಾಡಿಕೊಳ್ಳಬೇಕು. ಆತನು ಏನು ತೊಂದರೆಗೆ ಈಡಾಗುತ್ತಾನೆ. ಎನ್ನುವುದರ ಬಗ್ಗೆ ಬಹಳ ಒತ್ತು ಕೊಟ್ಟು ಅವರ ವಿಷಯವನ್ನು ಮೇಲ್ಮಟ್ಟಕ್ಕೆ ತಂದರು. ರೈತ ಸಂಘಟನೆಯನ್ನು ಎಲ್ಲಾ ಪಕ್ಷಗಳಿಂದ ದೂರ ಒಯ್ದು, ಇದು ಬಹಳ ಐತಿಹಾಸಿಕ ಸತ್ಯ, ಆ ಒಂದು ಸಂದರ್ಭದಲ್ಲಿ ಬಹುತೇಕ ಪಕ್ಷಗಳು ಅದನ್ನು ಹಿಡಿದುಕೊಳ್ಳಬೇಕೆಂದು ಪ್ರಯತ್ನವನ್ನು ಮಾಡಿದರು. ಎಲ್ಲದರಿಂದ ಅದನ್ನು ದೂರವಿಟ್ಟ ಕೀರ್ತಿ ಅವರಿಗೆ ಸಲ್ಲುತ್ತದೆ. ಅದು ಅಷ್ಟಕ್ಕೆ ಮುಗಿಯಲಿಲ್ಲ. ಅಧ್ಯಕ್ಷರೆ, ಇದು ಮುಂದೆ ಹೋಗುವಂತಹ ಒಂದು ಪ್ರಯತ್ನಕ್ಕೆ ಅವರು ಹಾಕಿಕೊಟ್ಟಂತಹ ಬುನಾದಿ ಅದು ಅನುಕೂಲವಾಗುತ್ತದೆ; ಎನ್ನುವಂತಹ ಮಾತನ್ನು ಹೇಳುತ್ತೇನೆ. ಇನ್ನೊಬ್ಬರು ಮುನಿರಾಜು ಹಾಗೂ ವಾದಿರಾಜ್ ಇರಬಹುದು ಅವರುಗಳ

ಆತ್ಮಕ್ಕೆ ಮತ್ತು ಇವರೆಲ್ಲರಿಗೂ ಭಗವಂತನು ಶಾಂತಿಯನ್ನು ನೀಡಲೆಂದು ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) :- ಸನ್ಮಾನ್ಯ ಅಧ್ಯಕ್ಷರೆ, ಈ ಸಭೆಯಲ್ಲಿ ಮಂಡಿಸಿರತಕ್ಕಂತಹ ಸಂತಾಪ ಸೂಚಕನಿರ್ಣಯಕ್ಕೆ ಸಹಮತವನ್ನು ವ್ಯಕ್ತಪಡಿಸುತ್ತಾ ಅಗಲಿರತಕ್ಕಂತಹ ಚೇತನಗಳಿಗೆ ನನ್ನ ಗೌರವಪೂರ್ವಕ ನಮನಗಳನ್ನು ಅರ್ಪಿಸುತ್ತೇನೆ. ದಿವಂಗತ ನಾಗೇಗೌಡರವರು ನಮ್ಮ ಜಿಲ್ಲೆಯವರು, ಮೂರು ದಶಕಗಳ ಕಾಲ ರಾಜ್ಯಕ್ಕೆ ಮತ್ತು ಜಿಲ್ಲೆಗೆ ಅನುಪಮ ಸೇವೆಯನ್ನು ಸಲ್ಲಿಸಿದ್ದಾರೆ. ನೀರಾವರಿ ಹಾಗೂ ಪಶುಸಂಗೋಪನಾ ಸಚಿವರಾಗಿದ್ದರು. ಬಹಳ ಉಪಯುಕ್ತವಾದಂತಹ ಸೇವೆಯನ್ನು ಸಲ್ಲಿಸಿದ್ದಾರೆ. ಇವರು ನೀರಾವರಿ ವಿಚಾರದಲ್ಲಿ ಬಹಳ ಅಳವಾದ ಪರಿಶ್ರಮವನ್ನು ಉಳ್ಳಂತಹ ವ್ಯಕ್ತಿಯಾಗಿದ್ದರು. ಬಹಳ ಅಧ್ಯಯನ ಶೀಲರಾಗಿದ್ದರು, ಕೃಷ್ಣಾ ಮತ್ತು ಕಾವೇರಿ ಜಲಾನಯನ ಪ್ರದೇಶದಲ್ಲಿ ಅನೇಕ ನೀರಾವರಿ ಕಾಮಗಾರಿಗಳಿಗೆ ಚಾಲನೆಯನ್ನು ನೀಡಿ, ನೀರಾವರಿ ವಿಚಾರದಲ್ಲಿ ಹೆಚ್ಚು ಆಸಕ್ತಿಯನ್ನು ಸಲ್ಲಿಸಿರತಕ್ಕಂತಹ ವ್ಯಕ್ತಿಯಾಗಿದ್ದರು. ನಮ್ಮ ಜಿಲ್ಲೆಯಲ್ಲಿಯೂ ಕೂಡ ಈ ಒಂದು ಆಧುನೀಕರಣ ಕಾಮಗಾರಿಗೆ ಚಾಲನೆಯನ್ನು ನೀಡಿರತಕ್ಕಂತಹ ವ್ಯಕ್ತಿಗಳು ಇವರಿಗೆ ನಾನು ನಮ್ಮ ಜಿಲ್ಲೆಯ ಪರವಾಗಿ ಹಾಗೂ ನಮ್ಮ ಶಾಸಕರುಗಳ ಪರವಾಗಿ ನನ್ನ ನಮಗಳನ್ನು ಅರ್ಪಿಸುತ್ತೇನೆ. ಹಾಗೆಯೇ ಶ್ರೀ ಎಂ.ಡಿ ನಂಜುಂಡಸ್ವಾಮಿಯವರು ರೈತ ಸಂಘದ ನಾಯಕರಾಗಿದ್ದರು, ರೈತ ಸಮುದಾಯಕ್ಕೆ ಹೊಸ ಆಯಾಮವನ್ನು ಕೊಟ್ಟಿರುವಂತಹವರು ಆಗಿದ್ದರು. ನಮ್ಮ ಜಿಲ್ಲೆಯಲ್ಲಿ ಬಹಳ ಹಾಸುಹೊಕ್ಕಾಗಿ ರೈತ ಪರ ಸಂಘಟನೆಯಲ್ಲಿ ಚಳುವಳಿಯಲ್ಲಿ ಭಾಗವಹಿಸಿದ್ದರು, ನಾನೂ ಕೂಡ ಅವರೊಟ್ಟಿಗೆ ಅನೇಕ ಚಳುವಳಿಗಳಲ್ಲಿ ಭಾಗವಹಿಸತಕ್ಕಂತಹ ಸದಾವಕಾಶವಿತ್ತು ರೈತರಿಗೆ ಉತ್ತಮವಾದ ಬೆಲೆಯು ಸಿಗಬೇಕು ವೈಜ್ಞಾನಿಕ ತಳಹದಿಯ ಮೇಲೆ ಬೆಲೆಗಳನ್ನು ನಿಗದಿಮಾಡಬೇಕು ಎನ್ನತಕ್ಕಂಥದ್ದನ್ನು ಅವರ ಏಕಮೇವ ಉದ್ದೇಶವಾಗಿತ್ತು. ಅವರು ಉತ್ತಮ ವಾಗ್ಮಿಗಳು ಮತ್ತು ಪ್ರಾಜ್ಞರಾಗಿದ್ದರು. ಅವರೊಟ್ಟಿಗೆ ನಾನು ವಿಧಾನಸಭಾ ಸದಸ್ಯನಾಗಿ, ಕಾರ್ಯ ನಡೆಸುವಂತಹ ಸದಾವಕಾಶ ನನಗೆ ಒದಗಿತ್ತು. ಅವರು ಇವತ್ತು ನಮ್ಮನ್ನು ಅಗಲಿದ್ದಾರೆ. ಅವರಿಗೂ ಸಹ ನನ್ನ ನಮನಗಳನ್ನು ಅರ್ಪಿಸುತ್ತಾ ಹಾಗೂ ಮುನಿರಾಜುರವರಿಗೂ ಕೂಡ ನನ್ನ ಒಟ್ಟಿಗೆ ಅವರು ಶಾಸಕರಾಗಿದ್ದರು, ಹಾಗೂ ಹಿರಿಯರಾಗಿದ್ದರು ಈ ಒಂದು ರೇಷ್ಮೆ ಕೃಷಿಗೆ ತುಂಬಾ ಪರಿಶ್ರಮವನ್ನು ಕೊಟ್ಟು ಅದರಲ್ಲಿ ನವಿನ್ಯತೆಯನ್ನು ತರಬೇಕೆಂದು ರೈತರಿಗೆ ಉಪಯುಕ್ತವಾದಂತಹ ವಿಚಾರಗಳನ್ನು ಅವರ ಗಮನಕ್ಕೆ ತರುತ್ತಿದ್ದವರು, ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಶ್ರಮಿಸತಕ್ಕಂತಹ ವ್ಯಕ್ತಿಯಾಗಿದ್ದರು. ಇವರಿಗೂ ಸಹ ನಾನು ನನ್ನ ಗೌರವವನ್ನು ಸಲ್ಲಿಸುತ್ತಾ ಶ್ರೀ ವಾದಿರಾಜ್‌ರವರೂ ಕೂಡ ಚಲನಚಿತ್ರರಂಗದಲ್ಲಿ ಒಬ್ಬ ಮೇರು ನಟರಾಗಿದ್ದರು. ಅವರು ಕೂಡ ನಮ್ಮನ್ನು ಅಗಲಿದ್ದಾರೆ. ಇವರೆಲ್ಲರೂ ಕುಟುಂಬಕ್ಕೂ ಕೂಡ ಅವರ ಅಗಲಿಕೆಯ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಪರಮಾತ್ಮನ್ನು ಕೊಡಲೆಂದು ಆಶಿಸಿ ತಾವು ನನಗೆ ಮಾತನಾಡುವುದಕ್ಕಾಗಿ ಅವಕಾಶವನ್ನು ಕೊಟ್ಟಿದ್ದೀರಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :- ಮಾನ್ಯ ಸದಸ್ಯರೆಲ್ಲರೂ ದಿವಂಗತರುಗಳಿಗೆ ಗೌರವ ಸೂಚಿಸುವ ಸಲುವಾಗಿ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(† ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು :- ಈ ಸದನವ ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರುಗಳ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು. ಈಗ ಮುಂದಿನ ಕಾರ್ಯಕ್ರಮ ಸಭೆಯ ಮುಂದಿಡಲಾಗುವ ಕಾಗದಪತ್ರಗಳು.

2. ಸಭೆಯ ಮುಂದಿಡಲಾದ ಕಾಗದ ಪತ್ರಗಳು

(ಮೂರನೇ ಪಟ್ಟಿ)

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :- ಮಾನ್ಯ ಅಧ್ಯಕ್ಷರೆ,

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ) :- ಪರವಾಗಿ,

1978ರ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮ 8(3)ರ ಪ್ರಕರಣ ಮೇರೆಗೆ :

1. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯಲ್ಲಿ ಭಾರತ ಜನ ಸಂಖ್ಯಾ ಯೋಜನೆಯಡಿಯಲ್ಲಿ ದಿನಾಂಕ 01.04.1984 ರಿಂದ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿದ್ದ 'ಸಿ' ಮತ್ತು 'ಡಿ' ದರ್ಜೆಯ ನೌಕರರ ಸೇವೆಯನ್ನು ಸಕ್ರಮತಿಗೊಳಿಸಲು 2003ರ ವಿಶೇಷ ನಿಯಮಗಳನ್ನು ರಚಿಸಿ ದಿನಾಂಕ 16.12.2003ರಂದು ಹೊರಡಿಸಲಾದ ಸಿಆಸುಇ:52:ಎಸ್ಆರ್‌ಡಿ: 2002ನೇ ಸಂಖ್ಯೆಯ ಅಧಿಸೂಚನೆ;

2. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 214 ಮತ್ತು 215 – ಎಗೆ ತಿದ್ದುಪಡಿ ಮಾಡಿ ದಿನಾಂಕ 11.11.2003ರಂದು ಹೊರಡಿಸಲಾದ ಆಇ:08: ಸನಿತಿ: 2002ನೇ ಸಂಖ್ಯೆಯ ಅಧಿಸೂಚನೆ;

3. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 235, 416 ಮತ್ತು 417ಕ್ಕೆ ತಿದ್ದುಪಡಿ ಮಾಡಿ ದಿನಾಂಕ 10.10.2003ರಂದು ಹೊರಡಿಸಲಾದ ಆಇ:10:ಸನಿತಿ:2001ನೇ ಸಂಖ್ಯೆಯ ಅಧಿಸೂಚನೆ;

2002ರ ಕರ್ನಾಟಕ ಆರ್ಥಿಕ ಹೊಣೆಗಾರಿಕೆಯ ಅಧಿನಿಯಮ 8ರ ಪ್ರಕರಣದ ಮೇರೆಗೆ :

4. 2003ರ ಕರ್ನಾಟಕ ಆರ್ಥಿಕ ಹೊಣೆಗಾರಿಕೆ ನಿಯಮಾವಳಿಗಳನ್ನು ರಚಿಸಿ ದಿನಾಂಕ 10.12.2003ರಂದು ಹೊರಡಿಸಲಾದ ಆಇ:05:ಪಿಎಂಯು:2003ನೇ ಸಂಖ್ಯೆಯ ಅಧಿಸೂಚನೆ;

1957ರ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಯ ಕಲಂ 39ರ ಪ್ರಕರಣದ ಮೇರೆಗೆ :

5. 1957ರ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಯಡಿಯಲ್ಲಿ ಹೊರಡಿಸಲಾಗಿದ್ದ ಈ ಕೆಳಕಂಡ ಅಧಿಸೂಚನೆಗಳನ್ನು ರದ್ದುಪಡಿಸಿ

1. ಎಫ್‌ಡಿ: 73 : ಸಿಎಸ್ಎಲ್:99(1) ದಿನಾಂಕ 23.8.1999
2. ಎಫ್‌ಡಿ: 73 : ಸಿಎಸ್ಎಲ್: 99(2) ದಿನಾಂಕ 23.8.1999
3. ಎಫ್‌ಡಿ: 1 : ಸಿಎಸ್ಎಲ್ : 97(4) ದಿನಾಂಕ 25.1.1997
4. ಎಫ್‌ಡಿ: 1 : ಸಿಎಸ್ಎಲ್ : 97(5) ದಿನಾಂಕ 25.1.1997
5. ಎಫ್‌ಡಿ: 1 : ಸಿಎಸ್ಎಲ್ : 97(6) ದಿನಾಂಕ 25.1.1997